
ಸಂಪುಟ 22 ಸಂಚಿಕೆ 31
ಜುಲೈ 30, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ




ಬಾಂಬ್ ಸ್ಫೋಟ ಯಾರ ಕೈವಾಡ?



ಮುಳುಗುತ್ತಿರುವ 'ಟೈಟಾನಿಕ್'

ನೇಕಾರರ ಸಂಕಟ



ಶಿಕ್ಷಣವೋ ಶಿಕ್ಷೆಯೋ?

ಅಸಂಘಟಿತ
ಕಾರ್ಮಿಕರ
ಸಾರ್ವಜನಿಕ ವಲಯದ
ರಕ್ಷಣೆಗೆ ಪಣ

ಮುಖ್ಯಮಂತ್ರಿಗಳಿಗೆ ಕೃಷಿಕೂಲಿಕಾರರ ಮನವಿ

ಕೃಷಿಕೂಲಿಕಾರರಿಗೆ ಕರ್ನಾಟಕ ರಾಜ್ಯ ಸರ್ಕಾರ ರೂ.51ನ್ನು ಹಾಗೂ ಎರಡು ಪೈಸೆ ತುಟ್ಟಿಭತ್ಯೆಯನ್ನು ಕನಿಷ್ಟ ಕೂಲಿ ಕಾನೂನಿನ ಪ್ರಕಾರ ನಿಗದಿಗೊಳಿಸಿದೆ. ಆದರೆ ಪರಿಸ್ಥಿತಿ ಇದಕ್ಕೆ ಪೂರ್ಣ ವಿರುದ್ಧವಾಗಿದೆ. ಬೆಂಗಳೂರು, ಮಂಗಳೂರು ನಗರ ಹೊರ ವಲಯವನ್ನು ಹೊರತುಪಡಿಸಿ ಉಳಿದೆಡೆ ಕನಿಷ್ಟ ಕೂಲಿಯೂ ಇಲ್ಲದೆ ಕೆಲಸವೂ ದೊರೆಯದೆ ಕೂಲಿಕಾರರ ಪರಿಸ್ಥಿತಿ ಚಿಂತಾಜನಕವಾಗಿದೆ. ವರ್ಷದ ಕೆಲವು ಅವಧಿಗಳಲ್ಲಿ ಮಾತ್ರ ಕೆಲಸ ಲಭ್ಯವಿದ್ದು, ಒಣ ಬೇಸಾಯದ ಪ್ರದೇಶಗಳಲ್ಲಿ ಮಹಿಳೆಯರಿಗೆ ಕೇವಲ 10 ರೂಪಾಯಿ ಮತ್ತು ಪುರುಷರಿಗೆ ಹದಿನೈದು ರೂಪಾಯಿ ಕೂಲಿ ಸಿಗುತ್ತಿದೆ. ಕೆಲವೊಂದು ಬೆಳೆಗಳ ಕೊಯ್ಲು ಮೊದಲಾದ ಕೆಲಸಗಳಿಗೆ ಶ್ರೀಮಂತ ರೈತರು ಆಧುನಿಕ ಯಂತ್ರಗಳನ್ನು ಬಳಸಲು ಆರಂಭಿಸಿರುವ ಕಡೆಗಳಲ್ಲಿ ಕೃಷಿಕೂಲಿಕಾರರಿಗೆ ಕೆಲಸ ಇಲ್ಲದಂತಾಗಿದೆ. ಕಳೆನಾಶಕಗಳನ್ನು ಬಳಸಲಾಗುತ್ತಿರುವುದರಿಂದ ಕೃಷಿಕೂಲಿಕಾರರಿಗೆ ಸಿಗುತ್ತಿದ್ದ ಕೆಲಸದ ಅವಕಾಶಗಳು ಗಣನೀಯವಾಗಿ ಕಡಿತಗೊಂಡಿದೆ.

ಕೇಂದ್ರ ಸರ್ಕಾರದ ಉದಾರೀಕೃತ ಆಮದು ನೀತಿಯಿಂದಾಗಿ ತೆಂಗು, ಅಡಿಕೆ, ರಬ್ಬರ್, ರೇಷ್ಮೆ, ಹತ್ತಿ, ಸಕ್ಕರೆ, ಎಣ್ಣೆ, ತೊಗರಿ ಮೊದಲಾದ ಕೃಷಿ ಉತ್ಪನ್ನಗಳ ಜೊತೆಯಲ್ಲಿ ಹೈನು ಉತ್ಪನ್ನಗಳು ಸಹ ವಿದೇಶಗಳಿಂದ ಹರಿದು ಬರುತ್ತಿರುವುದರಿಂದ ಮತ್ತು ಈ ಸರಕುಗಳು ವಿಶೇಷ ಸುಂಕ ರಿಯಾಯಿತಿಗಳನ್ನು ಪಡೆದು ಒಡ್ಡುವ ಸ್ಪರ್ಧೆಯನ್ನು ಎದುರಿಸಲಾರದೆ, ಹಾಕಿದ ಬಂಡವಾಳ ಹಿಂತಿರುಗದಂತಾಗಿ, ತಂದ ಸಾಲ ತೀರಿಸಲಾಗದೆ, ಕುಟುಂಬದ ಮಾನ ಮರ್ಯಾದೆ ಹರಾಜಾಗುತ್ತಿರುವುದನ್ನು ಸಹಿಸಲಾಗದೆ ನಮ್ಮ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ರೈತರು ದಿವಾಳಿಯಾಗುವುದು ಕೃಷಿಕೂಲಿಕಾರರ ಮೇಲೆ ನೇರ ಪರಿಣಾಮ ಬೀರುತ್ತದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಲಭ್ಯವಿರುತ್ತಿದ್ದ ಅಲ್ಪಸ್ವಲ್ಪ ಉದ್ಯೋಗದ ಅವಕಾಶಗಳಿಂದ ವಂಚಿತರಾಗಿ ಕೃಷಿ ಕೂಲಿಕಾರರು ಪ್ರತಿವರ್ಷ ದೊಡ್ಡ ಸಂಖ್ಯೆಯಲ್ಲಿ ನಗರಗಳಿಗೆ ವಲಸೆ ಬರುವುದು ಅಕ್ಕಪಕ್ಕದ ರಾಜ್ಯಗಳಿಗೆ ಗುಳೆ ಹೋಗುವುದು ಸರ್ವೆಸಾಮಾನ್ಯವಾಗಿದೆ. ಇದರ ಜೊತೆಯಲ್ಲೇ ಕೇಂದ್ರ ಸರ್ಕಾರ ಪಡಿತರ ಆಹಾರ ಧಾನ್ಯಗಳ ಮತ್ತು ಸೀಮೆಎಣ್ಣೆಯ ಬೆಲೆಗಳನ್ನು ಸಿಕ್ಕಾಪಟ್ಟೆ ಏರಿಸಿದ್ದು ರಾಜ್ಯ ಸರ್ಕಾರ ಪ್ರಾಥಮಿಕ ಶಾಲೆಗಳೂ ಸೇರಿದಂತೆ ಶಾಲೆ ಕಾಲೇಜುಗಳಲ್ಲಿ ಶಿಕ್ಷಣದ ಶುಲ್ಕವನ್ನು ಭಾರಿ ಪ್ರಮಾಣದಲ್ಲಿ ಏರಿಸಿದ್ದು ಕೃಷಿ ಕೂಲಿಕಾರರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಕೃಷಿ ಕೂಲಿಕಾರರಲ್ಲಿ ಬಹುಸಂಖ್ಯಾತರು ದಲಿತ ಹಾಗೂ ಹಿಂದುಳಿದ ವಿಭಾಗಗಳಿಗೆ ಸೇರಿದವರಾಗಿದ್ದು ಅವರ ಮೇಲೆ ಸವರ್ಣಿಯರ ದಾಳಿ ದಬ್ಬಾಳಿಕೆಗಳು ಅವ್ಯಾಹತವಾಗಿ ನಡೆದಿದೆ.

ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಅತ್ಯಂತ ದುರ್ಬಲ ವರ್ಗಕ್ಕೆ ಸೇರಿದವರಾದ ರಾಜ್ಯದ ಕೃಷಿಕೂಲಿಕಾರರ ನೆರವಿಗೆ ಧಾವಿಸುವುದು ಸರ್ಕಾರದ ತುರ್ತು ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ ಎಂದಿರುವ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘವು ರಾಜ್ಯದ ಕೃಷಿಕೂಲಿಕಾರರ ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲು ರಾಜ್ಯದ ವಿವಿಧ ಜಿಲ್ಲೆಗಳಿಂದ ಕೂಲಿಕಾರರು ಆಗಮಿಸಿದ್ದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಬೆಂಗಳೂರು ನಗರಕ್ಕೆ ದಾವಿಸಿದ್ದ ರಾಯಚೂರು, ಕೊಪ್ಪಳ, ಬಳ್ಳಾರಿ, ಮಂಡ್ಯ, ವಿಶ್ವನಾಥ ಸ್ವಾಮಿ ಮುಖ್ಯಮಂತ್ರಿಗೆ ಮನವಿ ಪತ್ರ ಸಲ್ಲಿಸಿದರು. ಮನವಿ ಸ್ವೀಕರಿಸಿದ ಮುಖ್ಯಮಂತ್ರಿ ಕೃಷಿಕೂಲಿಕಾರರ ಸಮಸ್ಯೆಗಳನ್ನು ಇತ್ಯರ್ಥ ಪಡಿಸಲು ಸಂಬಂಧಿಸಿದ ಸಚಿವರಿಗೆ ಆದೇಶ ನೀಡುತ್ತೇನೆಂದು ತಿಳಿಸಿದ ನಂತರ ಧರಣಿ ಸತ್ಯಾಗ್ರಹವನ್ನು ವಾಪಸ್ ಪಡೆಯಲಾಯಿತು.

ಶಾಸಕ ತಮ್ಮಯ್ಯ ಮನೆ ಮುಂದೆ ಧರಣಿ

ಮಳವಳ್ಳಿಯಿಂದ ನೂರಾರು ಸಂಖ್ಯೆಯಲ್ಲಿ ಆಗಮಿಸಿದ್ದ ಕೃಷಿಕೂಲಿಕಾರರು ಮುಖ್ಯಮಂತ್ರಿ ಮನೆ ಮುಂದೆ ಧರಣಿ ಮಾಡಿದ್ದ ನಂತರ ವಿಜಯನಗರದಲ್ಲಿ ವಾಸಿಸುತ್ತಿರುವ ಶಾಸಕ

ಕನಿಷ್ಟಕೂಲಿ ನಿಗದಿ ಮಾಡಿದರೆ ಸಾಲದು - ಜಾರಿ ಮಾಡಿ

ಗುಲ್ಬರ್ಗ ಜಿಲ್ಲೆ ಕೃಷಿಕೂಲಿಕಾರರು ರೈಲು ನಿಲ್ದಾಣದಿಂದ ಆನಂದರಾವ್ ಸರ್ಕಲ್ ಮೂಲಕ ಮುಖ್ಯಮಂತ್ರಿ ನಿವಾಸದಕಡೆ ದಾವಿಸಿದರು. ಮೆರವಣಿಗೆಯಲ್ಲಿ ಸಾಗಿದ ಕೃಷಿಕೂಲಿಕಾರರನ್ನು ಪೋಲೀಸರು ತಡೆದರು. ನಂತರ ಕುಮಾರಕೃಪಾ ಬಳಿಯಲ್ಲಿ ಧರಣಿ ಸತ್ಯಾಗ್ರಹ ಪ್ರಾರಂಭಿಸಲಾಯಿತು.

ಆರ್ಥಿಕವಾಗಿ ಶೋಷಣೆಗೆ ಒಳಪಟ್ಟ ಕೂಲಿಕಾರರ ಸಮಸ್ಯೆಗಳ ಇತ್ಯರ್ಥಗೊಳಿಸಲು ಮುಖ್ಯಮಂತ್ರಿ ಧರಣಿ ಸ್ಥಳಕ್ಕೆ ಆಗಮಿಸಬೇಕೆಂದು ಕೂಲಿಕಾರರ ಜೀವನ ಪರಿಸ್ಥಿತಿ ನೋಡಬೇಕೆಂದು ಘೋಷಣೆ ಕೂಗತೊಡಗಿದ್ದರು. ರೈತರ, ಕೂಲಿಕಾರರ ಶೋಷಣೆ ನಿಲ್ಲಿಸಬೇಕು, ಭೂಹೀನ ಕೂಲಿಕಾರರಿಗೆ ಭೂಮಿಯಿಲ್ಲದಾಗ, ಬಂಜರು ಭೂಮಿಯನ್ನು ಖಾಸಗಿ ಸಂಸ್ಥೆಗಳಿಗೆ ನೀಡುವುದು ನಿಲ್ಲಿಸಬೇಕು, ಬಡ ಕೂಲಿಕಾರರಿಗೆ ನೀಡಬೇಕು. ಕೈತುಂಬ ಕೆಲಸ ಮಾಡುವ ಅವಕಾಶವಿದ್ದರೂ ಯಂತ್ರಗಳನ್ನು ಸರಕಾರದ ಬೆಲೆ ಏರಿಕೆ ನೀತಿ ಆರ್ಥಿಕ ಧೋರಣೆ ವಿರುದ ಘೋಷಣೆ ಕೂಗತೊಡಗಿದ್ದರು. ಸುಮಾರು ಎರಡು ತಾಸು ಧರಣಿ ನಡೆಸಲಾಯಿತು.

ಮುಖ್ಯಮಂತ್ರಿ ಬಳಿ ನಿಯೋಗ

ಧರಣಿ ಸ್ಥಳಕ್ಕೆ ಮುಖ್ಯಮಂತ್ರಿ ಆಗಮಿಸಬೇಕೆಂದು ಒತ್ತಾಯಿಸಿದಾಗ ಮುಖ್ಯಮಂತ್ರಿ ಕೇರಳ ರಾಜ್ಯಕ್ಕೆ ಹೋಗುವ ಅವರಸರದಲ್ಲಿ ಇದ್ದಾರೆಂದರು. ಕೂಲಿಕಾರರ ಮುಖಂಡರು ಬಂದು ಮನವಿ ಸಲ್ಲಿಸಿ ನಂತರ ಅವರ ಜೊತೆಯಲ್ಲಿ ವಿವರವಾಗಿ ಚರ್ಚಿಸುತ್ತೇನೆಂದು ಪೋಲೀಸರ ಮೂಲಕ ಸಂದೇಶ ಕಳಿಸಿದ ಮೇಲೆ ರಾಜ್ಯಾಧ್ಯಕ್ಷರಾದ ಜಿ.ಎನ್.ನಾಗರಾಜ್,ಪ್ರ.ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ, ನಿತ್ಯಾನಂದ ಸ್ವಾಮಿ, ಕರಿಯಪ್ಪ ಅಚ್ಚೊಳ್ಳಿ, ಲಿಂಗಪ್ಪ ಹಣವಾಳ, ತಮ್ಮಯ್ಯರ ಮನೆ ಮುಂದೆ ಧರಣಿ ಸತ್ಯಾಗ್ರಹ ನಡೆಸಲಾಯಿತು. ಶಾಸಕರು ಮನೆಯಲ್ಲಿ ಇರಲಿಲ್ಲ. ಪೋಲೀಸರ ಮೂಲಕ ಸುದ್ದಿ ತಿಳಿದ ಶಾಸಕರು ವಿಧಾನಸೌಧದಿಂದ ಫೋನ್ ಮೂಲಕ ಸಂಪರ್ಕಿಸಿದ್ದರು. ಆಶ್ರಯ ಮನೆ, ಹಸಿರು ಕಾರ್ಡು, ವಸತಿ ಸೌಲಭ್ಯಗಳನ್ನು ಒದಗಿಸುತ್ತೇನೆಂದು ತಿಳಿಸಿದ ಶಾಸಕರು ಗೆದ್ದ ಬಳಿಕ ಊರಿನಕಡೆ ತಿರುಗಿ ನೋಡದೆ, ಬೆಂಗಳೂರಿನಲ್ಲಿ ವಾಸಿಸುತ್ತಿದ್ದ ಶಾಸಕರಿಗೆ ಈ ಧರಣಿ ಶಾಕ್ ನೀಡಿದಂತಾಗಿತ್ತು. ಕೂಲಿಕಾರರಿಗೆ ಮುಖಂಡರು ವಿಧಾನಸೌಧದ ಬಳಿಗೆ ಬರಲು ತಿಳಿಸಿದ ಅವರು ಬೇಡಿಕೆಗಳನ್ನು ಇತ್ಯರ್ಥಗೊಳಿಸಲು ತಿಳಿಸುತ್ತೇನೆಂದು ತಿಳಿಸಿದ್ದರು. ಶಾಸಕರ ಮಾತಿಗೆ ಕಿವಿಗೊಡದೆ ನಾವು ನೀವು ಬರುವವರೆಗೆ ಧರಣಿ ನಿಲ್ಲಿಸುವುದಿಲ್ಲವೆಂದಾಗ ವಿಧಾನಸೌಧದಿಂದ ಓಡಿ ಬಂದು ಕೂಲಿಕಾರರ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಅಧಿಕಾರಿಗಳ ಸಭೆ ಕರೆದು ಆ ಸಭೆಯಲ್ಲಿ ಕೂಲಿಕಾರರ ಮುಖಂಡರು ಪಾಲ್ಗೊಂಡು ಸಮಸೆಗಳ ಬಗೆಹರಿಸಲು ಒಪ್ಪಿದರು.

ಸೌಹಾರ್ದ ಬೆಂಬಲ

ವಿವಿಧ ಜಿಲ್ಲೆಗಳಿಂದ ಬಂದ ಕೃಷಿಕೂಲಿಕಾರರು ಮುಖ್ಯಮಂತ್ರಿ ಮನೆಮುಂದೆ ಧರಣಿ, ಕ್ರಾಂತಿಕಾರಿ ಹಾಡುಗಳನ್ನು ಹಾಡಿ ಜನರಿಗೆ ಸ್ಫೂರ್ತಿ ತುಂಬಿದ ನಂತರ ಡಿವೈಎಫ್ಐ, ಎಸ್ಎಫ್ಐ ರಾಜ್ಯ ಕಾರ್ಯದರ್ಶಿಗಳಾದ ಕೆ.ಮಹಾಂತೇಶ್, ಆರ್.ರಾಮಕೃಷ್ಣ ಧರಣಿ ನಡೆಸುತ್ತಿದ್ದ ಕೂಲಿಕಾರರನ್ನು ಉದ್ದೇಶಿಸಿ ಮಾತನಾಡಿದ್ದರು. ಮತ್ತು ಸಭೆಯನ್ನುದ್ದೇಶಿಸಿ ಸಂಘದ ರಾಜ್ಯ ನಾಯಕರು ಮಾತನಾಡಿ ಸಮಸ್ಯೆ ಬಗೆ ಹರಿಯುವವರೆಗೂ ಹೋರಾಟ ಮುಂದುವರಿಸಲು ಕರೆ ನೀಡಿದರು.

ಬೇಡಿಕೆಗಳು

1. ಕನಿಷ್ಟ ವೇತನ,
2. ಸರಕಾರ ಕಾಮಗಾರಿಗಳನ್ನು ಹೆಚ್ಚೆಚ್ಚು ಕೈಗೆ ಎತ್ತಿಕೊಳ್ಳಬೇಕು. ಖಾಯಂ ಕೆಲಸ ಒದಗಿಸಿ
3. ಕೃಷಿ ಕೂಲಿಕಾರರಿಗೊಂದು ಕಾನೂನು
4. ಕೃಷಿಕೂಲಿಕಾರರಿಗೆ ಕಲ್ಯಾಣ ನಿಧಿ
5. ಬಡತನದ ರೇಖೆಯ ಕೆಳಗೆ ಇರುವವರಿಗೆ ಹಸಿರು ಕಾರ್ಡು, ಆರ್ಥಿಕವಾಗಿ ಮುಂದುವರಿದ ಜನವಿಭಾಗಕ್ಕೆ ನೀಡಿದ ಹಸಿರುಕಾರ್ಡುಗಳನ್ನು ವಾಪಸು ಪಡೆಯಬೇಕು.
6. ರೇಷನ್ ದರಗಳ ಮತ್ತು ಪ್ರಮಾಣ ಕಡಿತಗೊಳಿಸಿ ಒಂದೇ ಕಂತುಗಳಲ್ಲಿ ಆಹಾರ ಧಾನ್ಯ ಪಡೆಯಬೇಕೆಂಬ ನಿರ್ಬಂಧವನ್ನು ತೆಗೆದುಹಾಕಿ.
7. ಎಲ್ಲಾ ಕೃಷಿಕೂಲಿಕಾರರಿಗೆ ನಿವೇಶನ ಸಹಿತ ಮನೆಗಳನ್ನು ಒದಗಿಸುವ ಸಮಗ್ರ ಕಾರ್ಯಕ್ರಮವೊಂದನ್ನು ರೂಪಿಸಬೇಕು.
8. ಕೃಷಿಕೂಲಿಕಾರರು ಸರಕಾರಿ ಜಾಗದಲ್ಲಿ ಮನೆ ಕಟ್ಟಿಸಿಕೊಂಡಿರುವ ಎಲ್ಲಾ ಮನೆಗಳನ್ನು ಸಕ್ರಮಗೊಳಿಸಿ, ಪಟ್ಟಾ ನೀಡಬೇಕು.
9. ಕೊಳಚೆ ಪ್ರದೇಶದ ಕೂಲಿಕಾರ ಕುಟುಂಬಗಳಿಗೆ ಆ ಮನೆಗಳು ಉಚಿತವಾಗಿಯೇ ಸಿಗುವಂತೆ ಸರಕಾರ ನೆರವು ನೀಡಬೇಕು.
10. ರಾಜ್ಯದಲ್ಲಿ ಲಭ್ಯವಿರುವ ಕೃಷಿಯೋಗ್ಯ ಬಂಜರು ಭೂಮಿ ಸರಕಾರಿ ಭೂಮಿ ಯನ್ನು ಕೂಲಿಕಾರ, ಬಡರೈತರಿಗೆ ನೀಡಬೇಕು, ಸಾಗುವಳಿ ಮಾಡುತ್ತಿರುವ ತುರ್ತಾಗಿ ಸಕ್ರಮಗೊಳಿಸಿ ಪಟ್ಟಾ ನೀಡಬೇಕು.
11. ಶಿಕ್ಷಣ ಶುಲ್ಕ ಏರಿಸಿದ ಕಾರಣದಿಂದ ಕೂಲಿಕಾರರ ಮಕ್ಕಳ ಕನಿಷ್ಟ ಶಿಕ್ಷಣದಿಂದಲೂ ವಂಚಿತರಾಗುವುದನ್ನು ತಪ್ಪಿಸಿ, ಶಿಕ್ಷಣ ಶುಲ್ಕ ಇಳಿಸಬೇಕು.
12. ರಾಜ್ಯದಲ್ಲಿ ಜೀತಪದ್ಧತಿ, ಅಸ್ಪೃಶ್ಯತೆ ಇನ್ನೂ ಜೀವಂತವಾಗಿದ್ದು, ಸರಕಾರ ಕಾನೂನು ಕ್ರಮಗಳ ಮೂಲಕ ತಡೆಗಟ್ಟಬೇಕು.
12. ರಾಜ್ಯದಲ್ಲಿ ಕ್ರಿಶ್ಚಿಯನ್ ಚರ್ಚು ಹಾಗೂ ಅವರ ಸಂಸ್ಥೆಗಳ ಮೇಲೆ ಹೆಚ್ಚುತ್ತಿರುವ ದಾಳಿಗಳನ್ನು ತಡೆಗಟ್ಟಿ ಅಪರಾಧಿಗಳ ಬಂಧಿಸಬೇಕು.

ವರದಿ: ಚಂದ್ರಪ್ಪ ಹೊಸ್ಕೇರಾ

ಬಿಜಾಪುರದಲ್ಲಿ ನೀರಾವರಿ ಸಮಾವೇಶ

ಖಾಸಗೀಕರಣದ ಕುರಿತು ವಿಶ್ವಬ್ಯಾಂಕಿನ ನಿರ್ದೇಶನ ಎಷ್ಟು ಭರಾಟೆಯಿಂದ ಮುನ್ನುಗ್ಗುತ್ತಿದೆಂಬುದಕ್ಕೆ ಇದೊಂದು ಹೊಸ ಉದಾಹರಣೆ ನೀರಾವರಿ ಸಹಕಾರಿ ಸಂಘಗಳು. ಕೈಗಾರಿಕೆಗಳ ಖಾಸಗೀಕರಣ, ಟೆಲಿಫೋನ್, ವಿದ್ಯುತ್, ನಗರ ನೀರು ಸರಬರಾಜುಗಳಿಂದ ಸಂತೃಪ್ತವಾಗದ ಸರಕಾರ ನೀರಾವರಿ ಯೋಜನೆಗಳ ನೀರು ಸರಬರಾಜಿಗೂ ಖಾಸಗೀಕರಣದ ಕರಾಳ ಹಸ್ತಚಾಚಿ ನೀರಾವರಿಯೊಜನೆಗಳ ಮೂಲೋದ್ದೇಶವನ್ನೇ ನಿರ್ನಾಮ ಗೊಳಿಸುವ ಹೊಂಚು ಹಾಕಿದೆ. ಕರ್ನಾಟಕ ಸರಕಾರದ ಭಾರಿ ನೀರಾವರಿ ಮಂತ್ರಿ, ಎಚ್.ಕೆ. ಪಾಟೀಲರು ತಮ್ಮಗುರು ಎಸ್.ಎಂ.ಕೃಷ್ಣ ಅವರ ಖಾಸಗೀಕರಣ ನೀತಿಯನ್ನು ಜ್ಯಾರಿಗೊಳಿಸುವಲ್ಲಿ ತಾವೇನೂ ಹಿಂದೆಬಿದ್ದಿಲ್ಲೆಂದು ತೋರಿಸಿಕೊಡಲು ನೀರಿನ ವಿತರಣೆ ಕಾಲುವೆಗಳ ರಿಪೇರಿ, ನೀರಿನ ಕರವಸೂಲಿ, ನೀರಿನ ಕರದ ಪ್ರಮಾಣಗಳನ್ನೆಲ್ಲ ನಿರ್ಧರಿಸಿ ರೈತರಿಗೊದಗಿಸುವ ನೀರಿನ ಸಂಪೂರ್ಣ ಜವಾಬ್ದಾರಿಯನ್ನು ರೈತರ ಸಹಕಾರಿ ಸಂಘಗಳಿಗೊಪ್ಪಿಸುವ ನಿರ್ಧಾರ ಮಾಡಿ ಸುಗ್ರೀವಾಜ್ಞೆ ಹೊರಡಿಸಿ ಈಗಾಗಲೇ 350 ಹೆಚ್ಚು ನೀರಾವರಿ ಸಹಕಾರಿ ಸಂಘಗಳನ್ನು ರಚಿಸಿದ್ದಾರೆ. ಇಂಥ ನೀರಾವರಿ ಸಹಕಾರಿ ಸಂಘಗಳಿಂದ ಬಡ ಮಧ್ಯಮ ರೈತರ ಮೇಲಾಗಬಹುದಾದ ಅಪಾಯಗಳನ್ನು ಮನಗಂಡ ಕರ್ನಾಟಕ ಪ್ರಾಂತ ರೈತ ಸಂಘದ ಬಿಜಾಪುರ ಜಿಲ್ಲಾ ಸಮಿತಿ ನೀರಾವರಿ ಹೋರಾಟದ ಕೇಂದ್ರವಾದ ಸಿಂದಗಿ ತಾಲೂಕಿನ ಮೊರಟಗಿಯಲ್ಲಿ ಜುಲೈ 10 ರಂದು ನೀರಾವರಿ ಖಾಸಗೀಕರಣದ ವಿರುದ್ಧ ಸಮಾವೇಶ ನಡೆಸಿದರು.

ಕೃಷ್ಣ ಮೇಲ್ದಂಡೆಯೋಜನೆಯಡಿಯಲ್ಲಿ ಬರುವ ಇಂಡಿ ಕಾಲುವೆಗಾಗಿ ನಿರಂತರ ಹೋರಾಡಿ, ಹೋದ ವರ್ಷ ಕಾಲುವೆಯಲ್ಲಿ ನೀರು ಹರಿಯುತ್ತಿದ್ದರೂ ಬಾಯಿತೆರೆದು ನಿಂತ ಭೂಮಿಗೆ ನೀರುಣಿಸಲು ನಿರಾಕರಿಸುತ್ತಿದ್ದ ಅಧಿಕಾರಿಗಳನ್ನು ಹಿಮ್ಮೆಟ್ಟಿಸಿ ರೈತರ ಭೂಮಿಗೆ ನೀರುಣಿಸಿ ಮೂರುಪಟ್ಟು ಶೆಜ್ಜೆ, ಶೇಂಗ, ಜೋಳ, ಬೆಳೆಸಲು ಧೀರ ಹೋರಾಟ ನಡೆಸಿದ ಮೊರಟಗಿ ಪ್ರದೇಶದ ರೈತರು, ತಮ್ಮ ಶ್ರಮದಿಂದ ಪಡೆದ ನೀರಿನ ಹಿಡಿತವನ್ನು ಪ್ರಭುತ್ವವನ್ನು ನೀರಾವರಿ ಸಹಕಾರಿ ಸಂಘಗಳ ಹೆಸರಿನಲ್ಲಿ ದೊಡ್ಡ ಭೂಮಾಲಿಕರ ವಶಪಡಿಸುವ ರಾಜ್ಯ ಸರಕಾರದ ಒಳ ಸಂಚನ್ನು ಬಯಲಿಗೆಳೆದು ಐಕ್ಯ ಹೋರಾಟ ನಡೆಸಲು ರೈತ ಸಮುದಾಯದಲ್ಲಿ ಜಾಗೃತಿಯನ್ನುಂಟುಮಾಡುವ ಉದ್ದೇಶದಿಂದ ಈ ಸಮಾವೇಶ ನಡೆಸಿದರು. ರೈತರಿಗೆ ಸಕಾಲದಲ್ಲೇ ಬೀಜ ಬಿತ್ತಲು ಅನುಕೂಲವಾಗುವಂತೆ ಪುನರ್ವಸು-ಪುಷ್ಯ ಮಳೆ ರಭಸದಿಂದ ಸುರಿಯುತ್ತಿದ್ದರೂ ನೀರಿನ ಖಾಸಗೀಕರಣದ ಅಪಾಯವನ್ನು ಕಂಡು ಕೊಂಡ ಮಳೆರಾಯ ರೈತರ ಸಮಾವೇಶವನ್ನು ಯಶಸ್ವಿಗೊಳಿಸಲು ಊರು ತುಂಬ ಹೆಮ್ಮೆಯಿಂದ ಹಾರಾಡುತ್ತಿದ್ದ ನೂರಾರು ಕೆಂಬಾವುಟದ ಕರೆಯ ಮೇರೆಗೆ ತನ್ನ ರಭಸನಿಲ್ಲಿಸಿ ಸೂರ್ಯಕಿರಣ ಹೊಳೆಯುವಂತೆ ಮಾಡಿ ಸಮ್ಮೇಳನಕ್ಕೆ ಯಶಕೋರಿದ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆಯವರು ಸಮ್ಮೇಳನವನ್ನು ಉದ್ಘಾಟಿಸಿ ಜೂನ್ 15 ರಂದು ರಾಜ್ಯ ಸರಕಾರ ಹೊರಡಿಸಿರುವ ನೀರಾವರಿ ಸಹಕಾರಿ ಸಂಘಗಳ ನಿಜಸ್ವರೂಪವನ್ನು ಬಿಚ್ಚಿಟ್ಟು, ಅದು ಯಾವ ರೀತಿ ರೈತರಿಗೆ ಹಾನಿಕಾರಕವಾಗಿದೆಂದು ವಿವರಿಸಿದರು. ಮುಖಂಡ ಎನ್.ಕೆ. ಉಪಾಧ್ಯಯ, ಗುಲ್ಬರ್ಗಾ ಜಿಲ್ಲಾ ರೈತ ಮುಖಂಡ ಚಿನ್ನಪ್ಪ ಆನೆಗುಂದಿ, ರೈತ ಸಂಘದ ಜಿಲ್ಲಾಧ್ಯಕ್ಷ ಬೀಮಸಿಕಲಾದಗಿ ಯವರು ತಮ್ಮ ಭಾಷಣದಲ್ಲಿ ಕೇಂದ್ರ-ರಾಜ್ಯ ಸರಕಾರಗಳ ರೈತ ವಿರೋಧಿ ನೀತಿಗಳನ್ನು ವಿವರಿಸಿ ಇಂಥ ನೀತಿಗಳ ವಿರುದ್ಧ ಜಿಲ್ಲಾದ್ಯಂತ ಪ್ರಚಾರ ಪ್ರಕ್ಷೋಭೆ ಮೂಲಕ ಹೋರಾಟಕ್ಕೆ ಕರೆ ನೀಡಿದರು.

ಔಷಧಿ ಪ್ರತಿನಿಧಿಗಳ ಸಂಘದ ವೀರಣ್ಣಹಳ್ಳಿ, ವಿದ್ಯಾರ್ಥಿ ಸಂಘಟನೆಯ ಲಕ್ಷ್ಮಿ ಮೈಲಾರಿ, ಬಸವಲಂಗಪ್ಪಕಪಾಳಿ ಮೊದಲಾದವರು ಈ ಹೋರಾಟಕ್ಕೆ ಬೆಂಬಲ ನೀಡಿದರು. ಸಮಾವೇಶದ ಅಧ್ಯಕ್ಷತೆಯನ್ನು ಶರಣಪ್ಪ ಹಂಟಿನಾಳ ವಹಿಸಿದ್ದರು, ಸಹಕಾರಿ ಸಂಘಗಳ ಮೂಲಕ ರೈತರ ನೀರನ್ನು ಖಾಸಗಿಕರಣಗೊಳಿಸುವ ರಾಜ್ಯ ಸರಕಾರದ ನೀತಿಯನ್ನು ಖಂಡಿಸುವ ನಿರ್ಣಯವನ್ನು ರೈತ ಸಂಘದ ಕಾರ್ಯದರ್ಶಿ ಅಣ್ಣಾರಾಯ ಇಳಿಗೇರ ಮಂಡಿಸಿದರು, ಬಾಗೇವಾಡಿ ರೈತ ಸಂಘದ ಅಧ್ಯಕ್ಷ ಸಾಯಬಣ್ಣ ಹಂದಿಗನೂರ ಬಿಜಾಪುರ ತಾಲೂಕ ರೈತ ಸಂಘದ ಅಧ್ಯಕ್ಷ ಆರ್. ಪಾಟೀಲ ಬೆಂಬಲಿಸಿದರು. ಸಿದ್ದಣ್ಣ ಬೈರೋಡಗಿಯವರ ವಂದನಾರ್ಪಣೆ ಯೊಂದಿಗೆ ಸಮಾವೇಶ ಮುಕ್ತಾಯವಾಯಿತು.

- ಎನ್.ಕೆ.

ಚರ್ಚ್‌ಗಳಲ್ಲಿ ಸಿಡಿದ ಬಾಂಬ್‌ಗಳು ಮತ್ತು ವಿಸ್ತೃತವಾಗಿರುವ ಪಿತೂರಿ ಜಾಲ

ವಾಡಿ, ಹುಬ್ಬಳ್ಳಿ, ಬೆಂಗಳೂರು ಮುಂತಾದೆಡೆ ಚರ್ಚ್‌ಗಳಲ್ಲಿ ಸಂಭವಿಸಿದ ಬಾಂಬ್ ಸ್ಫೋಟದ ತನಿಖೆ ಹಲವಾರು ಭಯಾನಕ ಅಂಶಗಳನ್ನು ಹೊರಗೆಡಹುತ್ತಿದೆ. ಸಂಘ ಪರಿವಾರದ, ದೀನ್‌ದಾರ್ ಅಂಜುಮಾನ್ ಸಮಿತಿ, ಭಾರತ ಯಾತ್ರಾ ಕೇಂದ್ರ, ಐ.ಎಸ್.ಐ., ಸಿಐಎ ಹೀಗೆ ದೇಶದೊಳಗಿನಿಂದ ವಿದೇಶಗಳವರೆಗೆ ಅದರ ಜಾಲ ಬಿಚ್ಚಿಕೊಳ್ಳತೊಡಗಿದೆ. ತನಿಖೆ ವಸ್ತುನಿಷ್ಠವಾಗಿ, ನಿಷ್ಠುರತೆಯಿಂದ ನಡೆದು ಅಪರಾಧಿಗಳು ಬಯಲಾಗಬೇಕು.

ಈ ಸ್ಫೋಟಗಳ ಉದ್ದೇಶ ಬಹು ಸ್ಪಷ್ಟ. ಭಾರತದ ಐಕ್ಯತೆ, ಸಮಗ್ರತೆ, ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವುದು, ಛಿದ್ರಗೊಳಿಸುವುದು. ಕೋಮುದ್ವೇಷ ಮತ್ತು ಜನಾಂಗೀಯ ಕಲಹಗಳಿಂದ ಭಾರತ ಹತ್ತಿ ಪತ್ರಿಕೆಯಲ್ಲಿ ಕ್ರಿಶ್ಚಿಯನ್ನರಿಗೆ ಎಚ್ಚರಿಕೆ ನೀಡತೊಡಗಿದೆ. 'ವಾಜಪೇಯಿ ನೇತೃತ್ವದ ಎನ್.ಡಿ.ಎ. ಸರ್ಕಾರ ಅಧಿಕಾರಕ್ಕೆ ಬಂದಂದಿನಿಂದ ಕ್ರಿಶ್ಚಿಯನ್ನರ ಮತ್ತು ಪಾದ್ರಿಗಳ ಅಂತರ್ರಾಷ್ಟ್ರೀಯ ಪಿತೂರಿಗಳು ನಡೆಯದಾಗಿವೆ, ಆದ್ದರಿಂದಲೇ ಸರ್ಕಾರದ ವಿರುದ್ಧ ಅವರು ಪ್ರತಿಭಟಿಸುತ್ತಾ ಹತಾಶರಾಗಿದ್ದಾರೆಂದೂ, ಈ ಕ್ರಿಶ್ಚಿಯನ್ನರಿಗೆ ಉಳಿದಿರುವುದು ಎರಡೇ ದಾರಿ - ಒಂದು ಹಿಂದೂಗಳ ಜೊತೆಗೆ ನಿಲ್ಲಬೇಕು, ಇಲ್ಲವೇ ಹಿಂದುಗಳ ವಿರುದ್ಧ ಯುದ್ಧ ಘೋಷಿಸಿರುವ ಮುಸ್ಲಿಂರ ಬಂದೂಕಿಗೆ ಸಿಡಿಗುಂಡಾಗುವುದು" ಎಂದು ದಬಾಯಿಸಿದ್ದಾರೆ. ತಮ್ಮ ಮೇಲೆ ನಡೆದ ಧಾಳಿಯನ್ನು ಕ್ರಿಶ್ಚಿಯನ್ನರು ಪ್ರತಿಭಟಿಸಿದರೆ ಅನ್ಯರ ಸಿಡಿಗುಂಡಾಗಿ ಎಂದು ಒತ್ತಾಯಿಸಲಾಗುತ್ತದೆ. ಅದರರ್ಥ ಮುಸ್ಲಿಂ



ಸ್ಫೋಟಗೊಂಡ ಚರ್ಚ್‌ವೊಂದರ ಒಳಚಿತ್ರ

ಉರಿಯುವುದು..... ಇದೇ ಗುರಿಯಿಂದಲೇ ಭಾರತದ ವಿರುದ್ಧ ಸಾಮ್ರಾಜ್ಯಶಾಹಿಗಳು ನಡೆಸಿರುವ ಷಡ್ಯಂತ್ರಗಳಿಗೆ ಲೆಕ್ಕವಿಲ್ಲ.

ಆಗಿನ್ನೂ ಈ ಸ್ಫೋಟಗಳ ತನಿಖೆ ಆರಂಭಗೊಂಡೇ ಇರಲಿಲ್ಲ. ಸ್ಫೋಟ ಸಂಭವಿಸಿದ ತಕ್ಷಣ 'ಇದು ಐ.ಎಸ್.ಐ.ನ ಕೈವಾಡ' ಎಂದು ಭಾರತದ ಉದ್ದಗಲಕ್ಕೂ ಕೂಗಿಹೇಳಿದ್ದ ಆರ್.ಎಸ್.ಎಸ್. ಚರ್ಚ್‌ಗಳ ಮೇಲಿನ ಧಾಳಿಗೆ ಮುಸ್ಲಿಂರು-ಪಾಕಿಸ್ತಾನಿಗಳೇ ಕಾರಣ ನೋಡಿ ಎನ್ನುತ್ತಿದೆ. ಅಂದರೆ ಈ ಹಿಂದೆ ತಾನು ದೇಶಾದ್ಯಂತ ಅಲ್ಪಸಂಖ್ಯಾತರು, ಅದರಲ್ಲಿಯೂ ಇತ್ತೀಚಿನ ದಿನಗಳಲ್ಲಿ ಕ್ರಿಶ್ಚಿಯನ್ನರ ಮೇಲೆ ಆಕ್ರಮಣ, ಹತ್ಯೆಗಳನ್ನು ನಡೆಸಿದ್ದನ್ನು ಮುಚ್ಚಿಕೊಳ್ಳಲು ಆತುರವಾಗಿದೆ. ತನ್ನದೇನೂ ಪಾತ್ರವಿಲ್ಲ ಎನ್ನುತ್ತಿದೆ. ಆದರೆ ದೇಶದಾದ್ಯಂತ ದ್ವೇಷದ ವಿಷವಾಯು ತುಂಬಿದ್ದು ಇದೇ ಸಂಘ ಪರಿವಾರ. ಕಿಡಿ ಹೊತ್ತಿಸಿದ್ದು ಇವರೇ ಎನ್ನುವುದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಈ ತನಿಖೆಯ ಕೆಲ ವಿವರಗಳನ್ನೇ ಹಿಡಿದು ಆರ್.ಎಸ್.ಎಸ್. ತನ್ನ ಮುಖವಾಣಿ



ಪರಿಶೀಲನೆಯಲ್ಲಿ ಗೃಹಸಚಿವರು

ವಿರುದ್ಧ ನಮ್ಮ ಸಿಡಿಗುಂಡಾಗಿ ಎಂದು. ಅಂದರೆ ಸಂಘ ಪರಿವಾರದ ಹೇಳಿಕೆಯಂತೆ ಕ್ರಿಶ್ಚಿಯನ್ನರಿಗೆ, ಅಲ್ಪಸಂಖ್ಯಾತರಿಗೆ ಸ್ವಂತ ಅಸ್ತಿತ್ವವಿಲ್ಲ. ಅವರು ಇನ್ನೊಬ್ಬರ ಸಿಡಿಗುಂಡಾಗಿರುವುದೊಂದೇ ಉಳಿದ ದಾರಿ! ಇದು ಫ್ಯಾಸಿಸ್ಟ್ ಮನೋಭಾವದ ಪ್ರತೀಕವಲ್ಲದೇ ಬೇರೇನು? ಇನ್ನೂ ಸಂಘ ಪರಿವಾರದ ನಿಜ ಉದ್ದೇಶಗಳ ಬಗ್ಗೆ ಹೆಚ್ಚಿಗೆ ಹೇಳಬೇಕಿಲ್ಲ.

ಆದರೆ ಒಂದು ಅಂಶವಂತೂ ನಿಜ. ಈ ಸ್ಫೋಟಗಳು ನಡೆದಿರುವ ಸ್ಥಳಗಳು, ಬಹುತೇಕ ಮುಸ್ಲಿಂ ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಪ್ರದೇಶಗಳಾಗಿವೆ. ಭಾಗಿಯಾದವರೆಂದು ದಸ್ತಗಿರಿಯಾಗಿಯಾದವರು ಮುಸ್ಲಿಂ ಅಲ್ಪಸಂಖ್ಯಾತ ವಿಭಾಗದಿಂದ ಬಂದವರು. ಈಗ ಇಡೀ ಘಟನೆಗಳನ್ನು ಕ್ರಿಶ್ಚಿಯನ್ನರ ವಿರುದ್ಧ ಮುಸ್ಲಿಂರು ಎಂದು ಬಿಂಬಿಸಲಾಗುತ್ತಿದೆ. ಅಂದರೆ ಸಂಘ ಪರಿವಾರದ ಆಕ್ರಮಣಗಳಿಗೆ ಈಡಾದವರು ಈ ಎರಡೂ ಸಮುದಾಯಗಳು.

ಸಂಘ ಪರಿವಾರದ ಆಕ್ರಮಣಗಳ ವಿರುದ್ಧ ಗಣನೀಯ ಸಂಖ್ಯೆಯಲ್ಲಿರುವ ಈ ಎರಡೂ ಅಲ್ಪಸಂಖ್ಯಾತ ಸಮುದಾಯಗಳು ಮತ್ತು ದೇಶದ ಧರ್ಮನಿರಪೇಕ್ಷಿತ ಜನತೆ ಒಂದಾದರೆ ತೀವ್ರ ಪ್ರತಿರೋಧ ಒಡ್ಡಬಹುದು. ಆದ್ದರಿಂದ ಅಲ್ಪಸಂಖ್ಯಾತ ಸಮುದಾಯಗಳೆಡೂ ಮುಖಾಮುಖಿಯಾಗಿ ಕಾದಾಡಿ ನಾಶವಾಗಬಾರದೇಕೆ ಎಂಬ ಪಿತೂರಿಯನ್ನು ಹೆಣೆದಿರಬಾರದೇಕೆ ಎಂಬ ಅನುಮಾನ ಮೂಡುತ್ತದೆ. ಈಕ್ವೆಡಾರ್‌ನಂತಹ ದೇಶಗಳಲ್ಲಿ ಇಂತಹ ಜನಾಂಗೀಯ ಕಲಹ ಎಬ್ಬಿಸಲು ಅಮೆರಿಕಾದ ಸಿಐಎ ಚರ್ಚ್‌ಗಳಲ್ಲಿ ಬಾಂಬ್ ಸ್ಫೋಟಿಸಲು ರೂಪಿಸಿದ ಸಂಚುಗಳು ಕಣ್ಣೆದುರೇ ಇವೆ. ಇಂತಹ ಸಂಚಿನ ರೂವಾರಿಯಾಗಿದ್ದನ್ನು ಮಾಜಿ ಸಿಐಎ ಅಧಿಕಾರಿ ಫಿಲಿಪ್ ಆಗೀ ಕ್ಯೂಬಾದಲ್ಲಿ ನಡೆದ ವಿಶ್ವ ಯುವಜನರ ಉತ್ಸವದಲ್ಲಿ ಸ್ವತಃ ಸಾಮ್ರಾಜ್ಯಶಾಹಿ ವಿರುದ್ಧ ಸಾಕ್ಷಿ ನೀಡಿದ್ದರಲ್ಲ.

ಈ ಸ್ಫೋಟದ ತನಿಖೆಯು ಇನ್ನೂ ಹಲವು ಸಂಗತಿಗಳನ್ನು ಹೊರ ತರುತ್ತಿದೆ. ದೀನ್‌ದಾರ್ ಅಂಜುಮನ್ ಸಂಸ್ಥೆಯ ಜೊತೆಗೆ, ಭಾರತ ಯಾತ್ರ ಕೇಂದ್ರದ ಸಂಬಂಧಗಳು ನಿಗೂಢವಾಗಿ ಗೋಚರಿಸತೊಡಗಿವೆ. ಕೇಂದ್ರದ ಮುಖ್ಯಸ್ಥರಾದ ನಾಡಿಶಾಸ್ತ್ರದ ನಾಶಿಮಠ, ಮಹದೇವ ಹೊರಟ್ಟಿ ಮುಂತಾದವರು ಆ ಸಂಸ್ಥೆಯೊಂದಿಗೆ ಇಟ್ಟಿದ್ದ ನಿಕಟ ಸಂಪರ್ಕಗಳು, ಚಟುವಟಿಕೆ, ಹಣಕಾಸು ವ್ಯವಹಾರಗಳು ಕಾಣುತ್ತಿದ್ದು ಇನ್ನೂ ಈ ಜಾಲ ವ್ಯಾಪಕವಾಗಿರುವುದರ ಕುರುಹಾಗಿದೆ.

ಅಂತೂ, ಈ ಸ್ಫೋಟಗಳು ಕೇವಲ ಸಿಡಿದ ಬಾಂಬ್‌ಗಳಲ್ಲ, ಸಿಡಿಸಿದವರು ಕಣ್ಣೆದುರು ಕಂಡವರಷ್ಟೇ ಅಲ್ಲ, ಇದೊಂದು ತೆರೆಯಮರೆಯಲ್ಲಿ ನೂರಾರು ಕಡೆ ಚಾಚಿರುವ ಕಂಬಂಧಬಾಹುಗಳ ಪಿತೂರಿ ಜಾಲವಿದು. ತನಿಖೆ ನಡೆದು ಬಯಲಾಗಬೇಕಾದ ಪ್ರಮುಖ ಸಂಗತಿಗಳು.

ಕರ್ನಾಟಕ ಈ ವಾರ

ನೋಡುಗ: ಎಸ್.ವೈ.ಗುರುಶಾಂತ್

ನೂರಾರು ಕಂಪನಿಗಳ ವಂಚನೆ

ಉದಾರೀಕರಣದಲ್ಲಿ ತಿಂದುಂಡವನೇ ಜಾಣ' ಎಂಬ ಆಧುನಿಕ ಗಾದೆಗೆ ನಿದರ್ಶನವೆಂಬಂತೆ ರಾಜ್ಯದಲ್ಲಿ ಹಲವಾರು ಖೋಟಾ 'ಬ್ಲೇಡ್' ಕಂಪನಿಗಳ ವಂಚನೆಯ ಕಾರ್ಯಜಾಲ ಬಯಲಾಗಿದೆ. ಇಲ್ಲಿನ ನೆಲ, ಜಲ, ವಿದ್ಯುತನ್ನು ಲೂಟಿ ಹೊಡೆದದ್ದಲ್ಲದೇ ಸಾರ್ವಜನಿಕ ಸಾವಿರಾರು ಕೋಟಿ ರೂ.ಗಳನ್ನು ನುಂಗಿ ನೀರು ಕುಡಿದಿವೆ. ಇಂತಹ 142 ಕಂಪನಿಗಳನ್ನು ಕೇಂದ್ರದ ವಾಣಿಜ್ಯ ಇಲಾಖೆ ಪತ್ತೆ ಹಚ್ಚಿದ್ದು, ವಂಚನೆಯ ಹಣದ ಮೊತ್ತ 3000 ಕೋಟಿ ದಾಟಲಿದೆ.

ಈ ಕಂಪನಿಗಳು ಆರಂಭಗೊಂಡದ್ದು, ಬಯೋಟೆಕ್ನಾಲಜಿ ಅಥವಾ ಕಂಪ್ಯೂಟರ್‌ನ ಮಾಹಿತಿ ತಂತ್ರಜ್ಞಾನ ಮುಂತಾದ ಹೆಸರಿನಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿಪಡಿಸಲು ಸಾವಿರಾರು ಎಕರೆ ಸರಕಾರಿ ಭೂಮಿ, ಆಹಾರ ಬೆಳೆಯುವ ಭೂಮಿಯನ್ನು ಹರಾಜಿಗೆ ಕೂಗಿದೆ. ಇದರಲ್ಲಿ ಅಬ್ಕಾರಿ ಗುತ್ತಿಗೆದಾರರು, ಬಡ್ಡಿ ವ್ಯಾಪಾರಿಗಳು, ರಿಯಲ್ ಎಸ್ಟೇಟ್ ಹಾಗೂ ಭೂ ಮಾಫಿಯಾಗಳು 'ಸಾಫ್ಟ್‌ವೇರ್ ತಂತ್ರಜ್ಞ'ರಾಗಿ ಮಾರ್ಪಟಿದ್ದಾರೆ.

ಅಬ್ಕಾರಿಯ ಶ್ರೀಹರಿಖೋಡೆ, ಪೋತರಾಜು, ಬಡ್ಡಿ ವ್ಯಾಪಾರಿ ಬಸಂತ ಕುಮಾರ್ ಪಾಟೀಲ್, ರಿಯಲ್ ಎಸ್ಟೇಟ್‌ನ ಷಡಕ್ಷರಿ, ಜವಳಿ ಕಾರ್ಖಾನೆಯ ವೆಳ್ಳಿಯಪ್ಪ ಅಲ್ಲದೇ ವಿದೇಶಗಳ ಹೆಸರಿನ ಹಲವಾರು ಕಂಪನಿಗಳ ಹೆಸರುಗಳಿವೆ. ಕೆಲವು ಕಂಪನಿಗಳಂತೂ ಜನರಿಂದ ಶೇರು ಸಂಗ್ರಹಿಸಿ ನಾಪತ್ತೆಯಾಗಿವೆ. ಇವರ ಮೇಲೆ ಕ್ರಮ ಜರುಗಿಸಬೇಕೆಂದರೆ ವಿಶ್ವ ಬಂಡವಾಳ ಹೂಡಿಕೆದಾರರ ಮೇಲೆ ಪರಿಣಾಮ ಬೀರುತ್ತದೆ ಎಂದು ಸಮಜಾಯಿಷಿಯನ್ನು ಸರ್ಕಾರದ ಅಧಿಕಾರಿಗಳು, ಸಚಿವರು ನೀಡುತ್ತಿದ್ದಾರೆಂದು ವರದಿಯಾಗಿದೆ. ಇದಕ್ಕೆಲ್ಲ ರಾಜಕಾರಣಿಗಳು, ಸಚಿವರು ಅಧಿಕಾರಿಗಳ ಶಾಮೀಲು ಇದೆ. ಇಂತಹವರ ಮಕ್ಕಳು ಈ ದಂಧೆಯಲ್ಲಿ ಈಗಾಗಲೇ ಇದ್ದಾರೆ. ಇವುಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಕ್ರಮವಹಿಸುವುದಾಗಿ ಕೈಗಾರಿಕಾ ಸಚಿವ ದೇಶಪಾಂಡೆ ಹೇಳಿದ್ದರೂ ಏನೊಂದು ಕ್ರಮಗಳಿಲ್ಲ. ಒಂದು ರೀತಿಯಲ್ಲಿ ಸರ್ಕಾರದ ಬೆಂಬಲವಿದ್ದೇ ಇದೆ. ನಾಡನ್ನು, ಜನತೆಯನ್ನು ವಂಚಿಸುವ ಈ ಕಂಪನಿಗಳು ಹಾಗೂ ವ್ಯಕ್ತಿಗಳ ಮೇಲೆ ಕ್ರಮ ಜರುಗಿಸಬೇಕು. ಎಲ್ಲರನ್ನೂ ಬಯಲಿಗೆಳೆಯಬೇಕು.

ಜನತಾದಳ ಬಣಗಳ ವಿಲೀನ

ಜನತಾದಳದ ಬಣಗಳು ಒಂದಾಗುವ ಪ್ರಕ್ರಿಯೆ ಸಣ್ಣ ಮಟ್ಟದಲ್ಲಾದರೂ ಆರಂಭಗೊಂಡಿದೆ. ಮಾಜಿ ಪ್ರಧಾನಿ ದೇವೇಗೌಡ, ಮಾಜಿ ಮುಖ್ಯಮಂತ್ರಿ ಜೆ.ಹೆಚ್.ಪಟೇಲ್ ಮುಂತಾದ ನಾಯಕರು ಪರಸ್ಪರ ಮಾತನಾಡತೊಡಗಿದ್ದಾರೆ. ಇದು ಅತ್ಯಂತ ಸ್ವಾಗತಾರ್ಹ ಬೆಳವಣಿಗೆ.

ಇವುಗಳಿಗೆ ಹಿನ್ನಲೆಯೆಂದರೆ ಇತ್ತೀಚಿಗೆ ನಡೆದ ತಾಲೂಕು-ಜಿಲ್ಲಾ ಪಂಚಾಯತ್ ಚುನಾವಣೆಗಳು, ಫಲಿತಾಂಶಗಳು. ಬಿಜೆಪಿ ನೆಲಕಚ್ಚಿದೆ. ಕಾಂಗ್ರೆಸ್‌ಗೆ ಬಿಟ್ಟರೆ ಜನತಾದಳದ ಉಭಯ ಬಣಗಳೇ ಹೆಚ್ಚಿನ ಶಕ್ತಿ ಹೊಂದಿರುವುದು ಎಂದು ತೋರಿಸಿವೆ. ಒಂದು ರೀತಿಯಲ್ಲಿ ಈ ಫಲಿತಾಂಶ ಬರುವ ಮೊದಲೇ ಜನತೆ ಇಂತಹ ಅಭಿಪ್ರಾಯ ವ್ಯಕ್ತಪಡಿಸತೊಡಗಿದ್ದರು. ಒಂದಾದರೆ ಮಾತ್ರ ಒಂದು ಶಕ್ತಿಯಾಗಬಹುದು ಎಂಬುದನ್ನು ಮನಗಾಣಿಸಿದ್ದರು. ಆದ್ದರಿಂದ ಈಗಿನ ವಿಲೀನದ ಪ್ರಕ್ರಿಯೆ ಜನತೆಯ ಒತ್ತಾಸೆಯ ಫಲ.

ರಾಜಕಾರಣದಿಂದ ನಿವೃತ್ತರಾಗುವ ಮಾತನಾಡುತ್ತಿದ್ದ ರಾಮಕೃಷ್ಣ ಹೆಗಡೆ ಸಂಯುಕ್ತ ಜನತಾದಳ ತೊರೆಯುವುದಾಗಿ ಹೇಳಿದ್ದ ರಾಂ ವಿಲಾಸ್ ಪಾಸ್ವಾನ್‌ರೂ ಕೂಡ ವಿಲೀನಕ್ಕೆ ಒಮ್ಮೆ ಪರವಾಗಿ, ಮಗದೊಮ್ಮೆ ವಿರೋಧವಾಗಿ ಆಡುತ್ತಿದ್ದಾರೆ. ಅವರ ಈ ಇಬ್ಬಂದಿತನಕ್ಕೂ ಕರ್ನಾಟಕದ ಜನತೆಯ ತೀರ್ಪು, ಒತ್ತಾಸೆಗಳೂ ಕಾರಣ ಎಂಬುದನ್ನು ಮರೆಯಲಾಗದು.

ಕಾಂಗ್ರೆಸ್-ಬಿಜೆಪಿಗೆ ಪರ್ಯಾಯವಾಗಿ ಮೂರನೆಯ ಶಕ್ತಿ ರೂಪುಗೊಳ್ಳಬೇಕಾದ ಸಮಯದಲ್ಲಿ ಜನತಾದಳಗಳ ವಿಲೀನ ಮಹತ್ವದ್ದು. ಆದರೆ ಇದು ಅಧಿಕಾರದ ಆಸೆಗಾಗಲೀ, ವ್ಯಕ್ತಿ ಪ್ರತಿಷ್ಠೆಗಾಗಿ ಆಗದೇ, ಜನರ ರಾಷ್ಟ್ರದ ಹಿತ ಲಕ್ಷ್ಯದಲ್ಲಿರಿಸಿ ತಾತ್ವಿಕ ವಿಷಯಗಳ ಆಧಾರದಲ್ಲಿ ಒಂದಾಗುವುದು ಅತ್ಯಗತ್ಯ.

ಜಾಗತೀಕರಣ ಮತ್ತು ನಾಯಕರ ಇಬ್ಬಂದಿತನ

ಇಬ್ಬಂದಿನತವೆಂದರೆ ಹೇಗಿರುತ್ತದೆ ಎಂಬುದನ್ನು ಮತ್ತೆ ತೋರಿಸಿದವರು ರಾಮಕೃಷ್ಣಹೆಗಡೆಯವರೇ. ಇತ್ತೀಚಿಗೆ ಅವರೇ 'ಆಶೀರ್ವಾದಿ'ಸುತ್ತಿರುವ 'ಸ್ನೇಹ-ಚಿಂತನಾ' ಎಂಬ ವೇದಿಕೆ 'ಜಾಗತೀಕಕರಣದ ಅಪಾಯ' ಎದುರಿಸುವುದು ಹೇಗೆ? ಎಂಬ ವಿಷಯದಲ್ಲಿ ಅಶೋಕ ಹೋಟೆಲ್‌ನ ಹವಾನಿಯಂತ್ರಿತ ಹಾಲ್‌ನಲ್ಲಿ ಒಂದು ವಿಚಾರ ಸಂಕಿರಣ ಏರ್ಪಡಿಸಿತ್ತು. ಇದರಲ್ಲಿ ಹೆಗಡೆ, ಯು.ಆರ್.ಅನಂತಮೂರ್ತಿ, ಡಾ|| ನಂಜುಂಡಪ್ಪ ಮುಂತಾದವರು ಭಾಗವಹಿಸಿ, ಜಾಗತೀಕರಣದ ಅಪಾಯಗಳ ಬಗ್ಗೆ ಮಾತನಾಡಿದ್ದಾರೆ. ಇದನ್ನು ಸಾಂಸ್ಕೃತೀಕರಣದಿಂ ಎದುರಿಸಬಹುದು ಎಂಬ ಅರ್ಥವಾಗದ ಅದ್ಭುತ ಸೂತ್ರ ಮಂಡಿಸಿದ ಹೆಗಡೆಯವರೂ, ಅನಂತಮೂರ್ತಿ, ಬಿಜೆಪಿಯ 'ಮುಖ್ಯಮಂತ್ರಿ' ಚಂದ್ರು ಹೀಗೆ ವಾದ ಹೂಡಿದರು. ಇವರು ಜಾಗತೀಕರಣದ ಹಾನಿಗಳನ್ನು ಹೇಳದೇ ಇರಲಾಗಲಿಲ್ಲ. ಇತ್ತೀಚಿಗೆ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರೂ ಇದರ ಬಗ್ಗೆ ಮಾತನಾಡತೊಡಗಿದ್ದಾರೆ. ಒಂದೆಡೆ ಆರ್.ಎಸ್.ಎಸ್. - ವಿರೋಧಿಸುತ್ತಲೇ ಬಿಜೆಪಿ ಜಾರಿಗೊಳಿಸುತ್ತಿದೆ. ಈ ಪ್ರಕ್ರಿಯೆಯನ್ನೇ ಅಬ್ಬರದಲ್ಲಿ ಆರಂಭಿಸಿದ ಕಾಂಗ್ರೆಸ್ ಅದರ ಮರುವಿಮರ್ಶೆಗೆ ಸಮಿತಿ ನೇಮಿಸಿದೆ. ಇನ್ನೊಂದೆಡೆ ಕೃಷ್ಣರ ಕಾಂಗ್ರೆಸ್ ಸರ್ಕಾರ ತೀವ್ರವಾಗಿ ಜಾರಿಗೊಳಿಸುತ್ತಿದೆ. ವಿದೇಶದಿಂದ 1400 ಕೃಷಿ-ಕೈಗಾರಿಕಾ ಉತ್ಪನ್ನಗಳನ್ನು ಮುಕ್ತವಾಗಿ ಆಮದು ಮಾಡಿಕೊಳ್ಳುವ ಒಪ್ಪಂದ ಮಾಡಿದ ಹೆಗಡೆಯವರೇ ಅದರ ವಿರುದ್ಧ ಧ್ವನಿ ಎತ್ತುತ್ತಿದ್ದಾರೆ. ಈ ನಾಯಕರು ತೋರುತ್ತಿರುವ ಇಬ್ಬಂದಿತನವೇ 'ಜಾಗತೀಕರಣದ ಅಪಾಯ' ಎಷ್ಟೆಂದು ಎತ್ತಿ ತೋರುತ್ತಿದೆ. ಜನತೆಯೆದುರು ಕಿಂಚಿತ್ತಾದರೂ ಸತ್ಯ ಒಪ್ಪಿಕೊಳ್ಳದೇ ಹೋದರೆ ತಿರಸ್ಕಾರಕ್ಕೆ ಒಳಗಾಗುವ ಆತಂಕ ಸೃಷ್ಟಿಸಿದೆ. ಇದನ್ನು ಒಪ್ಪಿಕೊಳ್ಳುವ ಧೈರ್ಯ ಮತ್ತು ನೈತಿಕತೆಯನ್ನು ಇವರು ತೋರಬಲ್ಲರೇ? ○

ಶಿಕ್ಷಣವೋ ಅಥವಾ ಶಿಕ್ಷೆಯೋ

- ಆರ್. ರಾಮಕೃಷ್ಣ

ನೆಲದ ಮೇಲಿನ ಸಸ್ಯಗಳಲ್ಲದೆ ಎತ್ತರದ ಗಿಡಮರಗಳ ಎಲೆ-ಹಸಿರನ್ನು ಕಿತ್ತು ತಿನ್ನುವ ಅಭ್ಯಾಸ ಮಾಡಿಕೊಂಡ ಜಿರಾಫೆ ಕತ್ತು ಉದ್ದ ಉದ್ದಕ್ಕೆ ಆಕಾಶದ ಕಡೆಗೆ ಬೆಳೆದು ನಿಂತಿದೆ. ಜೀವನಪರ್ಯಂತ ಮರಳುಗಾಡಿನಲ್ಲಿ ಬದುಕಬೇಕಾದ, ಸಿಕ್ಕ ಕಡೆ ಹೆಚ್ಚು ನೀರನ್ನು ಕುಡಿಯುವ ಅಭ್ಯಾಸದೊಂದಿಗೆ ಒಂಟೆಯ ದೇಹದಲ್ಲಿ ನೀರು ಸಂಗ್ರಹಿಸುವ ಡುಬ್ಬವೊಂದು ನಿರ್ಮಾಣವಾಗಿದೆ.

ಜೀವನ ಪದ್ಧತಿಯಲ್ಲಿ ಈಗ ಸಾಕಷ್ಟು ಬದಲಾವಣೆ ಹೊಂದಿರುವ ಮನುಷ್ಯ ಮುಂದೆ ಏನಾಗಬಹುದು? ಭಾರತದಲ್ಲಿ ನಮ್ಮ ಶಿಕ್ಷಣ ಪದ್ಧತಿ ಹೀಗೆ ಮುಂದುವರಿದರೆ ಖಂಡಿತವಾಗಿಯೂ ಮುಂದಿನ ಜನಾಂಗದ ಬೆನ್ನು ಬಾಗಿ ಶಾಶ್ವತ ಗೂನು ಬರಬಹುದು. ಏಕೆಂದರೆ ಅಷ್ಟು ರಾಶಿ ರಾಶಿ ಪುಸ್ತಕವನ್ನು ನಾವು ನಮ್ಮ ಮಕ್ಕಳ ಬೆನ್ನಿನ ಮೇಲೆ ಹೇರುತ್ತಿದ್ದೇವೆ.

'ಪಿಂಟು'ಗೆ ಈಗ 10 ವರುಷ. ಬೆಂಗಳೂರು ನಗರದ ಶಾಲೆಯೊಂದರ 5ನೇ ತರಗತಿಯ ಹುಡುಗ. ಇವನ ತೂಕ 26 ಕಿ.ಲೋ. ಜುಲೈ 10, 2000 ದಂದು ಆತ ಶಾಲೆಗೆ ತೆಗೆದುಕೊಂಡು ಹೋದ ಪುಸ್ತಕ ಚೀಲದ ತೂಕ 6 ಕೆ.ಜಿ. ಜುಲೈ 9 ರಂದು ಆತನ ಶಾಲೆಯಲ್ಲಿ ಯಾವುದೇ 'ಮನೆಗೆಲಸ(ಹೋಂವರ್ಕ್)ಕೊಟ್ಟಿರಲಿಲ್ಲವಾದ್ದರಿಂದ ಒಂದೆರಡು ಪುಸ್ತಕಗಳು ಕಡಿಮೆ. ಮಾಮೂಲಿನಂತಾಗಿದಿದ್ದರೆ ಚೀಲದ ತೂಕ ಇನ್ನೂ ಹೆಚ್ಚು ಇರುತ್ತಿತ್ತು. (ಊಟದ ಡಬ್ಬಿ - ನೀರಿನ ಬಾಟಲಿ - ಮಳೆಗಾಲದಲ್ಲಿ ಕೊಡೆ - ಇಂಥವು ತೂಕದಲ್ಲಿ ಸೇರಿಲ್ಲ, ಇದು ಪ್ರತ್ಯೇಕ) ಪಿಂಟು ಬಳಿ ಇರುವ ಎಲ್ಲಾ ಪುಸ್ತಕಗಳ ಒಟ್ಟು ತೂಕ 9 ಕಿ.ಲೋ. ಇದೆ.



5ನೇ ತರಗತಿಯ ಈ ವಿದ್ಯಾರ್ಥಿಗೆ ಒಟ್ಟು 11 ಪಠ್ಯಪುಸ್ತಕಗಳಿವೆ. ಜೊತೆಗೆ 7 ನೋಟ್ ಪುಸ್ತಕಗಳು, 6 ಹೋಂವರ್ಕ್ ಪುಸ್ತಕಗಳು, 1 ಕಾಪಿ ಪುಸ್ತಕ, ಒಂದು ರಫ್ ನೋಟ್ ಹೀಗೆ ಒಟ್ಟು 25 ಪುಸ್ತಕಗಳು ಈ ಹುಡುಗನಿಗಿವೆ.

6 ವರ್ಷದ ಮಾಲಾಶ್ರೀ ಬೆಂಗಳೂರಿನ ಕೆಂಗೇರಿ ಉಪನಗರದ ಶಾಲೆಯೊಂದರಲ್ಲಿ 2ನೇ ತರಗತಿ ಓದುತ್ತಿದ್ದಾಳೆ. ಈ ಪ್ರಾಥಮಿಕ ಹಂತದಲ್ಲೇ ಆಕೆ ಕಲಿಯಬೇಕಾದ ಭಾಷೆಗಳು ಮೂರು. ಕನ್ನಡ, ಇಂಗ್ಲೀಷ್-ಹಿಂದಿ (ಬಿಜೆಪಿ ಸರ್ಕಾರ ಎಲ್ಲರಿಗೂ ಸಂಸ್ಕೃತ ಕಡ್ಡಾಯ ಮಾಡಿದರೆ ಈ ಮಕ್ಕಳ ಗತಿ ಏನು?). ಜೊತೆಗೆ ಗಣಿತ-ಪರಿಸರ ಅಧ್ಯಯನ (ವಿಜ್ಞಾನ-ಸಮಾಜ ವಿಜ್ಞಾನ) ಹಾಗೂ ಕಂಪ್ಯೂಟರ್ ಕಲಿಕೆ. ಕನ್ನಡ -ಇಂಗ್ಲೀಷ್‌ಗಳಲ್ಲಿ ಸರ್ಕಾರ ನಿಗದಿಗೊಳಿಸಿರುವ ಪುಸ್ತಕಗಳ ಜೊತೆಗೆ ಇನ್ನೂ ಹಲವು ಪುಸ್ತಕಗಳು - ಪೂರಕ ಪಠ್ಯಗಳು ಶಾಲೆಯ ಆಡಳಿತ ಮಂಡಳಿ ಸೂಚಿಸಿರುವಂಥವು.

ಆರು ವರ್ಷದ ಎಳೆಯ ಕಂದಮ್ಮನಿಗೆ ಎಷ್ಟು ಹೊರೆ!. ಮಾನಸಿಕ-ದೈಹಿಕ ಹಿಂಸೆ. ಎರಡನೇ ತರಗತಿಗೆ ಒಟ್ಟಾರೆ ಒಂದು ಪೂರಕ ಪಠ್ಯ, ಒಂದು ಚಟುವಟಿಕೆ ಪುಸ್ತಕ ಸೇರಿದಂತೆ ಈ ಪುಟಾಣಿಗೆ 9 ಪಠ್ಯ ಪುಸ್ತಕಗಳಿವೆ. 6 ನೋಟ್ ಪುಸ್ತಕಗಳು, 5 ಮನೆಗೆಲಸದ ಪುಸ್ತಕಗಳು, 2 ಕಾಪಿ ಪುಸ್ತಕಗಳು, 2 ಚಿತ್ರಕಲೆಯ ಪುಸ್ತಕಗಳು ಇದಲ್ಲದೆ ಶಾಲೆಯಲ್ಲಿ ಪರೀಕ್ಷಾ ಪುಸ್ತಕಗಳು.

ನಮ್ಮ ವಿದ್ಯಾರ್ಥಿಗಳಿಗೆ ಬೆಳಗಿನಿಂದ ಸಂಜೆಯವರೆಗೆ ತರಗತಿಗಳು, ಪಾಠ, ವಿಶೇಷ ತರಗತಿಗಳು, ಕಂಪ್ಯೂಟರ್ ತರಬೇತಿ, ಮನೆಗೆ ಬಂದರೂ ಪುರುಸೊತ್ತಿಲ್ಲ, ಉಲ್ಲಾಸವಿಲ್ಲ. ಟ್ಯೂಷನ್ ಭೂತ ಕಾಡುತ್ತದೆ. ಟ್ಯೂಷನ್ ಕೊರೆತ ಮುಗಿದರೆ ಶಾಲೆಯಲ್ಲಿ ಕೊಟ್ಟ ಮನೆಗೆಲಸ. ನೆಮ್ಮದಿಯ ನಿದ್ರೆಯಿಲ್ಲ. ಶಿಕ್ಷೆಯ ಭಯ. ಪರೀಕ್ಷೆಯ ಭಯ. ಮೊದಲ ರ್‍ಯಾಂಕ್ ಬರಬೇಕೆಂಬ ಒತ್ತಡ. (ಎಲ್ಲರೂ ಮೊದಲ ರ್‍ಯಾಂಕ್ ಬರುವುದಾದರೂ ಹೇಗೆ) ಹೆಚ್ಚು ಅಂಕ ಗಳಿಸಬೇಕೆಂಬ ಒತ್ತಾಯ. ಹೇಗಾದರೂ ಮಾಡಿ ಕೊನೆಗೆ ಎಸ್‌ಎಸ್‌ಎಲ್‌ಸಿ-ಪಿಯುಸಿಯಲ್ಲಿ 90-95, ಶೇ ಅಂಕ ಗಳಿಸುವುದೇ ಶಿಕ್ಷಣದ ಹಾಗೂ ಜೀವನದ ಪರಮ ಧ್ಯೇಯ.

ಅರ್ಜುನನಿಗೆ ಮರ, ಮರದ ಮೇಲಿನ ಪಕ್ಷಿ, ಗರಿ-ರೆಕ್ಕೆಪುಕ್ಕ, ಅಕ್ಕಪಕ್ಕ ಏನೂ ಕಾಣದೆ ಹಕ್ಕಿಯ ಕಣ್ಣು ಮಾತ್ರ ಕಾಣುತ್ತಿತ್ತಲ್ಲ ಹಾಗೆ. ಅಂಕ ಗಳಿಸುವುದೊಂದೇ ಶಿಕ್ಷಣದ ಅಂತಿಮ ಧ್ಯೇಯ.

ಇದು ನಮ್ಮಲ್ಲಿ ಆಧುನಿಕ-ಉತ್ತಮ-ಪ್ರತಿಷ್ಠಿತ-ಶಿಕ್ಷಣ ಪದ್ಧತಿ ಎಂದು ಬಿಂಬಿಸಲಾಗುತ್ತಿರುವ ಶಿಕ್ಷಣ ಪದ್ಧತಿಯ ಮಾದರಿ.

ವಿಚಾರ-ವಿಜ್ಞಾನ-ನೈತಿಕತೆ-ಕೆಲಸ-ಇವುಗಳನ್ನು ಕಲಿಯಲು ಯಾವುದೇ ಭಾಷೆಯ ಮಿತಿ ಇಲ್ಲ.

ಮಾತೃ ಭಾಷೆಯಲ್ಲಿ ಆಲೋಚಿಸುವ, ಗ್ರಹಿಸುವ, ಕಲಿಯುವ ಮಗು ಬೇರೆ ಭಾಷೆಯಲ್ಲಿ ಕಲಿಯುವುದಕ್ಕಿಂತ ಹೆಚ್ಚು ಸಹಜ ವಾಗಿ, ಸುಲಭವಾಗಿ ಕಲಿಯಲು ಸಾಧ್ಯ. ಸೃಜನಶೀಲವಾಗಿ ಯೋಚಿಸಲು ಸಾಧ್ಯ.

ಮಗುವಿನ ಮಾನಸಿಕ - ದೈಹಿಕ ವಾದ ಸಮಗ್ರ ಬೆಳವಣಿಗೆಗೆ ಆಟಪಾಠ್ಯಾಯುವ- ಮನುಜಪ್ರೀತಿಮತಿ ಈ ಎಲ್ಲವೂ ಬೇಕು. ಮಗುವಿನ ಗ್ರಹಿಕೆಯ ಸಾಮರ್ಥ್ಯದಲ್ಲಿ ವಯಸ್ಸಿಗೆ ತಕ್ಕಂತೆ ಒಂದು ಮಿತಿ ಇದೆ. ಎಲ್ಲವನ್ನು ಒಟ್ಟಿಗೆ ಯಾಂತ್ರಿಕವಾಗಿ ಮಗುವಿನ ಮೇಲೆ ಹೇರಿ ಒತ್ತಡ ಸೃಷ್ಟಿಸುವುದರಿಂದ ಮಗುವಿನ ಮನಸ್ಸಿನ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತದೆ.



ಶಿಕ್ಷಣ ಎಂದರೆ ಕೇವಲ ಉತ್ತರಗಳನ್ನು ಉರು ಹಚ್ಚುವುದಲ್ಲ - ತಿಳುವಳಿಕೆ ಎಂಬುದು ಕೇವಲ ಪಠ್ಯ ಪುಸ್ತಕದಲ್ಲಿ ಮಾತ್ರವೇ ಇಲ್ಲ. ಆಟ-ನೋಟ- ಪ್ರಯೋಗಗಳ ಮೂಲಕ ಕಲಿಯ ಬಹುದಾದ ಅವಕಾಶ ಅಗಾಧವಾಗಿದೆ. ನಮ್ಮ ಶಾಲೆ-ಮನೆಯ ಪಕ್ಕದ ತೋಟದಲ್ಲಿಯೂ ಅದ್ಭುತ ವಿಜ್ಞಾನ 'ರಹಸ್ಯ'ಗಳ ಕುರಿತ 'ಜ್ಞಾನೋದಯ' ಪಡೆಯುವುದು ಸಾಧ್ಯ ಎಂಬ ವೈಜ್ಞಾನಿಕ ಸತ್ಯವು ನಮಗೆ ಅರ್ಥವಾಗುವುದು ಯಾವಾಗ? ನಮ್ಮ ಭವಿಷ್ಯದ ಜನಾಂಗ ವನ್ನು ತಾವು ಓದುವ ಅವಧಿಯಲ್ಲಿ ವಿಜ್ಞಾನ- ವಿಚಾರಗಳನ್ನು ಉರು ಹಚ್ಚಿ ಅಂಕ ಪಡೆದು ಜೀವನದಲ್ಲಿ ಮಾತ್ರ ಅದೇ ಮೌಢ್ಯ-ಕಂದಾಚಾರ ಗಳನ್ನು ನಮ್ಮೊಂದಿಗೆ ಮುಂದಕ್ಕೊಯ್ಯುವ ಹತ್ತರಲ್ಲಿ ಮತ್ತೊಂದು ಪ್ರಾಣಿಗಳನ್ನಾಗಿಸಬೇಕೆ? ಸೃಜನಶೀಲತೆ, ಸ್ವಂತಿಕೆಯಿಲ್ಲದ, ಅಂಕ ಗಳಿಸುವ ಯಂತ್ರಗಳಾಗಿ ನಾವು ನಮ್ಮ ವಿದ್ಯಾರ್ಥಿಗಳನ್ನು ರೂಪಿಸಬೇಕೆ? ಇಂತಹ ಪ್ರಶ್ನೆಗಳು ಈಗ ಮತ್ತಷ್ಟು ಗಂಭೀರವಾಗಿ ನಮ್ಮ ಮುಂದೆ ಬಂದಿವೆ, ಬರುತ್ತಿವೆ.

ಏಕೆಂದರೆ ಈಗ ಜಾಗತೀಕರಣದ ಬಿರುಗಾಳಿಗೆ ಎಲ್ಲ ದೇಶಗಳ ರಕ್ಷಣಾ ಕೋಟೆಗಳನ್ನು ಪುಡಿ ಗುಟ್ಟುತ್ತಿದೆ. ಖಾಸಗೀಕರಣ- ಉದಾರೀಕರಣ- ಮುಕ್ತ ಪೈಪೋಟಿ ಇಂತಹ ನೀತಿಗಳು ಭರದಿಂದ ಜಾರಿಯಾಗುತ್ತಾ, ಮನುಷ್ಯನಲ್ಲಿ ಅಭದ್ರತೆಯ ಭಯ ಆತಂಕವನ್ನು ಸೃಷ್ಟಿಸುತ್ತಾ, ಸ್ಪರ್ಧೆ-ಪೈಪೋಟಿಯ ಪರಿಸರವನ್ನು ಸೃಷ್ಟಿಸುತ್ತಾ ನಡೆದಿದೆ. ಇದರ ನೇರ ಪರಿಣಾಮ ಶಿಕ್ಷಣ ರಂಗದ ಮೇಲೂ ತೀವ್ರವಾಗಿದೆ. ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಉಳಿಯಬೇಕಾದರೆ, ಪರೀಕ್ಷೆಗಳಲ್ಲಿ ಗಳಿಸುವ ಅಂಕಗಳೇ ಅರ್ಹತೆಯ ಅಳತೆಗೋಲಾಗಿರುವಾಗ ಹೆಚ್ಚು ಅಂಕಗಳಿಸುವ ಸ್ಪರ್ಧೆ ತೀವ್ರಗೊಂಡಿದೆ. ಪರೀಕ್ಷಾ ಕೇಂದ್ರಿತ ಶಿಕ್ಷಣ ಪದ್ಧತಿ ಮತ್ತಷ್ಟು ಬಲಗೊಳ್ಳುತ್ತಿದೆ. ಎಲ್ಲ ಶಾಲೆಗಳು ತಾವು ರ್‍ಯಾಂಕುಗಳನ್ನು ಉತ್ಪಾದಿಸುವ ಕಾರ್ಖಾನೆಗಳಾಗಬೇಕೆಂಬ ಬಯಕೆ ಹೊತ್ತಿವೆ. (ಕರ್ನಾಟಕದಲ್ಲಿ ರ್‍ಯಾಂಕ್ ಪದ್ಧತಿ ರದ್ದಾದದ್ದು ಒಂದು ಒಳ್ಳೆಯ ಕೆಲಸ)

ಆಳುವ ಸರ್ಕಾರಗಳ ಮುಕ್ತ ಪ್ರೋತ್ಸಾಹ, ಕುಮ್ಮಕ್ಕಿನಿಂದಾಗಿ ಶಿಕ್ಷಣ ವ್ಯಾಪಾರೀಕರಣ ಗೊಂಡಿದೆ. ವಾಸ್ತವವಾಗಿ ಪೈಪೋಟಿ ಎಂಬುದು ಒಂದು ವ್ಯಾಪಾರವಾಗಿದೆ. ಶಿಕ್ಷಣದ ಬಗೆಗೆ ಇರುವ ಹಲವು ತಪ್ಪು ಕಲ್ಪನೆ-ಮೂಢನಂಬಿಕೆಗಳ ಜೊತೆಗೆ, ತಮ್ಮ ಶಾಲೆಯಲ್ಲಿ ಇತರ ಶಾಲೆ ಗಳಿಗಿಂತ ಚೆನ್ನಾಗಿ ಪಾಠ ಹೇಳಿಕೊಡಲಾಗುವುದು, ನಮ್ಮ ಶಾಲೆಯಲ್ಲಿ ಶಿಸ್ತು ಉತ್ತಮ ವಾಗಿದೆ - ನಮ್ಮ ಶಾಲೆಯಲ್ಲಿ ಹೆಚ್ಚು ಪಾಠ ಹೇಳಲಾಗು ವುದು - ನಮ್ಮ ಶಾಲೆಯಲ್ಲಿ ಹೆಚ್ಚು ಪುಸ್ತಕಗಳನ್ನು ನಿಗದಿಗೊಳಿಸಲಾಗಿದೆ. ನಮ್ಮ ಶಾಲೆಗೆ ಹೆಚ್ಚು ರ್‍ಯಾಂಕುಗಳು ಬಂದಿವೆ ಎಂದು ತೋರಿಸಿಕೊಳ್ಳುವ ಸ್ಪರ್ಧೆ ತೀವ್ರಗೊಳ್ಳುತ್ತಿದೆ. ಈ ಎಲ್ಲವುಗಳ ಪರಿಣಾಮ-ಮುಗ್ಧ ವಯಸ್ಸಿನ ಮಕ್ಕಳ ಮೇಲೆ. ಮಾನಸಿಕ - ದೈಹಿಕ ಹೊರೆ ತೀವ್ರವಾಗುತ್ತಿವೆ.

ಈ ಪುಸ್ತಕಗಳ ಹೊರೆಯ ಭಾರದ ಅಡಿಯಲ್ಲಿ ಪ್ರತಿಭೆ ಅರಳುವುದು ಹೇಗೆ? ಈ ಮಾಂತ್ರಿಕ-ಪೈಪೋಟಿ ಒತ್ತಡದಲ್ಲಿ ಎಷ್ಟು ಜನ ಐನ್‌ಸ್ಟೀನ್ ಗಳು - ಚಂದ್ರ ಶೇಖರ್‌ಗಳು ಕುವೆಂಪು, ಸಿ.ವಿ. ರಾಮನ್‌ರಂತಹ ವಿಜ್ಞಾನಿ, ಬೇಂದ್ರೆ- ದೇವನೂರು ಮಹದೇವ-ನಂತಹವರು ಧ್ಯಾನ್‌ಚಂದ್‌ರಂತಹ ಪ್ರತಿಭೆಗಳು ಕಮರಿ ಹೋಗುತ್ತಿವೆಯೋ ಯಾರು ಬಲ್ಲರು?

ಪರೀಕ್ಷೆಗಳಲ್ಲಿ ಸರಿಯಾಗಿ ಬರೆಯಲಾಗದ್ದಕ್ಕೆ, ತಾನು ನಿರೀಕ್ಷಿಸಿದಂತೆ ಅಂಕಗಳು ಬಾರದ್ದಕ್ಕೆ, ಅನುತ್ತೀರ್ಣನಾದದ್ದಕ್ಕೆ - ತಾನು ಬಯಸಿದ ಕಾಲೇಜಿನಲ್ಲಿ-ಕೋರ್ಸ್‌ನಲ್ಲಿ ಪ್ರವೇಶ ಸಿಗದ್ದಕ್ಕೆ ವಿಷ ಕುಡಿದೋ-ಕೆರೆ ಬಾವಿಗೆ ಹಾರಿಯೋ - ರೈಲಿನ ಗಾಲಿಗೆ ತಲೆ ಕೊಟ್ಟೋ ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಹಲವಾರು ವರದಿಯಾಗುತ್ತಿರುವುದನ್ನು ನೋಡಿದರೆ ವಿದ್ಯಾರ್ಥಿ ಸಮುದಾಯದ ಮೇಲೆ ಇರುವ ಮಾನಸಿಕ ಒತ್ತಡ ಎಷ್ಟಿದೆ ಎಂಬುದು ಅರ್ಥವಾಗುತ್ತದೆ.

ಅದೃಷ್ಟವಶಾತ್ ನಾವು ಆಧುನಿಕ ಮಾದರಿ-ಉತ್ತಮ ಎಂದು ಭಾವಿಸುತ್ತಿರುವ ಈ ಶಿಕ್ಷಣ ಪದ್ಧತಿ ನಮ್ಮ ಗ್ರಾಮಾಂತರ ಪ್ರದೇಶ, ಹಳ್ಳಿಗಳಲ್ಲಿ ಬೇರು ಬಿಟ್ಟಿಲ್ಲ. ನಗರಗಳಲ್ಲಿರುವಷ್ಟು ಒತ್ತಡಗಳನ್ನು ಗ್ರಾಮಾಂತರದಲ್ಲಿ ಶಿಕ್ಷಣ ಸೃಷ್ಟಿಸುತ್ತಿಲ್ಲ ಎಂಬುದು ಸಮಾಧಾನದ ಸಂಗತಿ. (ಆದರೆ ಅಲ್ಲಿಯ ಸಮಸ್ಯೆಗಳೇ ಬೇರೆ).

ಇಂತಹ ಅವೈಜ್ಞಾನಿಕ ಭಾಷಾ ನೀತಿ, ವಿಪರೀತ ಪಠ್ಯ-ಪಾಠಗಳು, ಯಾಂತ್ರಿಕ ಕಲಿಕಾ ವಿಧಾನ-ಒತ್ತಡ ಇತ್ಯಾದಿಗಳ ಫಲವಾಗಿ ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಆಸಕ್ತಿಯನ್ನೇ ಕಳೆದುಕೊಳ್ಳುವುದು ಶಾಲೆಗೆ 'ಚಕ್ಕರ್' ಹೊಡೆದು ಬೀದಿಯಲ್ಲಿ ತಿರುಗುವುದು. ಹಲವು ಸಂದರ್ಭಗಳಲ್ಲಿ ಮನೆ ಶಾಲೆ ಎರಡನ್ನು ಬಿಟ್ಟು ಓಡಿಹೋಗುವುದು - ಈ ಸಮಾಜ-ವ್ಯವಸ್ಥೆಯ ವಿರುದ್ಧ ಒಂದು ರೀತಿಯ ಬಂಡಾಯ-ಪ್ರತಿಭಟನೆಯ ಮನೋಭಾವ ರೂಪಿಸಿಕೊಂಡು ದಾರಿ ತಪ್ಪಿ ಸಮಾಜಘಾತುಕರು, ಪೋಲಿ-ಪೋಕರಿ, ರೌಡಿಗಳಾಗಿ ಪರಿವರ್ತಿತರಾಗುವುದು ವ್ಯಾಪಕವಾಗಿದೆ.

ಶಿಕ್ಷಣ ವ್ಯವಸ್ಥೆಯಲ್ಲಿನ ಈ ದೋಷ ನಮ್ಮ ದೇಶದ ಸಮಸ್ಯೆ ಮಾತ್ರವಲ್ಲ ಹಲವು ದೇಶಗಳಲ್ಲಿದೆ. ಹಲವು ದೇಶಗಳಲ್ಲಿ ಶಿಕ್ಷಣವನ್ನು ವೈಜ್ಞಾನಿಕವಾಗಿ - ಸರಳವಾಗಿ ದೇಶದ ಆರ್ಥಿಕ-ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗಿ ರೂಪಿಸುವ ಪ್ರಯತ್ನ-ವೈಜ್ಞಾನಿಕವಾಗಿ ವಿದ್ಯಾರ್ಥಿಗಳಿಗೆ ಸರಳವಾದ-ಹಗುರವಾದ, ಕುತೂಹಲ, ಉಲ್ಲಾಸ ತರುವ, ಆಸಕ್ತಿ ಮೂಡಿಸುವಂತಹ ಶಿಕ್ಷಣ ಪದ್ಧತಿಯನ್ನು ರೂಪಿಸಲು ಪ್ರಯತ್ನ ನಡೆದಿದೆ.

ಚೀನಾ ಈ ನಿಟ್ಟಿನಲ್ಲಿ ಹೊಸ ಪ್ರಯೋಗವನ್ನು ಕೈಗೆತ್ತಿಕೊಂಡಿದೆ. ಮುಖ್ಯವಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹೊರೆಯನ್ನು ಇಳಿಸುವ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಪ್ರಯೋಗ-ಅನುಭವಗಳು ಭಾರತಕ್ಕೂ ಸಾಕಷ್ಟು ಪ್ರಯೋಜನ ಕೊಡಬಲ್ಲವು.

ಭಾರತದಂತೆಯೇ ಅಗಾಧ 'ಮಾನವ ಸಂಪನ್ಮೂಲ'ವನ್ನುಳ್ಳ ಚೀನಾ ದೇಶದಲ್ಲಿ ದೇಶದ ಪ್ರತಿಯೊಬ್ಬ ಮಗುವಿಗೂ 9ನೇ ತರಗತಿಯವರೆಗ ಶಿಕ್ಷಣ ಎಂಬುದು ಕಡ್ಡಾಯ. 6 ವರ್ಷಗಳ ಪ್ರಾಥಮಿಕ ಶಿಕ್ಷಣ, ಮೂರು ವರ್ಷಗಳ ಪ್ರೌಢ ಶಿಕ್ಷಣ. ನಂತರದ ಕಾಲೇಜು ಶಿಕ್ಷಣಕ್ಕೆ ಚೀನಾ ದೇಶದಲ್ಲಿ ಮುಕ್ತವಾದ ಅವಕಾಶವಿಲ್ಲ. ಒಟ್ಟು ವಿದ್ಯಾರ್ಥಿಗಳ ಶೇ 5 ರಷ್ಟು ಜನ ಮಾತ್ರ ಚೀನದಲ್ಲಿ ಕಾಲೇಜು ಶಿಕ್ಷಣ ಪಡೆಯುತ್ತಾರೆ. ಕಾಲೇಜು ಶಿಕ್ಷಣದ ಪ್ರವೇಶಕ್ಕೆ ಅರ್ಹತೆಯೊಂದೇ ಆಧಾರ. ಚೀನಾ ದೇಶದಲ್ಲಿ 1966-76 ರ ಅವಧಿಯ ಸಾಂಸ್ಕೃತಿಕ ಕ್ರಾಂತಿಯ ನಂತರದ ದಿನಗಳಲ್ಲಿ ಇಂದಿನ ಈ ಶಿಕ್ಷಣ ವ್ಯವಸ್ಥೆ ರೂಪುಗೊಂಡಿದೆ. ತಮ್ಮ ಮಕ್ಕಳು ಉನ್ನತ ಶಿಕ್ಷಣ ಪಡೆಯಬೇಕೆಂಬ ಹಂಬಲದೊಂದಿಗೆ ಪೋಷಕರು ತಮ್ಮ ಮಕ್ಕಳ ಮೇಲೆ ಉನ್ನತ ಶಿಕ್ಷಣದ ಅರ್ಹತೆಗಳಿಸಲು ಅಗತ್ಯವಾದ ಹೆಚ್ಚು ಅಂಕವನ್ನು ಗಳಿಸಬೇಕೆಂಬ ಒತ್ತಡವನ್ನು ಹೇರುತ್ತಾರೆ. ನಮ್ಮಂತೆ ಚೀನಾದಲ್ಲಿಯೂ ಪರೀಕ್ಷೆ ಕೇಂದ್ರಿತ ಶಿಕ್ಷಣ ಪದ್ಧತಿಯೇ ವ್ಯಾಪಿಸಿದೆ. ಜೊತೆಗೆ ಚೀನಾದಲ್ಲಿ ತರಲಾಗುತ್ತಿರುವ ಹಲವು ಉದಾರನೀತಿಗಳ ಪರಿಣಾಮ ವಿದ್ಯಾರ್ಥಿಗಳ ಅಂಕಗಳ ಗಳಿಕೆಯ ಮೇಲೆ ಮತ್ತಷ್ಟು ಒತ್ತುಬಿದ್ದು ಅಧಿಕ ಪುಸ್ತಕಗಳ ಹೊರೆ - ಹೆಚ್ಚು ಅವಧಿಯ ಪಾಠ-ಹೆಚ್ಚು ಮನೆಗೆಲಸ ಇತ್ಯಾದಿ ಶೈಕ್ಷಣಿಕ ಹೊರೆಯ ಭಾರ ವಿದ್ಯಾರ್ಥಿಗಳ ತಲೆಯ ಮೇಲೆ ಕೂತಿದೆ. ಚೀನ ದೇಶದ ಜೆ-ಜಿಯಾಂಗ್ ಎಂಬ ಪ್ರಾಂತ್ಯದಲ್ಲಿ ಜಿನ್ ಹುವಾ ಎಂಬ ವಿದ್ಯಾರ್ಥಿ ಈ ಪಠ್ಯ-ಮನೆಗೆಲಸಗಳ ಒತ್ತಡ ತಾಳಲಾರದೆ ಸುತ್ತಿಗೆಯಿಂದ ಹೊಡೆದು ತನ್ನ ತಾಯಿಯನ್ನೇ ಕೊಂದ ಘಟನೆ-ಇಡೀ ಚೀನಾವನ್ನು ದಂಗುಬಡಿಸಿತು. ಇಂತಹ ಪರಿಣಾಮಗಳ ಹಿನ್ನೆಲೆಯಲ್ಲಿ ಮಕ್ಕಳ ಶೈಕ್ಷಣಿಕ ಹೊರೆಯನ್ನು ಕಡಿತಗೊಳಿಸುವ ಚಿಂತನೆಗೆ ಹೊಸ ಚಾಲನೆ ಸಿಕ್ಕಿದೆ. ಕ್ವಿಯಾಟೋವೋ ಎಂಬ ಪ್ರದೇಶದಲ್ಲಿ ಇಬ್ಬರು ಶಾಲಾ ಮಕ್ಕಳು ತನ್ನ ಸಹಪಾಠಿಯ ಹಣ ಕಸಿದುಕೊಂಡು ಆತನನ್ನು ಚಾಕುವಿನಿಂದ ಇರಿದು ಕೊಂದ ಘಟನೆ ನಡೆದಂದಿನಿಂದ ಶಿಕ್ಷಣದಲ್ಲಿ ನೈತಿಕತೆಯ ಕಲಿಸುವಿಕೆಗೆ ಮತ್ತಷ್ಟು

ಮುಂದಿನ ಪುಟಕ್ಕೆ


ಒತ್ತು ಕೊಡಬೇಕೆಂಬ ಅಭಿಪ್ರಾಯಗಳು ಮೂಡಿಬಂದು ಈಗ ಸುಧಾರಣೆಗಳು ಆರಂಭವಾಗಿವೆ.

ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಮುಖ್ಯ ವಿಷಯಕ್ಕೆ ಒಂದೇ ಪಠ್ಯಪುಸ್ತಕ-ಪೂರಕ ಹಾಗೂ ಮಾರ್ಗದರ್ಶಿ ಪಠ್ಯಗಳ ರದ್ದು - ವಿಶೇಷ ತರಗತಿಗಳ ರದ್ದು - ಒಂದು ಮತ್ತು ಎರಡನೇ ತರಗತಿಯ ಮಕ್ಕಳಿಗೆ 'ಮನೆಗೆಲಸ ರದ್ದು' - ಮೂರು ಮತ್ತು ನಾಲ್ಕನೇ ತರಗತಿಯ ವಿದ್ಯಾರ್ಥಿಗಳಿಗೆ ಕೇವಲ ಒಂದು ಗಂಟೆಗೆ ಮಾತ್ರ ಆಗುವಷ್ಟು ಮನೆಗೆಲಸ - ಪ್ರೌಢ ಶಿಕ್ಷಣದ ಪ್ರವೇಶ ಪರೀಕ್ಷೆ ರದ್ದು - ಇತ್ಯಾದಿ ಹಲವು ಕ್ರಮಗಳನ್ನು ಈಗ ಆರಂಭಿಸಲಾಗಿದೆ.

ಸುಧಾರಣೆಗಳು ಆರಂಭವಾಗಿದ್ದರೂ ಹಳೆಯ ಪದ್ಧತಿ ಇನ್ನೂ ವ್ಯಾಪಕವಾಗಿದೆ. ಆದರೆ ವಿದ್ಯಾರ್ಥಿಗಳ ಪಠ್ಯದ ಹೊರೆಯನ್ನು ಹಗುರಗೊಳಿಸುವ ಕ್ರಮ ಹಲವು ಉತ್ತಮವಾದ ಫಲಿತಾಂಶಗಳನ್ನು ತಂದಿದೆ. ವಿದ್ಯಾರ್ಥಿಗಳು ಕ್ರೀಡಾ-ಸಾಂಸ್ಕೃತಿಕ ಚಟುವಟಿಕೆಗಳು - ಹಾಗೂ ಲಲಿತ ಕಲೆಗಳಲ್ಲಿ ಮುಂಚೆಗಿಂತಲೂ ಹೆಚ್ಚು ಮುಕ್ತವಾಗಿ - ಪಾಲ್ಗೊಳ್ಳಲು ಸಾಧ್ಯವಾಗುತ್ತಿದೆ.

ತಮ್ಮ ಮಕ್ಕಳು ಈಗ ನೃತ್ಯ-ಸಂಗೀತ-ಚಿತ್ರರಚನೆ-ಕ್ರೀಡೆಗಳು-ಅಭಿನಯ ಇತ್ಯಾದಿ ಹಲವು ಕ್ರೀಡಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಬಹುದು. ಮಾತ್ರವಲ್ಲ, ಸಂಗೀತ-ನೃತ್ಯ ಇತ್ಯಾದಿ ಕಲಿಯುವ ಸಮಯದಲ್ಲಿ ತಾವು ಅಲ್ಲಿದ್ದು ಸೂಕ್ತ ಗಮನ ಕೊಡಬಹುದು. ಇದಲ್ಲದೆ ಸಂಗೀತ-ನೃತ್ಯ-ಚಿತ್ರಕಲೆ-ಕ್ರೀಡೆಗಳಿಗೂ ಅಂಕಗಳನ್ನು ನೀಡುವಂತಹ ಪ್ರಯತ್ನಗಳು ಸಹ ಸಾಗಿವೆ. ಹೆಚ್ಚಿನ ಪೋಷಕರು ಸುಧಾರಣೆಯ ಪ್ರಯತ್ನಗಳಿಂದ ಸಂತಸಗೊಂಡಿದ್ದಾರೆ.

ಬೀಜಿಂಗ್ ಚೌಯಾಂಗ್ ಜಿಲ್ಲೆಯ ಪ್ರಯೋಗಾತ್ಮಕ ಪ್ರಾಥಮಿಕ ಶಾಲೆಯ ಶಿಕ್ಷಕಿ ಕಲಿಕೆ ವಿಧಾನದಲ್ಲಿ ಹೊಸ ವಿಕ್ರಮ ಸಾಧಿಸಿದ್ದಾರೆ. ಆಕೆ ಮಕ್ಕಳಿಗೆ ಮನೆಗೆಲಸ ಕೊಡುವುದಿಲ್ಲ. ವಿಪರೀತ ಪಠ್ಯಪುಸ್ತಕಗಳ ಹೊರೆ ಇಲ್ಲ. ಒತ್ತಡ ಇಲ್ಲ. ಆದರೆ ಆಕೆ ಇತರರಿಗೆ ಸುಮಾರು ಇಪ್ಪತ್ತು ತರಗತಿಗಳಲ್ಲಿ ಕಲಿಸಲು ಸಾಧ್ಯವಾಗುವ ಗಣಿತವನ್ನು ಒಂದೇ ತರಗತಿಯಲ್ಲಿ ಸರಳವಾಗಿ ಕಲಿಸಬಲ್ಲರು. ಈ ಶಿಕ್ಷಕಿಯ ವಿದ್ಯಾರ್ಥಿಗಳು ಇತರ ಶಾಲೆಗಳ ವಿದ್ಯಾರ್ಥಿಗಳಿಗಿಂತ ಕಲಿಕೆಯಲ್ಲಿ ಸಾಕಷ್ಟು ಮುಂದಿದ್ದಾರೆ. ಇದೇ ಸಂದರ್ಭದಲ್ಲಿ ಜೆಂಗ್ ಹುವಾ ವಿಶ್ವವಿದ್ಯಾಲಯ ವಿದ್ಯಾರ್ಥಿಯೊಬ್ಬನ ಪೋಷಕರ ಪ್ರಶ್ನೆ ಅರ್ಥಗರ್ಭಿತವಾಗಿದೆ. ತನ್ನ ಮಗು ಯಾವತ್ತೂ ಸಹ ಅಂಕ ಗಳಿಕೆಯಲ್ಲಿ ಮುಂದಿದ್ದಾನೆ. ಅದಕ್ಕಾಗಿ ನಾನು ಹೆಮ್ಮೆಯಿಂದಿದ್ದೆ. ಆದರೆ ಆತ ಅಂಕ ಗಳಿಕೆಯಲ್ಲಿ ಮುಂದಿರುವಾಗಲೇ ಆತನಿಗೆ ಹಲವು ಸಮಸ್ಯೆಗಳಿವೆ.


ಚೀನಾದಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿರುವ ವಿದ್ಯಾರ್ಥಿಗಳು

ಅಪರಿಚಿತರೊಂದಿಗೆ ಅವನು ಸ್ವತಂತ್ರವಾಗಿ ವ್ಯವಹರಿಸಲಾರ, ಕಷ್ಟದ ಪರಿಸ್ಥಿತಿಯಲ್ಲಿ ಸ್ವತಂತ್ರವಾದ ನಿರ್ಧಾರವನ್ನು ತೆಗೆದುಕೊಳ್ಳಲಾರ, ಸಮಾಜದ ಬಗ್ಗೆ ಯಾವ ರೀತಿಯಲ್ಲೂ ಕಾಳಜಿ ಎಂಬುದೇ ಇಲ್ಲ. ಇಂತಹ ಶಿಕ್ಷಣದಿಂದ ಆತ ಜೀವನದಲ್ಲಿ ಏನು ತಾನೆ ಸಾಧಿಸಬಲ್ಲ? ಇಂತಹ ವಿದ್ಯಾರ್ಥಿಗಳು ದೇಶಕ್ಕೆ ಉಜ್ವಲ ಭವಿಷ್ಯ ರೂಪಿಸಬಲ್ಲರೇ?

ಈ ಪ್ರಶ್ನೆ ನಮ್ಮ ದೇಶಕ್ಕೆ ಮತ್ತಷ್ಟು ಚೆನ್ನಾಗಿ ಅನ್ವಯಿಸುತ್ತದೆ. ಆದರೆ ಚೀನಾದ ಶೈಕ್ಷಣಿಕ ಸುಧಾರಣೆಯಲ್ಲಿ ತೊಡಕೇ ಇಲ್ಲವೆಂದಲ್ಲ. ಶಾಲೆಯಲ್ಲಿ ಪಾಠ-ಪಠ್ಯ ಪುಸ್ತಕ-ಮನೆಗೆಲಸದ ಹೊರೆ ಕಡಿಮೆಯಾದಾಗ, ತಂದೆತಾಯಿಗಳು ಖಾಸಗಿಯಾಗಿ ಟ್ಯೂಷನ್ ಕೊಡಿಸುವುದು. ಪೂರಕ ಪಠ್ಯಗಳನ್ನು ತಾವೇ ಕೊಂಡು ತಂದು ಓದಿಸುವುದು, ತಾವೇ ಮನೆಗೆಲಸ ಕೊಡುವುದು, ಹೆಚ್ಚು ಅಂಕಗಳಿಕೆಗಾಗಿ ಹಪಹಪಿಸುವುದು ಇಂತಹ ಪ್ರವೃತ್ತಿ ಆರಂಭವಾಗಿದೆ. ಹೊರೆ ಕಡಿಮೆಯಾಗಿರುವುದರಿಂದ ಉಳಿದ ಸಮಯದಲ್ಲಿ ಮಕ್ಕಳು ಏನು ಮಾಡಬೇಕೆಂಬುದು ಕೆಲವರಿಗೆ ತೋಚದಾಗಿದೆ.

ಈ ಎಲ್ಲದರ ನಡುವೆಯೂ ಶೈಕ್ಷಣಿಕ ಹೊರೆ ಇಳಿಸುವ ಸುಧಾರಣೆಯ ಪ್ರಯತ್ನಗಳು ಮುಂದುವರೆದಿವೆ. ಹಲವೆಡೆ ಅತ್ಯುತ್ತಮ ಫಲಿತಾಂಶಗಳನ್ನು ನೀಡುತ್ತಿದೆ.

ನಮ್ಮ ದೇಶದಲ್ಲಿ ಶೈಕ್ಷಣಿಕ ಸುಧಾರಣೆಯ ಬಗೆಗೆ ಬಹಳ ಜನ ಮಾತನಾಡುವುದಿದೆ. ಆದರೆ ಈ ನಿಟ್ಟಿನಲ್ಲಿ ಎಲ್ಲಿಯೂ ಗಂಭೀರವಾದ ಪ್ರಯತ್ನಗಳು ಆರಂಭವಾದಂತೆ ಕಾಣುವುದಿಲ್ಲ. ಶಿಕ್ಷಣದಂತಹ ಒಂದು ಮಹತ್ವದ ವಿಚಾರದಲ್ಲಿ ಇದೇ ಕೊನೆ ಎಂದು ಎಲ್ಲಿಯೂ ನಿಲ್ಲಬೇಕಿಲ್ಲ. ನಿರಂತರ ಪ್ರಯೋಗ-ಸಂಶೋಧನೆಗಳು ಸುಧಾರಣೆಗಳು ನಡೆಯಬೇಕಿದೆ.

ದೇಶದ ಭವಿಷ್ಯದ ದಿನಗಳ ಅಗತ್ಯತೆ, ಕೈಗಾರಿಕೆ-ಕೃಷಿ, ವಾಣಿಜ್ಯ-ವ್ಯಾಪಾರ-ಸಾಮಾಜಿಕ ಪ್ರಶ್ನೆಗಳಲ್ಲಿ ಒಂದು ದೇಶ ತನ್ನ ಮುಂದೆ ಇರಿಸಿಕೊಂಡ ಸವಾಲು-ಸಮಗ್ರ ಯೋಜನೆ-ಈ ಯೋಜನೆಗೆ ಪೂರಕವಾದಂತಹ ಶಿಕ್ಷಿತ ಸಮುದಾಯವನ್ನು ತರಬೇತುಗೊಳಿಸುವ ಉದ್ದೇಶಗಳೊಂದಿಗೆ ಯಾರಿಗೆ-ಎಷ್ಟು-ಯಾವ ಶಿಕ್ಷಣ ನೀಡಬೇಕೆಂದು ನಿರ್ಧರಿಸುವ ರಾಷ್ಟ್ರೀಯ ಶಿಕ್ಷಣ ನೀತಿ-ಸುಧಾರಣೆ ತರುವ ಮನಸ್ಸು ಯಾರಿಗಿದೆ. 'ಎಲ್ಲರಿಗೂ ಶಿಕ್ಷಣ' ಎಂಬುದಕ್ಕೆ ಬದಲಾಗಿ ಕೆಲವರಿಗೆ ಮಾತ್ರ 'ಉತ್ತಮ' ಶಿಕ್ಷಣ ಎಂಬ ನೀತಿಗಳೇ ಹರಿದು ಬರಲಾರಂಭಿಸಿವೆ.

ಹೊಸ ಹೊಸ ಉದ್ಯೋಗಗಳ ಸೃಷ್ಟಿಗೆ ಬದಲಾಗಿ ಉದ್ಯೋಗಗಳನ್ನು ನುಂಗುವ ಯೋಜನೆ-ನೀತಿಗಳೇ ಜಾರಿಯಾಗುತ್ತಿರುವಾಗ ಇರುವ ಅಲ್ಪಸ್ವಲ್ಪ ಉದ್ಯೋಗವಕಾಶಗಳಿಗೆ ತೀವ್ರ ಪೈಪೋಟಿ-ಅನಾರೋಗ್ಯಕರ ಸ್ಪರ್ಧೆ ಏರ್ಪಟ್ಟಿದೆ. ಅಂಕಗಳೇ ಅರ್ಹತೆಯ ಮಾನದಂಡ-ಹೇಗಾದರೂ ಮಾಡಿ ತನ್ನ ಮಗು ಹೆಚ್ಚು ಅಂಕ ಗಳಿಸಬೇಕು, ಕಾನ್ವೆಂಟಿಗೇ ಸೇರಬೇಕು. ಹೆಚ್ಚು 'ಹೋಂವರ್ಕ್' ಮಾಡಬೇಕು, 'ಪ್ರೈವೇಟ್ ಟ್ಯೂಷನ್'ಗೆ ಹೋಗಬೇಕು. ಆಟ-ಆಡಲೇ ಬಾರದು, ತಲೆ-ಎತ್ತಲೇ ಬಾರದು, ರಾಶಿ ರಾಶಿ ಪುಸ್ತಕ ಹೊರಬೇಕು ಎಂಬುದು, ಕನ್ನಡ-(ಮಾತೃಭಾಷೆ) ಆಡಲೇಕೂಡದು. ಇದೇ ಪ್ರತಿಷ್ಠೆ, ಇದೇ ಗೌರವ ಎಂದು ಭಾವಿಸಲಾಗುತ್ತಿದೆ.

ಶಿಕ್ಷಣವನ್ನು ವ್ಯಾಪಾರವಾಗಿಸಿಕೊಂಡಿರುವ ಶಕ್ತಿಗಳು ಈ ಅವಕಾಶವನ್ನು ಸಂಪೂರ್ಣ ದುರುಪಯೋಗ ಪಡಿಸಿಕೊಂಡು ಕೊಬ್ಬುತ್ತಿವೆ. ಕನ್ನಡ ಮಾತನಾಡಿದರೆ ದಂಡ, ಹೋಂವರ್ಕ್ ಮಾಡದಿದ್ದರೆ ದಂಡ, ಬರೆಯದಿದ್ದರೆ ದಂಡ, ತಜ್ಞರು ನಿಗದಿಗೊಳಿಸಿದ್ದಲ್ಲದೆ, ತಾವೇ ಹೇರುವ ಮತ್ತಷ್ಟು ಪುಸ್ತಕ - ಸರ್ಕಾರದ ಭಾಷಾ ನೀತಿ(ಅದೂ ಸಂಪೂರ್ಣ ವೈಜ್ಞಾನಿಕವೇನಲ್ಲ ಮತ್ತು ಪ್ರಾಮಾಣಿಕವೂ ಅಲ್ಲ) ಧಿಕ್ಕರಿಸಿ ತಮ್ಮದೇ ಭಾಷಾ ನೀತಿ-ಭಾಷೆಗಳ ಹೇರಿಕೆ, ಎಲ್.ಕೆ.ಜಿ.-ಯು.ಕೆ.ಜಿ., ನರ್ಸರಿಗೆ ಕಂಪ್ಯೂಟರ್ ತರಬೇತಿ!!.

'ಮಾರ್ಕ್ಸ್'ವಾದಿ ದೃಷ್ಟಿಕೋನದ ನಮ್ಮ ಈ ಶಿಕ್ಷಣಪದ್ಧತಿ ದೇಶಕ್ಕೇನಾದರೂ ಭವಿಷ್ಯವನ್ನು ರೂಪಿಸಬಲ್ಲುದೇ? ಮುಗ್ಧ ಮನಸ್ಸಿನ ಎಳೆ ವಯಸ್ಸಿನ ಮಕ್ಕಳ ಮೇಲೆ ನಾವು ಹೇರಿರುವ ಮಾನಸಿಕ-ದೈಹಿಕ ಒತ್ತಡವನ್ನು ಕಡಿಮೆ ಮಾಡುವುದು ಸಾಧ್ಯವೇ ಇಲ್ಲವೇ?

ಯಾವ ಸಮಸ್ಯೆಗೂ ನಮ್ಮ ಆಳುವ ಜನರ ಬಳಿ ಈಗ ಸಿದ್ಧವಿರುವ ಉತ್ತರ ಸಂಪನ್ಮೂಲದ ಕೊರತೆ. ದೇಶದ ಉದ್ದಗಲಕ್ಕೂ ಇದೇ ಉತ್ತರ. ಸಂಪನ್ಮೂಲದ ಕೊರತೆ ಎಂಬುದು ನಿಜವೇ ಎಂದು ಪ್ರತ್ಯೇಕವಾಗಿ ಚರ್ಚಿಸಬಹುದು. ಆದರೆ ಬೌದ್ಧಿಕ 'ಸಂಪನ್ಮೂಲ'ಕ್ಕೆ ದಾರಿದ್ರ್ಯ-ಕೊರತೆ ಬಂದರೆ ಈ ದೇಶವನ್ನು, ವಿದ್ಯಾರ್ಥಿ ಸಮುದಾಯವನ್ನು ಕಾಪಾಡುವವರು ಯಾರು?

○

ದೇಶದ ಕಾನೂನನ್ನು ಬಾಳಾಠಾಕ್ರೆ ಭಯಭೀತಗೊಳಿಸಲು ಸಾಧ್ಯವಿಲ್ಲ

ಮಹಾರಾಷ್ಟ್ರದ ಜನತೆಯನ್ನು ಮತೀಯ ಮತ್ತು ಪ್ರಾದೇಶಿಕ ಭಾವನೆಗಳ ಆಧಾರದಲ್ಲಿ ದೀರ್ಘಕಾಲದಿಂದ ಭಯಭೀತಗೊಳಿಸುತ್ತಾ ಬಂದಿರುವ ಶಿವಸೇನಾ ಮುಖ್ಯಸ್ಥ ಬಾಳಾಠಾಕ್ರೆ ಇದೀಗ ದೇಶದ ಕಾನೂನಿಗೆ ಗಂಭೀರ ಸವಾಲೊಡ್ಡಿದ್ದಾರೆ. ತನ್ನ ಮೇಲಿನ ಕ್ರಿಮಿನಲ್ ಆರೋಪಗಳಿಗಾಗಿ ಮಹಾರಾಷ್ಟ್ರ ಸರ್ಕಾರವು ತನ್ನನ್ನು ಎಲ್ಲಿಯಾದರೂ ಬಂಧಿಸಿದರೆ 'ಭಾರತ ಹೊತ್ತಿ ಉರಿಯಬಹುದು', ಕೋಮುಗಲಭೆಗಳು ಸ್ಫೋಟಗೊಂಡಾವು', 'ರಾಜ್ಯ ಸರ್ಕಾರವನ್ನು ತಾನು ವಜಾ ಮಾಡಿಸಿಯೇನು' ಎಂದೆಲ್ಲಾ ಆತ ಘರ್ಜಿಸುತ್ತಿದ್ದಾರೆ. ಈ ಉದ್ರೇಕಕಾರಿ ಹೇಳಿಕೆಗಳಿಗೆ ಇಂಬುಕೊಡುವಂತೆ ಕೇಂದ್ರ ಕಾನೂನು ಸಚಿವ ರಾಂಜೇಠ್ ಮಲಾನಿಯವರು ಠಾಕ್ರೆ ವಿರುದ್ಧದ ಆರೋಪವು ಕಾಲಬಾಧಿತವಾಗಿಯೆಂದೂ, ಆತನ ಮೇಲೆ ಈಗ ದಾವೆ ಹೂಡುವಂತಿಲ್ಲವೆಂದೂ ಹೇಳಿದ್ದಾರೆ. ಇದು ಭಾರತದ ಕಾನೂನಿಗೆ ಮತ್ತು ನ್ಯಾಯಾಂಗ ವ್ಯವಸ್ಥೆಗೆ ಒಡ್ಡಿದ ಭೀಕರ ಸವಾಲು.

ಈ ಮಧ್ಯೆ ಕೇಂದ್ರ ಸಂಪುಟದಲ್ಲಿರುವ ಶಿವಸೇನೆಯ ಮೂವರು ಸಚಿವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ ಅದನ್ನು ಪ್ರಧಾನ ಮಂತ್ರಿಯವರು ಅಷ್ಟೇ ವೇಗವಾಗಿ ತಿರಸ್ಕರಿಸಿದ ನಾಟಕೀಯ ವಿದ್ಯಮಾನವೂ ನಡೆಯಿತು. ಮುಂಬಯಿಯಲ್ಲಿ ಶಿವಸೈನಿಕರು ಬಸ್ಸೊಂದಕ್ಕೆ ಬೆಂಕಿ ಹಚ್ಚಿ ಇಡೀ ನಗರದಲ್ಲಿ ಭೀತಿಯ ವಾತಾವರಣ ನಿರ್ಮಿಸಿದ್ದೂ ಆಯಿತು. ಮಹಾರಾಷ್ಟ್ರದಲ್ಲಿ ಶಿವಸೈನಿಕರು ನಿರ್ಮಿಸಬಹುದಾದ ಭಯೋತ್ಪಾದನೆಯನ್ನು ಎದುರಿಸಲು ರಾಜ್ಯ ಸರ್ಕಾರವು ಪ್ಯಾರಾ ಮಿಲಿಟರಿ ಪಡೆಗಳ 27 ಕಂಪನಿಗಳನ್ನು ಒದಗಿಸಬೇಕೆಂದು ಕೇಂದ್ರ ಗೃಹ ಸಚಿವರನ್ನು ವಿನಂತಿಸುತ್ತಿರುವಾಗಲೇ, ಕೇಂದ್ರ ಸಂಪುಟದಲ್ಲಿರುವ ಬಿಜೆಪಿ ಸಚಿವ ರಾಮನಾಯಕರು ಮುಂಬಯಿಯ ಬೀದಿಗಳಿಗೆ ಹೋರಾಟವನ್ನು ಕೊಂಡು ಹೋಗುವುದಾಗಿ ಎಚ್ಚರಿಸಿದ್ದಾರೆ. ಕೇಂದ್ರ ಸಚಿವರೇ ಬೀದಿಕಾಳಗಕ್ಕೆ ಕರೆ ನೀಡುತ್ತಿರುವುದು ಪ್ರಜಾಪ್ರಭುತ್ವಕ್ಕೆ ಒಡ್ಡಿದ ಗಂಭೀರ ಸವಾಲಾಗಿದೆ.

1992 ರಲ್ಲಿ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದ ಬೆನ್ನಲ್ಲಿ ಮುಂಬಯಿಯಲ್ಲಿ ಸಂಭವಿಸಿದ ಭೀಕರ ಗಲಭೆಗಳ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶ್ರೀಕೃಷ್ಣ ಆಯೋಗದಿಂದ ಗಂಭೀರ ದೋಷಾರೋಪಣೆಗೆ ಒಳಗಾದ ಬಾಳಾಠಾಕ್ರೆ ಇತ್ತೀಚಿನ ತನಕ ಮಹಾರಾಷ್ಟ್ರದಲ್ಲಿ ಅಧಿಕಾರದಲ್ಲಿದ್ದ ಶಿವಸೇನಾ-ಬಿಜೆಪಿ ಮೈತ್ರಿಕೂಟದ ಸರಕಾರದ ಆಶ್ರಯದಲ್ಲಿ ಕಾನೂನುಕ್ರಮದಿಂದ ತಪ್ಪಿಸಿಕೊಂಡಿದ್ದರು. ಕಾಂಗ್ರೆಸ್ ಮತ್ತು ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷಗಳು ಇತ್ತೀಚಿನ ವಿಧಾನಸಭಾ ಚುನಾವಣೆಗಳ ಸಮಯದಲ್ಲಿ, ತಾವು ಆರಿಸಿಬಂದರೆ ಶ್ರೀಕೃಷ್ಣ ಆಯೋಗದ ವರದಿಯನ್ನು ಜಾರಿಗೊಳಿಸುವುದಾಗಿ ಜನತೆಗೆ ಭರವಸೆ ನೀಡಿದ್ದವು. ಇದೀಗ ಈ ಎರಡು ಪಕ್ಷಗಳು ಸಂಯುಕ್ತವಾಗಿ ಸರಕಾರ ರಚಿಸಿದ ನಂತರ ತಮ್ಮ ಚುನಾವಣಾ ವಾಗ್ದಾನವನ್ನು ಈಡೇರಿಸಲು ಕ್ರಮಕೈಗೊಳ್ಳುತ್ತಿವೆ.

ಯಾವ ವ್ಯಕ್ತಿಯೂ ಕಾನೂನಿಗೆ ಅತೀತನಲ್ಲ. ಅದರಲ್ಲೂ ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ಗುರುತಿಸಲ್ಪಟ್ಟ ವ್ಯಕ್ತಿಯು ತನ್ನ ಮೇಲೆ ಬರಬಹುದಾದ ಆರೋಪಗಳಿಂದ ಮುಕ್ತನಾಗಲು, ಅಥವಾ ಆರೋಪ ಸಾಬೀತಾದರೆ ನ್ಯಾಯಾಂಗ ವಿಧಿಸುವ ಶಿಕ್ಷೆಗೆ ತನ್ನನ್ನು ತಾನು ಅರ್ಪಿಸಿಕೊಳ್ಳಲು ಸಿದ್ಧನಿರಬೇಕು. ವಿಚಾರಣಾ ಆಯೋಗವೊಂದರಿಂದ ದೋಷಾರೋಪಣೆಗೆ ಒಳಗಾದ ರಾಜಕೀಯ ನಾಯಕರು ಕಾನೂನಿಗೆ ಸವಾಲೊಡ್ಡುವುದು ಹೇಡಿತನವೂ ಹೌದು, ಫ್ಯಾಸಿಸ್ಟ್ ಪ್ರವೃತ್ತಿಯೂ ಹೌದು.

ಬಾಳಾಠಾಕ್ರೆಯವರನ್ನು ಬಂಧಿಸಿದರೆ ಯಾಕೆ ಭಾರತ ಹೊತ್ತಿ ಉರಿಯಬೇಕು? ಯಾಕೆ ಮತೀಯ ಗಲಭೆಗಳಾಗಬೇಕು? ಆರೋಪಿಯನ್ನು ಬಂಧಿಸಿದರೆ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲಾಗುತ್ತದೆ. ನ್ಯಾಯಾಲಯ ವಿಚಾರಣೆ ಮಾಡಿ ಆರೋಪಿ ತಪ್ಪಿತಸ್ಥನೆಂದು ಸಾಬೀತಾದರೆ ಶಿಕ್ಷೆ ವಿಧಿಸುತ್ತದೆ. ನಿರಾಪರಾಧಿಯೆಂದು ಸಾಬೀತಾದರೆ ದೋಷಮುಕ್ತಗೊಳಿಸಿ ಬಿಡುಗಡೆ ಮಾಡುತ್ತದೆ. ಕಾನೂನಿನ ಈ ನಿಯಮಕ್ಕೆ ಶಿವಸೇನೆ ಬೆದರಿಕೆ ಹಾಕುತ್ತಿದೆ. ಅದು ಸಾಲದೆಂಬಂತೆ ಕೇಂದ್ರ ಕಾನೂನು ಸಚಿವರು ಅನಪೇಕ್ಷಿತ ತೀರ್ಪು ನೀಡುತ್ತಿದ್ದಾರೆ. ಶ್ರೀಮಾನ್ ರಾಂಜೇಠ್ ಮಲಾನಿಯವರೇ, ನೀವೀಗ ಕಾನೂನು ಪಂಡಿತರಲ್ಲ. ಈಗ ನೀವು ಒಬ್ಬ ಕೀಳುಮಟ್ಟದ ರಾಜಕೀಯ ಪುಢಾರಿ! ಶ್ರೀ ಕೃಷ್ಣ ಆಯೋಗದ ಶಿಫಾರಸ್ಸಿನಂತೆ ಆರೋಪಿಯ ಮೇಲೆ ಕಾನೂನುಕ್ರಮ ಜರುಗಿಸುವುದರಲ್ಲಿ ವಿಳಂಬವಾಗಿದ್ದರೆ, ಆರೋಪಿಯೇ ರಾಜ್ಯಾಧಿಕಾರವನ್ನು 'ರಿಮೋಟ್ ಕಂಟ್ರೋಲ್' ಮೂಲಕ ಚಲಾಯಿಸುತ್ತಿದ್ದುದೇ ಅದಕ್ಕೆ ಕಾರಣ. ಅದನ್ನೀಗ ನ್ಯಾಯಾಲಯಕ್ಕೆ ಬಿಟ್ಟುಬಿಡಿ. ಶಿವಸೇನೆಯ ಮುಖಪತ್ರಿಕೆ 'ಸಾಮ್ನಾ' ದಲ್ಲಿ ಬಾಳಾಠಾಕ್ರೆಯವರು ಬರೆದ ಉದ್ರೇಕಕಾರಿ ಲೇಖನಗಳಿಗೆ ಸಂಬಂಧಿಸಿದ ಮೊಕದ್ದಮೆ ನ್ಯಾಯಾಲಯದಲ್ಲಿ ಈಗಾಗಲೇ ಇದೆ. ಹಿಂದಿನ ಶಿವಸೇನೆ-ಬಿಜೆಪಿ ಸರಕಾರವು ಠಾಕ್ರೆ ವಿರುದ್ಧದ ಅನೇಕ ಮೊಕದ್ದಮೆಗಳನ್ನು ಹಿಂತೆಗೆದಾಗ ಈ ಒಂದು ಮೊಕದ್ದಮೆ ಉಳಿದುಕೊಂಡಿತ್ತು. ಅದೀಗ ಕಾಲ ಬಾಧಿತವಾಗುವುದಿಲ್ಲವೆಂಬುದು ಜೇಠ್‌ಮಲಾನಿಯವರಿಗೆ ಗೊತ್ತಿರಲಿ.

ಜನರಲ್ಲಿ ಕೋಮು ಭಾವನೆಗಳನ್ನು ಕೆರಳಿಸಿ ಗಲಭೆಗಳನ್ನು ಹುಟ್ಟಿಸಿ ಅಮಾಯಕರ ಮಾರಣಹೋಮ ಮಾಡಿದ ಆರೋಪ ಹೊತ್ತವರನ್ನು ಕಟಕಟೆಗೆ ತರಲೇಬೇಕು. ಭಾರತದ ಜಾತ್ಯಾತೀತ ಪ್ರಜಾಪ್ರಭುತ್ವವನ್ನು ಯಾವ ಬೆಲೆ ತೆತ್ತಾದರೂ ಕಾಪಾಡಲೇಬೇಕು.

-ಬಿ.ಮಾಧವ

ಟೆಲಿಕಾಂ ಸೇವೆಯಲ್ಲಿ ಅರಾಜಕತೆ ನಿರ್ಮಿಸಲು ಪ್ರಧಾನಿಯ ಉತ್ಸುಕತೆ

ದೀರ್ಘವ್ಯಾಪ್ತಿಯ ಟೆಲಿಫೋನ್ ಸೇವೆಗಳನ್ನು ಖಾಸಗೀಕರಿಸುವುದಾಗಿ ಪ್ರಧಾನಿ ವಾಜಪೇಯಿ ಘೋಷಿಸಿದ್ದಾರೆ. ಈ ತೀರ್ಮಾನವನ್ನು ಜಾರಿಗೊಳಿಸಿದರೆ ಟೆಲಿಕಾಂ ಇಲಾಖೆಗೆ ವರ್ಷಕ್ಕೆ 7,000 ಕೋಟಿ ರೂಪಾಯಿ ನಷ್ಟವಾಗುತ್ತದೆ. ಆದರೇನಂತೆ? ತನ್ನ ಸರಕಾರದ ಆಧಾರ ಸ್ಥಂಭಗಳಾದ ಖಾಸಗಿಬಂಡವಾಳಶಾಹಿಗಳಿಗೆ ಲಾಭ ಮಾಡಿಕೊಟ್ಟರೆ ಪ್ರಧಾನಿಯವರ ಜವಾಬ್ದಾರಿ ಮುಗಿಯಿತು ತಾನೆ? ಆದರೆ ವಿಷಯ ಇಷ್ಟಕ್ಕೆ ಸೀಮಿತವಾಗಿಲ್ಲ.

ಖಾಸಗಿ ಇಂಟರ್‌ನೆಟ್ ಸೇವೆ ಒದಗಿಸುವವರಿಗೆ ಭಾರತದ ಯಾವುದೇ ಭಾಗದಲ್ಲಾದರೂ ತಮ್ಮದೇ ಆದ ಭೂನೆಲೆಗಳನ್ನು ಸ್ಥಾಪಿಸಲು ಅವಕಾಶ ಮಾಡಿಕೊಡುವುದಾಗಿ ವಾಜಪೇಯಿಯವರು ಘೋಷಿಸಿದ್ದಾರೆ. ಇದರಲ್ಲಿ ರಾಷ್ಟ್ರೀಯ ಸುರಕ್ಷತೆಯ ಪ್ರಶ್ನೆ ಒಳಗೊಂಡಿದೆ. ರಕ್ಷಣಾ ಸಚಿವರು ಈ ಬಗ್ಗೆ ಸುಮಾರು ಒಂದು ತಿಂಗಳ ಹಿಂದೆಯೇ ಸರಕಾರಕ್ಕೆ ಪತ್ರ ಬರೆದಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ!

ಡಿಪಾರ್ಟ್‌ಮೆಂಟ್ ಆಫ್ ಟೆಲಿಕಾಂ ಸರ್ವಿಸಸ್(ಡಿಟಿಎಸ್) ನಲ್ಲಿ ಸಂಗ್ರಹವಾದ ಹೆಚ್ಚುವರಿ ಮೊತ್ತವನ್ನೇ ಉಪಯೋಗಿಸಿ ದೇಶಾದ್ಯಂತ ಟೆಲಿಕಾಂ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ಕೆಲಸಗಳಿಗಾಗಿ ಕೇಂದ್ರ ಸರಕಾರದಿಂದ ಯಾವುದೇ ಬಜೆಟರಿ ಸಹಾಯ ಇರುವುದಿಲ್ಲ. ಪ್ರಧಾನಿಯವರ ಈಗಿನ ತೀರ್ಮಾನದಂತೆ ಡಿಟಿಎಸ್ ಪ್ರತಿವರ್ಷ 7 ಸಾವಿರ ಕೋಟಿ ರೂಪಾಯಿಗಳ ಆದಾಯ ಕಳಕೊಂಡರೆ ಸ್ಥಳೀಯ ಕರೆಗಳು ದುಬಾರಿಯಾಗುತ್ತವೆ, ಗ್ರಾಮಾಂತರ ಪ್ರದೇಶಗಳಲ್ಲಿ ಟೆಲಿಫೋನ್ ಸೇವೆಗಳ ವಿಸ್ತರಣೆ ಕುಂಠಿತವಾಗುತ್ತದೆ. ಸಾಮಾನ್ಯ ಗ್ರಾಹಕನಿಗೆ ಶೇಕಡಾ 100 ರಷ್ಟು ಹೆಚ್ಚುವರಿ ಹೊರೆ ಬೀಳುತ್ತದೆ.

ಶ್ರೀಮಾನ್ ವಾಜಪೇಯಿಯವರೇ, ಯಾರಿಗಾಗಿ ಈ ಖಾಸಗೀಕರಣ?

ಸಿಐಟಿಯು 8ನೇ



ಡಾ|| ಪಂಢೆಯವರೊಂದಿಗೆ ನೂತನ ಪದಾಧಿಕಾರಿಗಳು

ಜಾಗತೀಕರಣದ ವಿರುದ್ಧ ವಿಶಾಲ ಐಕ್ಯತೆಗಾಗಿ


ಸಿಐಟಿಯು ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಅವರೊಡನೆ ಸಂದರ್ಶನ

ಎಸ್.ವೈ.ಗುರುಶಾಂತ್
ಯಮುನಾ ಗಾಂವ್ಕರ್

ಸಮ್ಮೇಳನ ನಡೆಯುತ್ತಿರುವ ಸನ್ನಿವೇಶದ ಹಿನ್ನೆಲೆ ಏನು?

ಇವತ್ತು ನಮ್ಮ ದೇಶದ ಒಳಗೆ ರಾಜಕೀಯ ಎಂದರೆ ಉದಾರೀಕರಣ, ಖಾಸಗೀಕರಣ, ಜಾಗತೀಕರಣವನ್ನು ಜಾರಿ ಮಾಡುವುದೇ ಆಗಿದೆ. ಕೆಲವು ರಾಜ್ಯಗಳಲ್ಲಿ ಮಾತ್ರ ಬದಲಿ ರಾಜಕೀಯವನ್ನು ಎಡರಂಗದ ನೇತೃತ್ವದಲ್ಲಿ ಕಾಣಲುಸಾಧ್ಯವಾಗಿದೆ. ನಮ್ಮ ರಾಜ್ಯದಲ್ಲಿ ಜನತೆಯ ಹೋರಾಟ ಬಲಿಷ್ಟಗೊಂಡು ಕಾರ್ಮಿಕ ವರ್ಗದ ರಾಜಕೀಯದ ಬೆಳವಣಿಗೆಯಾಗಬೇಕಿದೆ.

1980-81 ರ ಅವಧಿಯಲ್ಲಿ ಸತತವಾಗಿ ಕಾರ್ಮಿಕರ ಚಳುವಳಿ ನಡೆಯುತ್ತಿದ್ದು ಆ ಅವಧಿಯಲ್ಲಿ ರೈತರ ತೀವ್ರ ಹೋರಾಟ ಬೆಳೆಯಿತು. ವಿದ್ಯಾರ್ಥಿಗಳು ಸೇರಿ ಜನಪರ ಚಳುವಳಿ ಬಲಿಷ್ಟಗೊಳಿಸಿ ರಾಜ್ಯದಲ್ಲಿ ಕಾಂಗ್ರೆಸ್‌ನ ಗುತ್ತಿಗೆಗೆ ಸವಾಲು ಹಾಕಿದರು. ಇದರ ರಾಜಕೀಯ ಪರಿಣಾಮವಾಗಿ ಕಾಂಗ್ರೆಸ್ ಸೋತು ಜನತಾಪಕ್ಷದ ಹೊಸ ಸರ್ಕಾರವು ಅಸ್ತಿತ್ವದಲ್ಲಿ ಬಂತು. ಕೋಮುವಾದಿ ಪಕ್ಷದ ಬೆಂಬಲ



ವಿ.ಜೆ.ಕೆ.ನಾಯರ್

ಇದ್ದಾಗ್ಯೂ ಕಾರ್ಮಿಕರ ಸಮಸ್ಯೆ ಬಗ್ಗೆ ಸ್ಪಂದಿಸಲೇಬೇಕಾದ ಒತ್ತಾಯಕ್ಕೆ ಈ ಸರ್ಕಾರ ಒಳಗಾಗಿತ್ತು. 1992 ರಿಂದ 97 ರ ವರೆಗೆ ಕಾರ್ಮಿಕ ಚಳುವಳಿ ವ್ಯಾಪಕವಾಗಿ, ಬಲಿಷ್ಟಗೊಂಡಿತು. ಕಾಂಗ್ರೆಸ್ ಹಾಗೂ ಕೋಮುವಾದಿಗಳು ಆಡಳಿತಕ್ಕೆ ಬರುವುದನ್ನು ತಡೆಯಲು ಸಾಧ್ಯವಾಯಿತು. ಜನತಾದಳ ಆಡಳಿತಕ್ಕೆ ಬಂದಾಗ ಉದಾರೀಕರಣದ ಆರ್ಥಿಕ ನೀತಿಗಳನ್ನು ತೀವ್ರವಾಗಿ ಜಾರಿ ಮಾಡಲು ಹೋಗಿ ಅಂದಿನ ಮುಖ್ಯಮಂತ್ರಿ ಜೆ.ಹೆಚ್.ಪಟೇಲ್ ಕಾರ್ಮಿಕ ವರ್ಗದ ಹೋರಾಟವನ್ನು ಸದೆ ಬಡಿದು ಜನ ಹಿತವನ್ನು ಕೈಬಿಟ್ಟಿದ್ದರು. ಅವರಲ್ಲಿ ಒಂದು ಭಾಗ ಕೋಮುವಾದಿಗಳ ಬಲೆಗೆ ಬಿದ್ದುದರಿಂದ, ಚುನಾವಣೆಯಲ್ಲಿ ಕರ್ನಾಟಕವನ್ನು ಕೋಮುವಾದಿಗಳ ನೆಲೆಯಾಗಬಾರದೆಂದು ಜನತೆ ತೀರ್ಮಾನಿಸಿದ್ದರಿಂದ ಮತ್ತೆ ಕಾಂಗ್ರೆಸ್ ಪಕ್ಷ ವಾಪಾಸಾಗಿದೆ. ಈ ಸರ್ಕಾರ ಇನ್ನಷ್ಟು ತೀವ್ರವಾಗಿ ಉದಾರೀಕರಣದ ಕಾರ್ಯಕ್ರಮ ಜಾರಿಮಾಡ ಹೊರಟಿದೆ. ಇಂಥ ಪರಿಸ್ಥಿತಿಯಲ್ಲಿ ಕೋಮುವಾದಿ ಅಲ್ಲದ ಪ್ರಜಾಸತ್ತಾತ್ಮಕ ಶಕ್ತಿಗಳೆಲ್ಲವನ್ನು ಕಾರ್ಮಿಕ ವರ್ಗದ ಹೋರಾಟದ ಜೊತೆ ಬೆಸೆದರೆ ಮಾತ್ರ ಜನಹಿತ ತರುವ ರಾಜಕೀಯ ಬೆಳೆಸಬಹುದು. ಕಳೆದ 2-3 ವರ್ಷಗಳಲ್ಲಿ ತೀವ್ರವಾಗಿ ಜಾಗತೀಕರಣಕ್ಕೆ ಪ್ರತಿರೋಧ ಒಡ್ಡಬಹುದಾಗಿತ್ತು. ಇಲ್ಲಿ ದುಡಿಯುವ ವರ್ಗದ ಪಾತ್ರದ ಕೊರತೆ ಎದ್ದು ಕಾಣುತ್ತದೆ. ಹಾಗಾಗಿ ರಾಜಕೀಯ ಬದಲಾವಣೆ ತರುವಂಥ ನಿಟ್ಟಿನಲ್ಲಿ ಅಷ್ಟು ತೀವ್ರವಾದ ಹೋರಾಟ ನಡೆದಿಲ್ಲ ಎಂಬುದನ್ನು ಗಮನಿಸಬೇಕಾಗುತ್ತದೆ.

ಸಮ್ಮೇಳನದಲ್ಲಿ ಮೂಡಿಬಂದ ಚರ್ಚೆಗಳೇನು?

ಸಿಐಟಿಯುನ ಕಳೆದ ಎರಡು ವರ್ಷಗಳಲ್ಲಿ ಬಾದಿಸಿದ ಸಮಸ್ಯೆ ನೂರಾರು. ಬೆಂಗಳೂರು ನಗರದಲ್ಲಿ ನಡೆದ ಹೋರಾಟಗಳಲ್ಲಿ ಅಸಂಘಟಿತ ವಲಯದ ಚಳುವಳಿಯ ಸ್ಥಗಿತತೆ ಆದದ್ದು, ಸಿಐಟಿಯು ಕರ್ನಾಟಕದಲ್ಲಿ ಬೆಳವಣಿಗೆಗೆ ಅಡ್ಡಿಯಾದ ಅಂಶಗಳ ಕುರಿತು ರಾಜ್ಯ ಸಮ್ಮೇಳನ ಚರ್ಚಿಸಿತು.

LPG ಯಿಂದಾದ ದುಷ್ಪರಿಣಾಮ, ಬಹಳಷ್ಟು ಬಂಡವಾಳ ಹಿಂದೂಡಿಕೆ, ಕಾರ್ಮಿಕ ಸಂಖ್ಯೆ ಕಡಿತ, ಫ್ಯಾಕ್ಟರಿ ಮುಚ್ಚುವಿಕೆಯಂಥ ಕಾರ್ಮಿಕ ವಿರೋಧಿ ನೀತಿಗಳು ಬಂದವು. ಇವು ಸವಾಲುಗಳೇ ಸರಿ. ಈ ಮಧ್ಯೆ ಸಂಘಟನೆಯಲ್ಲಿ ಯೋಜಿತ ಕಾರ್ಯಚಟುವಟಿಕೆಗಳು, ಯೋಜನಾಬದ್ಧ ಚಟುವಟಿಕೆಗಳು, ಅವಿರತ ಹೋರಾಟಗಳು, ಸಾಮೂಹಿಕ ನಾಯಕತ್ವದ ಕಾರ್ಯಾಚರಣೆ ಹಾಗೂ ಸಂಘಟನೆ ಬಲಿಷ್ಟಗೊಳಿಸುವಂಥ ವಿಷಯಗಳ ಬಗ್ಗೆ ಚರ್ಚೆ ನಡೆಯಿತು. ಇವು ಒಂದಕ್ಕೊಂದು ಸಂಬಂಧವಿದ್ದವುಗಳು. ಸರಿಯಾದ ತೀರ್ಮಾನದಿಂದ ಸಂಘಟನೆಗೆ ಬಲ ನೀಡುವ, ತಪ್ಪಾದ ತೀರ್ಮಾನ ಮೂಡಿಬಂದರೆ ಅದು ಸಂಘಟನೆಯ ಬಲಹೀನತೆಗೆ ಕಾರಣವಾಗುವುದೆಂದು ಸಮ್ಮೇಳನ ಗುರುತಿಸಿದೆ. ಚಳುವಳಿಯನ್ನು ಬಾಧಿಸುವ ಈ ಎಲ್ಲ ಅಂಶಗಳ ಮಧ್ಯೆಯೂ ಸದಸ್ಯತ್ವ ಹೆಚ್ಚಿದೆ. ಈ ಹೆಚ್ಚಳ ಸಣ್ಣ ಪ್ರಮಾಣದ್ದು.

ಬಹಳಷ್ಟು ಕಾರ್ಖಾನೆಗಳು ಮುಚ್ಚಿದ್ದರಿಂದ ಇದ್ದ ಸದಸ್ಯತ್ವ ಸ್ಥಗಿತವಾಗಿದೆ. ಆದರೆ ಸೀಮಿತವಾಗಿಯಾದರೂ ಹೊಸ ವಿಭಾಗಗಳಲ್ಲಿ ವಿಸ್ತರಣೆ ಆಗಿದ್ದರಿಂದ ಅದನ್ನು ಸರಿದೂಗಿಸಿತು. ಈ ಅವಧಿಯಲ್ಲಿ ನಡೆದ ಎಲ್ಲಾ ಹೋರಾಟಗಳನ್ನು ಸೂಕ್ತವಾಗಿ ಬಳಸಿದ್ದರೆ, ಸದಸ್ಯತ್ವವನ್ನು ಪರಿಣಾಮಕಾರಿಯಾಗಿ ಮಾಡಿಸಬಹುದಿತ್ತು. ಬೆಳವಣಿಗೆ ಹೆಚ್ಚುತ್ತಿತ್ತು.

ಆಳುವ ವರ್ಗದ ಹಲವಾರು ವರ್ಷಗಳ ಧೋರಣೆಯಿಂದ LPG ರೂಪುಗೊಂಡಿದೆ. ಅನಾಹುತವೆಬ್ಬಿಸುತ್ತಿರುವುದು ವಸ್ತುನಿಷ್ಟ ಅಂಶ. ಸೂಕ್ತ ಸಂದರ್ಭದಲ್ಲಿ ಅದರಿಂದಾದ ಪರಿಣಾಮವನ್ನು ತಡೆಯಲು ಮಧ್ಯ ಪ್ರವೇಶ ಮಾಡದಿರುವುದೇ ಸದಸ್ಯತ್ವ ಕಡಿಮೆಯಾಗಲು ಕಾರಣವೆಂದು ಸಮ್ಮೇಳನ ಗುರುತಿಸಿದೆ. ಇದು ವ್ಯಕ್ತಿನಿಷ್ಟ ಅಂಶ. ಕೇಂದ್ರದಲ್ಲಿರುವ ವಾಜಪೇಯಿ ನೇತೃತ್ವದ ಎನ್.ಡಿ.ಎ. ಸರ್ಕಾರ ಅತ್ಯಂತ ತೀವ್ರಗತಿಯಲ್ಲಿ ವಿನಾಶಕಾರಿಯಾದ ಆರ್ಥಿಕ(LPG) ನೀತಿಯನ್ನು ಜಾರಿಗೊಳಿಸುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಈಗ ತರುತ್ತಿರುವ ನೀತಿಗಳು ದುಡಿಯುವ ವರ್ಗಕ್ಕೆ ಮತ್ತು ಕೈಗಾರಿಕೆಗೆ ಮಾರಕವಾಗಿ ಪರಿಣಮಿಸಿವೆ. ಅಭಿವೃದ್ಧಿಯ ಹೆಸರಿನಲ್ಲಿ ವಿದೇಶಿ ಬಂಡವಾಳಕ್ಕೆ ಆಹ್ವಾನಿಸಿ ಇಡೀ ರಾಜ್ಯದ ಹಿಡಿತವನ್ನೇ ಅವರ ಕೈಗೆ ಕೊಡಲು ಹೊರಟಿದೆ. ಮೂಲಭೂತ ಸೌಕರ್ಯ, ವಿದ್ಯುತ್, ಮಾಹಿತಿ ತಂತ್ರಜ್ಞಾನವನ್ನು ಬೆಳೆಸುವ ನೆಪದಲ್ಲಿ ಹಾಗೂ ಶೇರು ಮಾರುಕಟ್ಟೆಯಲ್ಲೇ ಜೂಜು ಬಂಡವಾಳ ಬೆಳೆಸಲಾಗುತ್ತಿದೆ. ಒಂದೆಡೆ ವಿದೇಶಿ ಬಂಡವಾಳಗಾರರ ಹಿತಕಾಪಾಡಲು ಹೋಗಿ ಕಾಂಗ್ರೆಸ್ ಹಾಗೂ ಬಿಜೆಪಿ ಒಂದಾಗಿ ರಾಷ್ಟ್ರೀಯ ಸೀಮೆ ಇಲ್ಲದಂತಾಗಿದೆ. ಇನ್ನೊಂದೆಡೆ ಇದೇ ಧೋರಣೆಯ ಪರಿಣಾಮ ಎದುರಿಸುವ ದೇಶಿ ಕೈಗಾರಿಕೆ ಉಳಿಸುವ ಯೋಜನೆ ಕೈಬಿಟ್ಟಿದೆ. ಸಣ್ಣ ಹಾಗೂ ಗುಡಿ ಕೈಗಾರಿಕೆಯಂತಹ ಹಲವಾರು ಘಟಕಗಳಲ್ಲಿರುವ ವಿಕೇಂದ್ರೀಕೃತ ಉತ್ಪಾದನೆ ಹೋಗುತ್ತಿದೆ. ವಿಕೇಂದ್ರೀಕೃತ ಕೈಗಾರಿಕಾ ಉತ್ಪಾದನೆಯಲ್ಲಿ ಪ್ರತಿದಿನ ನಷ್ಟಕರವಾಗುವ ಪ್ರಕ್ರಿಯೆ ನಡೆಯುತ್ತಿದೆ. ಒಂದು ವೇಳೆ ವಿಶ್ವ ವ್ಯಾಪಾರ ಸಂಸ್ಥೆಯ ನಿರ್ದೇಶನಗಳನ್ನು ಪ್ರತಿರೋಧಿಸಿದರೆ ಕೆಳಹಂತದಲ್ಲಿ ಆರ್ಥಿಕತೆ ಬೆಳಸಬಹುದಾಗಿತ್ತು. ಆದರೆ ಬಂಡವಾಳಶಾಹಿ-ಭೂಮಾಲಕರಿಂದ ಕೂಡಿದ ಕಾಂಗ್ರೆಸ್ ಇದನ್ನು ಮಾಡೋಲ್ಲ. ನಾವು ಕಾರ್ಮಿಕ ವರ್ಗ ಪರ್ಯಾಯ ಮಾರ್ಗ ರೂಪುಗೊಳಿಸಬೇಕು. ಸಾಮಾಜಿಕ ನಿಬಂಧನೆಗಳ ನೆಪಹಾಕಿ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಧಕ್ಕೆ ತರುವ WTO ವ್ಯವಸ್ಥೆ ವಿರುದ್ಧ ಕಾಂಗ್ರೆಸ್ ಅಣಿನೆರೆಯುವುದಿಲ್ಲ. ಎಡ ರಾಜಕೀಯಶಕ್ತಿಗಳನ್ನು ಕಾರ್ಮಿಕ ವರ್ಗವು ಬೆಳೆಸಿದರೆ ಮಾತ್ರ ಪ್ರಜಾಸತ್ತೆ ಕಾಪಾಡುವ, ವಿಕೇಂದ್ರೀಕೃತ ಉತ್ಪಾದನೆ ಕಾಪಾಡುವಷ್ಟರ ಮಟ್ಟಿಗೆ ಚಳುವಳಿ ಬೆಳೆಯಬೇಕಾಗುತ್ತದೆ ಎಂದು ಇವತ್ತಿನ ರಾಜಕೀಯದ ಸ್ಥಿತಿಯನ್ನು ಸಿಐಟಿಯು ವಿಶ್ಲೇಷಿಸುತ್ತದೆ.

ರಾಜ್ಯದ ಕಾರ್ಖಾನೆಗಳು, ಕಾರ್ಮಿಕರು ಹಾಗೂ ಸಂಘಟನೆ ಪರಿಸ್ಥಿತಿ ಹೇಗಿದೆ?

ಇವೆಲ್ಲದರ ಮಧ್ಯೆ ಹಲವಾರು ಕಾರ್ಖಾನೆಗಳು ಮುಚ್ಚಿವೆ. ಮುಚ್ಚುವ ಹಂತದಲ್ಲಿವೆ. 4000 ಸದಸ್ಯತ್ವವಿದ್ದ ಭಾರತ ಗೋಲ್ಡ್ ಮೈನ್ಸ್ ಲಿಮಿಟೆಡ್(BGML) 10,000 ಸದಸ್ಯತ್ವವಿದ್ದ NTC Mill ಗಳು ಮುಚ್ಚುವ ಭರದಲ್ಲಿವೆ. ಮೈಸೂರು ಲ್ಯಾಂಪ್ಸ್ ಮುಚ್ಚಿದೆ. ಮಿನರ್ವ ಮಿಲ್ ನಾಮಮಾತ್ರವಿದೆ. MSK ಮಿಲ್ ಕೊನೆಯುಸಿರೆಳೆಯುತ್ತಿದೆ. ಇಂಡಿಯನ್ ಪ್ಲೈವುಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಧಾರವಾಡ-ದಾಂಡೇಲಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಕಷ್ಟದಲ್ಲಿದೆ. ಸಿಐಟಿಯು ಸದಸ್ಯತ್ವ 2000 ಹೊಂದಿದೆ, ಸುತ್ತೂರು, ಹರಿಹರದಲ್ಲಿರುವ ಮೈಸೂರು ಕಿರ್ಲೋಸ್ಕರ್ ಬಿಕ್ಕಟ್ಟಿನಲ್ಲಿದ್ದು 4000 ಸದಸ್ಯತ್ವವಿದೆ.

ಬೆಳಗಾಂನಲ್ಲಿ ಇಂಡಾಲ್‌ನಲ್ಲಿ ಅಲ್ಯುಮಿನಿಯಂ ಉತ್ಪಾದನೆ ನಿಂತಿದೆ. ಸ್ವಯಂ ನಿವೃತ್ತಿ, ವರ್ಗಾವಣೆಗೆ ಬಲವಂತ ಮಾಡಲಾಗುತ್ತಿದೆ. ಈ ಎಲ್ಲಾ ಸಂದರ್ಭದಲ್ಲಿಯೂ ನಾವು ಕಾರ್ಮಿಕರ ಪರವಾದ ನಿಲುವು ತಾಳಿದ್ದರಿಂದ ಅಲ್ಲಿರುವ ಯೂನಿಯನ್‌ನ್ನು ನಮ್ಮಿಂದ ದೂರ ಮಾಡಿಸುವ ತಂತ್ರ ರೂಪಿಸಿದರು. ಹಟ್ಟಿ ಚಿನ್ನದ ಗಣಿಯಲ್ಲಿ 392 ಕಾರ್ಮಿಕರನ್ನು ವಜಾ ಮಾಡಿದಾಗ ಪ್ರತಿಭಟಿಸಿ ಹೋರಾಡಿ ಗೆದ್ದೆವು. 20% ಬೋನಸ್ ಪಡೆದೆವು. ಆದರೆ ಕೂಲಿ ಸಕಾಲಿಕವಾಗಿ ಪಡೆಯುವುದು ಕಷ್ಟವಾಯಿತು.

ಶಹಾಬಾದ್‌ನ ABB ಯಲ್ಲಿ 3000 ಕಾರ್ಮಿಕರನ್ನು ಆಚೆ ತಳ್ಳಲಾಗಿದೆ. ABL, ಮೈಸೂರು ಪ್ಲೈವುಡ್ ಉಡುಗಿಹೋಗುತ್ತಿವೆ. ಈ ಎಲ್ಲವನ್ನು ಇಡಿಯಾಗಿ ಎತ್ತಿ ಹೋರಾಟ ರೂಪಿಸಿದ್ದಲ್ಲಿ ಇಡೀ ಕಾರ್ಮಿಕರ ಪ್ರಜ್ಞೆ ಮಟ್ಟ ಎತ್ತರಿಸಬಹುದಿತ್ತು, ಧಾಳಿ ತಡೆಯಬಹುದಿತ್ತು. ಸಾರ್ವತ್ರಿಕ ಹೋರಾಟವಾಗಿ ಮಾರ್ಪಾಡು ಮಾಡುವ ಕಣ್ಣೋಟ ಇರಲಿಲ್ಲ.

ದಾವಣಗೆರೆಯಲ್ಲಿ ಎಲ್ಲಾ ಕಾರ್ಖಾನೆಗಳೂ ರೋಗಗ್ರಸ್ತವಾಗಿವೆ. ನೆಲಸಮವಾಗಿವೆ. 34 ಮಿಲ್‌ಗಳಲ್ಲಿ ಗೋಕಾಕ್ ಒಂದು ಮಾತ್ರ ನಡೆಯುತ್ತಿದೆ. ಮುಚ್ಚದೇ ಇರುವ ಕೆ.ಆರ್.ಮಿಲ್ ಈಗ ಅಟ್ಲಾಂಟಿಕ್ ಹೆಸರಿನಲ್ಲಿ ಜೀವಹಿಡಿದಿದೆ.

ವಳ್ಳಿಯಪ್ಪ, ಟೆಕ್ಸ್‌ಟೈಲ್‌ನಲ್ಲಿ ಕಾರ್ಮಿಕರ ಹೋರಾಟ ನಡೆದಾಗ ಸರ್ಕಾರದ ಕಾರ್ಮಿಕ ವಿರೋಧಿ ದಬ್ಬಾಳಿಕೆ ಧೋರಣೆಯಿಂದಾಗಿ 3 ಜನ ಸತ್ತರು. ಜೆ.ಹೆಚ್.ಪಟೇಲ್ ಸರ್ಕಾರ ಆ ಮಿಲ್‌ನ್ನು ಮುಚ್ಚಲು ಅನುಮತಿ ನೀಡಿತು. ಇಲ್ಲೆಲ್ಲ ಹೋರಾಟ ನಡೆದಿದೆ. ಆದರೆ ಸರ್ಕಾರದ ಧೋರಣೆಯನ್ನು ಸಾಮೂಹಿಕ ಹೋರಾಟದ ಮೂಲಕ ಬಹಿರಂಗಗೊಳಿಸುವಲ್ಲಿ ಕಾರ್ಮಿಕವರ್ಗ ಸೋತಿದೆ.

ಇನ್ನೊಂದೆಡೆ ಬೆಂಗಳೂರಿನಲ್ಲಿ ಅಶೋಕ ಗಾರ್ಮೆಂಟ್ಸ್‌ನ 5000 ಜನ ಮಹಿಳಾ ಕಾರ್ಮಿಕರು ಬೀದಿಗಿಳಿದು ಹೋರಾಡಿದ್ದಾರೆ. ಬಿ.ಪಿ.ಎಲ್. ನಲ್ಲಿ 3000 ಜನರು ಬೀದಿಗಿಳಿದು ಹೋರಾಟ ಮಾಡಿದ್ದರು. 600 ಜನರನ್ನು ಜೈಲಿಗೆ ತಳ್ಳಿದರು. ಯೂನಿಯನ್ನಿನ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿಗಳನ್ನೊಳಗೊಂಡು 47 ಜನ ಅಮಾಯಕ ಕಾರ್ಮಿಕರನ್ನು ಒಂದೂವರೆ ವರ್ಷದಿಂದ ಜೈಲಿನಲ್ಲಿರಿಸಿದ್ದಾರೆ. ಆಡಳಿತ ಮಂಡಳಿ ಪ್ರಯೋಜಕತ್ವದ ಸಂಘ ಬಲವಂತದಿಂದ ಸದಸ್ವತ್ವ ಮಾಡುತ್ತಿದೆ. ಸರ್ಕಾರವು ಆಡಳಿತ ಮಂಡಳಿಯ ವಿರುದ್ಧ ಕ್ರಮಕೈಗೊಳ್ಳದೇ ಕಾರ್ಮಿಕರನ್ನು ಸದೆಬಡಿದಿದೆ.

ಈ ಎಲ್ಲ ಯೋಜಿತ ಹೋರಾಟಗಳ ಕೊರತೆಯನ್ನು ಗಮನಿಸಿ ಸಾಮಾನ್ಯ ಹೋರಾಟವನ್ನು ಬೆಳೆಸಲು ಚರ್ಚಿಸಿತು. ಇದರಿಂದಾಗಿ ಸರ್ಕಾರದ ನೀತಿಗಳನ್ನು ಸೋಲಿಸಲು, ಬಯಲಿಗೆಳೆಯಲು ಸಾಧ್ಯ. ಕಾರ್ಮಿಕ ಸಂಘಟನೆಯ ದುರ್ಬಲತೆಯಿಂದಾಗಿ ಸಾಮಾನ್ಯ ಹೋರಾಟವನ್ನು ಶುರುಮಾಡಲು ಆಗಲಿಲ್ಲ. ಈ ಎಲ್ಲಾ ಪರಿಸ್ಥಿತಿಯಲ್ಲಿಯೂ ಸಿಐಟಿಯು ಮಾತ್ರವೇ ಸಮರಧೀರ ಹೋರಾ

ಪುಟ 11

ರಾಜ್ಯ ಸಮ್ಮೇಳನ



ಕಾರ್ಮಿಕರ ಬೃಹತ್ ಮೆರವಣಿಗೆ ದೃಶ್ಯ

90 ರ ದಶಕದಿಂದೀಚೆಗೆ ತೀವ್ರ ಶೋಷಣೆಗೆ ಒಳಗಾಗಿರುವ ಅಸಂಘಟಿತ ಕಾರ್ಮಿಕರ ಹಕ್ಕುಗಳ ರಕ್ಷಣೆ ಹಾಗೂ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣವೆಂಬ ಭೂತದಿಂದ ರಕ್ಷಿಸುವ ಪಣವನ್ನು ಜುಲೈ 16 ರಂದು ಮುಕ್ತಾಯಗೊಂಡ ಸಿಐಟಿಯು 8ನೇ ರಾಜ್ಯ ಸಮ್ಮೇಳನ ಕೈಗೊಂಡಿದೆ.

1991 ರಲ್ಲಿ ಪ್ರಾರಂಭವಾದ ಉದಾರೀಕರಣ ಖಾಸಗೀಕರಣ ಮತ್ತು ಜಾಗತೀಕರಣ ವೆಂಬ ಚಂಡ ಮಾರುತಕ್ಕೆ ಬಲಿಯಾಗಿರುವ ಅಸಂಘಟಿತ ವಲಯಗಳಾದ ಸಣ್ಣ ಕೈಗಾರಿಕೆಗಳು, ಬೀಡಿ, ಗಾರ್ಮೆಂಟ್ಸ್ ಕಟ್ಟಡ ಕೆಲಸ, ಹೋಟೇಲ್, ತೋಟ ಮಗ್ಗ, ಸಾರಿಗೆ, ಪಂಚಾಯತ್, ಅಗರಬತ್ತಿ ಮತ್ತು ಅಂಗನವಾಡಿ ಹಾಗೂ ಇನ್ನಿತರೆಡೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಹಕ್ಕುಗಳ ರಕ್ಷಣೆ ಕನಿಷ್ಠ ವೇತನ ಕೆಲಸದ ಅಭದ್ರತೆ ಮುಂತಾದ ಸಮಸ್ಯೆಗಳ ವಿರುದ್ಧ ಮುಂದಿನ ದಿನಗಳಲ್ಲಿ ಅವರಲ್ಲಿ ಐಕ್ಯ ಹೋರಾಟ ರೂಪಿಸಲು ಸಮ್ಮೇಳನ ಉದ್ದೇಶಿಸಿದೆ.

ಸಾರ್ವಜನಿಕ ಉದ್ದಿಮೆಗಳಾದ ಹೆಚ್.ಎ. ಮುಕ್ತ ಆಮದು ನೀತಿಯ ಮೂಲಕ ತರಿಸುತ್ತಿರುವುದರಿಂದಾಗಿ ಹಪ್ಪಳ, ಉಪ್ಪಿನಕಾಯಿ, ಸಂಡಿಗೆ ತಯಾರಿಸುವ ಗೃಹೋದ್ಯಮದಿಂದ ಹಿಡಿದು ಉಡುಪುಗಳನ್ನು ಸಿದ್ಧ ಪಡಿಸುವ ಗಾರ್ಮೆಂಟ್ಸ್ ಗಳನ್ನು ಸೇರಿಸಿಕೊಂಡತೆ ಸಣ್ಣ-ಪುಟ್ಟ ಎಲೆಕ್ಟ್ರಾನಿಕ್ಸ್ ಕೈಗಾರಿಕೆಗಳು ಮುಚ್ಚಲ್ಪಡುತ್ತಿವೆ. ಸಾವಿರಾರು ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಸಣ್ಣ ಕೈಗಾರಿಕೆಗಳನ್ನು ಉಳಿಸುವ ಸಲುವಾಗಿ ಹಾಗೂ ಕಾರ್ಮಿಕರನ್ನು ರಕ್ಷಿಸುವ ಸಲುವಾಗಿ ಪ್ರಚಾರಾಂದೋಲನ ನಡೆಸುವುದಾಗಿ ತೀರ್ಮಾನ ಕೈಗೊಂಡಿದೆ.

ಹಾಲು-ಮೊಸರು-ಬೆಣ್ಣೆ -ತುಪ್ಪವನ್ನೂ ಸೇರಿಸಿಕೊಂಡು ರೈತರು ಬೆಳೆವ ಆಹಾರ

ಅಸಂಘಟಿತ ಕಾರ್ಮಿಕರು, ಸಾರ್ವಜನಿಕ ಉದ್ದಿಮೆಗಳ ರಕ್ಷಣೆಗೆ ಪಣ

ಎಲ್., ಬಿಇಎಲ್, ಬಿಹೆಚ್ಇಎಲ್, ಹೆಚ್ಎಂಟಿ, ಬಿಇಎಂಎಲ್, ಇಂಡಿಯನ್ ಆಯಿಲ್ ಕಾರ್ಪೋರೇಷನ್, ಬಿಜಿಎಂಎಲ್, ಇತ್ಯಾದಿಗಳಲ್ಲದೆ ಹಣಕಾಸು ಸಂಸ್ಥೆಗಳ ಷೇರುಗಳನ್ನು ಖಾಸಗೀಯವರಿಗೆ ನೀಡುವ ಕೇಂದ್ರ ಸರ್ಕಾರದ ದಿವಾಳಿ ಕೋರ ನೀತಿಯನ್ನು ಹಿಮ್ಮೆಟ್ಟಿಸುವ ವಿಶ್ವಾಸವನ್ನು ಸಮ್ಮೇಳನ ವ್ಯಕ್ತಪಡಿಸಿದೆ.

ವೃದ್ಧಿಗೊಳ್ಳಬೇಕಾದ ವರ್ಗಜಾಗೃತಿ:

ಬಂಡವಾಳದ ಜಾಗತೀಕರಣವಾಗುತ್ತಿರುವ ಈ ಸಂದಿಗ್ಧ ಸಂದರ್ಭದಲ್ಲಿ ದಿನ ದಿನವೂ ತಮ್ಮ ಹಕ್ಕುಗಳನ್ನು ಕಳೆಚಿಕೊಳ್ಳುತ್ತಿರುವ ಕಾರ್ಮಿಕರು ತಮ್ಮ ವರ್ಗ ಜಾಗೃತಿಯನ್ನು ಹೆಚ್ಚಿಸಿಕೊಂಡು ಕೇಂದ್ರ ಸರ್ಕಾರದ ಅಸಮಾನತೆಯ ಆರ್ಥಿಕ ನೀತಿ ಹಾಗೂ ಕೋಮುವಾದಿ ನೀತಿಯನ್ನು ರೈತ ಕೂಲಿಕಾರರು ಮಹಿಳೆ, ಯುವಜನ, ವಿದ್ಯಾರ್ಥಿ ಮುಂತಾದ ಜನ ಸಮುದಾಯದ ಜೊತೆ ಸೇರಿ ಹಿಮ್ಮೆಟ್ಟಿಸುವ ದೃಢ ನಿಲುವನ್ನು ಸಮ್ಮೇಳನ ತಾಳಿತು.

ರಾಜ್ಯದ ಸಣ್ಣ ಕೈಗಾರಿಕೆಗಳು ಸಂಕಷ್ಟದಲ್ಲಿದ್ದು ಇಂದು ಅಳಿವು-ಉಳಿವಿನ ಪ್ರಶ್ನೆಯನ್ನು ಎದುರಿಸುತ್ತಿವೆ. 740 ಕ್ಕೂ ಹೆಚ್ಚು ಪದಾರ್ಥಗಳನ್ನು ಪದಾರ್ಥಗಳು ಸಹ ಇನ್ನು ಮುಂದೆ ಮುಕ್ತ ಆಮದು ನೀತಿಯ ರಹದಾರಿಯಲ್ಲಿ ಸಾಗಿ ಬರುವುದರಿಂದಾಗಿ ರೈತ ಇನ್ನಿಲ್ಲದ ಕಷ್ಟಕ್ಕೆ ಸಿಲುಕುತ್ತಾನೆ ಹೀಗಾಗಿ ರೈತರ ಸಮಸ್ಯೆಗಳನ್ನು ಸಹ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿದೆ.


ಕೇಂದ್ರ ಸರ್ಕಾರದ ಬೆಲೆಏರಿಕೆಯಿಂದ ಬಡಜನತೆ ತೀವ್ರ ಸಂಕಷ್ಟದಲ್ಲಿರುವುದರಿಂದ ಇಂತಹ ಜನವಿರೋಧಿ ನೀತಿಗಳನ್ನು ಕೈಬಿಡುವಂತೆ

> ಸಿಐಟಿಯು ರಾಜ್ಯಾಧ್ಯಕ್ಷ
> **ಎಸ್. ಸೂರ್ಯನಾರಾಯಣರಾವ್**
> ಅವರೊಂದಿಗೆ ಸಂದರ್ಶನ

ಒತ್ತಾಯಿಸಲು ವಿಶಾಲವಾದ ಐಕ್ಯಹೋರಾಟ ನಡೆಸುವಂತೆ ತೀರ್ಮಾನಿಸಲಾಯಿತು. ಈ ಎಲ್ಲವುಗಳ ವಿರುದ್ಧ ಇತರೆ ಸಂಘಟನೆಗಳಾದ ರೈತ ಕೂಲಿಕಾರ ಮಹಿಳೆ ಯುವಜನ, ವಿದ್ಯಾರ್ಥಿಗಳ ಜೊತೆ ಗೂಡಿ ಮುಂದಿನ ದಿನಗಳಲ್ಲಿ ರಾಜ್ಯ ವ್ಯಾಪಿ ಚಳುವಳಿ ಸಂಘಟಿಸಲು ತೀರ್ಮಾನಿಸಲಾಗಿದೆ.

ಸಂಘಟನೆಯ ಅವಿಭಾಜ್ಯ ಅಂಗವಾದ ದುಡಿಯುವ ಮಹಿಳೆಯರ ಸಮಸ್ಯೆಗಳ ಬಗ್ಗೆ ಹಾಗೂ ಅವರನ್ನು ಸಂಘಟಿಸಿ ಅವರನ್ನು ನಾಯಕತ್ವಕ್ಕೆ ತರುವ ಹಾಗೂ ಸಂಘದ ಪದಾಧಿಕಾರಿಗಳಾಗಿ ರೂಪಿಸುವ ಯೋಜನೆಯನ್ನು ಕೈಗೊಳ್ಳಲಾಗಿದೆ.

ಸಮ್ಮೇಳನದಲ್ಲಿ ತುಂಬಾ ಆಸಕ್ತಿಯಿಂದ ಪಾಲ್ಗೊಂಡಿದ್ದ ಪ್ರತಿನಿಧಿಗಳು ಮುಂದಿನ ದಿನಗಳಲ್ಲಿ ಈಗಿರುವ 85 ಸಾವಿರ ಸದಸ್ಯತ್ವದಿಂದ 2 ಲಕ್ಷಕ್ಕೇರಿಸುವ ಪ್ರತಿಜ್ಞೆಗೈಯುವುದರೊಂದಿಗೆ



ಸಿಐಟಿಯು ರಾಜ್ಯದ ದುಡಿಯುವ ಜನತೆಯು ಕಣ್ಣಿಣೆ ಹಾಗೂ ಮುಂಚೂಣಿ ಸಂಘಟನೆಯಾಗಿ ಹೊರತರುವ ಜವಾಬ್ದಾರಿಯನ್ನು ಹೆಗಲೇರಿಸಿ ಕೊಂಡಿದ್ದಾರೆ.

- ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ನೀತಿಗಳವಿರುದ್ಧ ಹೋರಾಡುತ್ತೇವೆ- ಹೋರಾಡುತ್ತೇವೆ.
- ಕೋಮುವಾದಿ ಶಕ್ತಿಗಳ ವಿರುದ್ಧ-ಹೋರಾಡುತ್ತೇವೆ ಹೋರಾಡುತ್ತೇವೆ.
- ರಾಷ್ಟ್ರದ ಐಕ್ಯತೆ, ರಕ್ಷಿಸುತ್ತೇವೆ, ರಕ್ಷಿಸುತ್ತೇವೆ.
- ದುಡಿಯುವ ವರ್ಗದ ಒಗ್ಗಟ್ಟು ಕಾಪಾಡುತ್ತೇವೆ, ಕಾಪಾಡುತ್ತೇವೆ.
- ದುಡಿಯುವ ವರ್ಗದಲ್ಲಿ ರಾಜಕೀಯ ಪ್ರಜ್ಞೆ ಬೆಳೆಸುತ್ತೇವೆ, ಬೆಳೆಸುತ್ತೇವೆ.
- ದುಡಿಯುವ ಜನರ ಧ್ವನಿ ಐಕ್ಯರಂಗ ಓದುತ್ತೇವೆ, ಪ್ರಸಾರಿಸುತ್ತೇವೆ.
- ಮಹಿಳೆಯರ ಹಕ್ಕುಗಳಿಗಾಗಿ ಹೋರಾಡುತ್ತೇವೆ.
- ನಿರುದ್ಯೋಗದ ವಿರುದ್ಧ ಹೋರಾಡುತ್ತೇವೆ.
- ಕನಿಷ್ಠ ಕೂಲಿಗಾಗಿ ಹೋರಾಡುತ್ತೇವೆ.

ಸಮಾರೋಪ ಭಾಷಣದ ಕೊನೆಯಲ್ಲಿ ಕಾಂ. ಸೂರ್ಯನಾರಾಯಣರಾವ್ ಘೋಷಣೆಗಳನ್ನು ನೀಡಿದರು. ಈ ಹಾಗೆ ನೂರಾರು ದನಿಗಳು ಜೊತೆಗೂಡಿ ಸಂಕಲ್ಪದ ಶಕ್ತಿಯಾಗಿ ಪ್ರತಿಧ್ವನಿಸಿದವು. ಎಲ್ಲರ ಮುಖಗಳಲ್ಲಿಯೂ ಉತ್ಸಾಹ, ಸಮರಧೀರ ಚಳುವಳಿ ಕಟ್ಟುವ ವಿಶಾಲ ನಿರ್ಧಾರದೊಂದಿಗೆ ಘೋಷಣೆ ಕೂಗುತ್ತಲೇ ಸಮ್ಮೇಳನ ಸಮಾರೋಪಗೊಂಡಿತು.

ಮಾಲೀಕರನ್ನು ಓಲೈಸಲು ರಾಜ್ಯ ಸರ್ಕಾರದ ಆತುರ

ಹಿಂದಿನ ಜನತಾದಳದ ಜೆ.ಹೆಚ್. ಪಟೇಲ್ ನೇತೃತ್ವದ ಸರ್ಕಾರ ಉದಾರೀಕರಣವನ್ನು ಜಾರಿಗೊಳಿಸುವ ಭರಾಟೆಯಲ್ಲಿ ಮಾಲೀಕರ ಪರ ನಿಲುವು ತಳೆದ ಕಾರ್ಮಿಕ ವರ್ಗದ ಹೋರಾಟಗಳನ್ನು ದಮನಗೊಳಿಸುವ ಹಲವು ಕ್ರಮಗಳನ್ನು ಕೈಗೊಂಡಿತ್ತು. ಕಾರ್ಮಿಕರ ಮೇಲೆ ಪೊಲೀಸ್ ಗೋಲಿಬಾರ್, ಕಾರ್ಮಿಕರ ಹೋರಾಟಗಳಿಗೆ ಅದರಲ್ಲೂ ಸಿಐಟಿಯು ಕಾರ್ಮಿಕ ಸಂಘಟನೆಗಳ ಹೋರಾಟದ ಸಂದರ್ಭಗಳಲ್ಲಿ ಪೋಲೀಸರ ಮಧ್ಯ ಪ್ರವೇಶ ಕಾರ್ಮಿಕರ ಮೇಲೆ ಮುಖಂಡರ ಮೇಲೆ ಸುಳ್ಳು ಕೇಸುಗಳ ದಾಖಲೆ, ಇತ್ಯಾದಿ ಹಲವು ನಿದರ್ಶನಗಳಿವೆ.

ಕಾರ್ಮಿಕರ, ಪ್ರಜಾಪ್ರಭುತ್ವ ಪ್ರೇಮಿ ನಾಗರೀಕರ ತಿರಸ್ಕಾರಕ್ಕೆ ಗುರಿಯಾದ ಜೆ.ಹೆಚ್. ಪಟೇಲರ ಉದಾರೀಕರಣ ಪ್ರಕ್ರಿಯೆಯನ್ನು ಇನ್ನಷ್ಟು ತೀವ್ರವಾಗಿ ಜಾರಿಗೊಳಿಸಲು ಹೊರಟಿರುವ ಈಗಿನ ಹೈಟೆಕ್ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಪಕ್ಕದ ಆಂಧ್ರ ಪ್ರದೇಶದ ಮುಖ್ಯಮಂತ್ರಿಯೊಡನೆ ಈ ಪೈಪೋಟಿಗಳಿದು ವಿದೇಶಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸಲು ಮಾಲೀಕರನ್ನು ಓಲೈಸುವುದು ಕಾರ್ಮಿಕ ವರ್ಗದ ಸಮಸ್ಯೆಗಳನ್ನು ನಿರ್ಲಕ್ಷಿಸುವುದು ವೇದ್ಯವಾಗುತ್ತಿದೆ. ಸರ್ಕಾರದ ಪತಿಯಿಂದಲೇ ಕಾರ್ಮಿಕ ವಿರೋಧಿ ನೀತಿ ಅನುಸರಿಸುವ, ಅಸಂಘಟಿತ ಕಾರ್ಮಿಕರಿಗೆ ಮಸೂದೆ ತರುವ ಮಾತನಾಡುತ್ತಿರುವಾಗಲೇ ಕಾರ್ಮಿಕರಿಗೆ ಸಂಬಂಧಿಸಿದ ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರ ತನ್ನ ಜವಾಬ್ದಾರಿಯಿಂದ ಹಿಂದೆ ಸರಿಯುತ್ತಿರುವುದರಿಂದ ಕಾರ್ಮಿಕರು ತೀವ್ರ ಶೋಷಣೆ ಗುರಿಯಾಗಿದ್ದಾರೆ. ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸುವ ತಪ್ಪಿತಸ್ಥ ಮಾಲೀಕರ ಮೇಲೆ ಕ್ರಮ ಜರುಗಿಸುವ, ವಿಚಾರಣೆ ನಡೆಸುವುದನ್ನು ಕೈ ಬಿಡಲಾಗಿದೆ. ಕಾರ್ಮಿಕ ಇಲಾಖೆ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ವಿಳಂಬ ಮಾಡುವ ಮಾಲೀಕರ ಪರವಹಿಸುವ ಹಲವು ಉದಾಹರಣೆಗಳಿವೆ. ಸಹಕಾರಿ ಸಂಘಗಳಲ್ಲಿ ದುಡಿಯುವ ಕಾರ್ಮಿಕರನ್ನು ಕೈಗಾರಿಕಾ ವಿವಾದ ಕಾಯಿದೆ ವ್ಯಾಪ್ತಿಯಿಂದ ಹೊರಗಿಡುವ ಶಾಸನ ಜಾರಿಗೊಳಿಸಲಾಗಿದೆ. ರಫ್ತು ವಲಯಗಳೆಂದು ಪರಿಗಣಿಸಲ್ಪಟ್ಟ ಪ್ರದೇಶಗಳನ್ನು ಕಾರ್ಮಿಕ ಕಾನೂನುಗಳ ವ್ಯಾಪ್ತಿಯಿಂದ ಹೊರಗಿಟ್ಟು ಅಲ್ಲಿನ ಕಾರ್ಮಿಕರ ವಿಪರೀತ ಶೋಷಣೆಗೆ ಅನುವು ಮಾಡಿ ಕೊಡಲಾಗಿದೆ. ಐ.ಟಿ. ಮತ್ತಿತರ ಕೈಗಾರಿಕೆಗಳನ್ನು ಸಾರ್ವಜನಿಕ ಸೇವಾ ಕ್ಷೇತ್ರವೆಂದು ಘೋಷಿಸಲಾಗಿದೆ. ಕೆಲವು ಉದ್ದಿಮೆಗಳಲ್ಲಿ ರಾತ್ರಿ ಪಾಳಿಯದಲ್ಲಿ ಮಹಿಳಾ ಕೆಲಸಗಾರರನ್ನು ತೊಡಗಿಸಲು ಅವಕಾಶ ಕಲ್ಪಿಸಿ ನಿಯಮಗಳಿಗೆ ತಿದ್ದುಪಡಿ ಮಾಡಲಾಗಿದೆ.

ಕಾರ್ಮಿಕ ಸಂಘಟನೆಯ ಪ್ರಜಾಪ್ರಭುತ್ವ ಹಕ್ಕುಗಳಾದ ಪ್ರತಿಭಟನೆ, ಮೆರವಣಿಗೆ, ಮುಷ್ಕರ ಮುಂತಾದವುಗಳನ್ನು ನಿರ್ಬಂಧ ಪಡಿಸಲು ಕಾನೂನು ಪೋಲೀಸರನ್ನು ಉಪಯೋಗಿಸುವುದು ಹೆಚ್ಚಾಗಿದೆ. ಪಿ.ಯು.ಸಿ. ಉಪನ್ಯಾಸಕರು ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಸಮಸ್ಯೆಗಳನ್ನು ಪರಿಹರಿಸಲು ಒತ್ತಾಯಿಸಿ ಹೋರಾಟಕ್ಕೆ ಇಳಿದಾಗ ಚರ್ಚೆಗಳ ಮೂಲಕ ಪ್ರಜಾ ಸತ್ತಾತ್ಮಕವಾಗಿ ಪರಿಹರಿಸುವ ಬದಲಾಗಿ ಕರಾಳ ಎಸ್ಮಾ ಕಾನೂನನ್ನು ಬಳಸಿ ಧಮನಗೊಳಿಸಲು ಪ್ರಯತ್ನಿಸಲಾಗಿದೆ. ಹಾಲಿ ನಡೆಯುತ್ತಿರುವ ಪೌರ ಸೇವಾ ನೌಕರರ ಮುಷ್ಕರವನ್ನು ಧರ್ಮನಗೊಳಿಸಲು ಎಸ್ಮಾ-ಸೇವಾ ಕಾಯಿದೆಯನ್ನು ಬಳಸುವ ಮಾತನಾಡುತ್ತಿರುವ ಸರ್ಕಾರ ತನ್ನ ಕಾರ್ಮಿಕ ವಿರೋಧಿ, ಕರಾಳ ತುರ್ತು ಪರಿಸ್ಥಿತಿಯ ದಿನಗಳು ನೆನಪಾಗುವಂತೆ ನಡೆದುಕೊಳ್ಳುತ್ತಿದೆ. ಕಾರ್ಮಿಕ ಕಾನೂನುಗಳ ಪರಿಣಾಮಕಾರಿ ಜಾರಿಯನ್ನು ನಿರ್ಲಕ್ಷಿಸಿರುವುದರಿಂದ ಜೀತ ಪದ್ಧತಿ, ಬಾಲಕಾರ್ಮಿಕರ ನೇಮಕ ಮುಂತಾದ ತೀವ್ರ ಶೋಷಣೆಗಳು ನಿರಾಂತಕವಾಗಿ ನಡೆಯುತ್ತಿವೆ.

ರಾಜ್ಯದ ಕಾರ್ಮಿಕ ವರ್ಗದ ಜಲಂತ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ನಿರ್ಲಕ್ಷ್ಯ ತೋರುತ್ತಿರುವ ಕಾರ್ಮಿಕ ವರ್ಗದ ಹೋರಾಟಗಳನ್ನು ಧಮನಕಾರಿ ಕ್ರಮಗಳ ಮೂಲಕ ಮುರಿಯಲು ಪ್ರಯತ್ನಿಸುವ ರಾಜ್ಯ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ತೀವ್ರವಾಗಿ ಪ್ರತಿಭಟಿಸಬೇಕೆಂದು, ಹೋರಾಟ ಕಾರ್ಯಕ್ರಮ ರೂಪಿಸಬೇಕೆಂದು ಸಮ್ಮೇಳನ ಕರೆ ನೀಡಿದೆ.

ನೂತನವಾಗಿ ಆಯ್ಕೆಯಾದ ಕಾರ್ಮಿಕ ನಾಯಕತ್ವ

ಅಧ್ಯಕ್ಷರು:
ಎಸ್.ಸೂರ್ಯನಾರಾಯಣ ರಾವ್

ಉಪಾಧ್ಯಕ್ಷರು:
ಬಿ.ಮಾಧವ
ಸಿ.ನಂಜುಂಡಪ್ಪ
ಕೆ.ಶಂಕರ್
ವಿ.ಸುಕುಮಾರ್
ರೋನಾಲ್ಡ್ ವಾಜ್

ಪ್ರಧಾನ ಕಾರ್ಯದರ್ಶಿ:
ವಿ.ಜೆ.ಕೆ.ನಾಯರ್

ಕಾರ್ಯದರ್ಶಿಗಳು:
ಇ.ಕೆ.ಎನ್.ರಾಜನ್
ಹೆಚ್.ಎನ್.ಗೋಪಾಲಗೌಡ
ಎಸ್.ಪ್ರಸನ್ನಕುಮಾರ್
ಎಸ್.ವರಲಕ್ಷ್ಮಿ
ಮೀನಾಕ್ಷಿ ಸುಂದರಂ

ಸಹ ಕಾರ್ಯದರ್ಶಿಗಳು:
ಚಂದು ಜಾದವ್
ತಿಲಕಗೌಡ
ಹೆಚ್.ಎಂ.ಕಾಳಯ್ಯ
ಸಯ್ಯದ್ ಮುಜೀಬ್

ಖಜಾಂಚಿ:
ಕೆ.ವಿ.ಶ್ರೀನಿವಾಸನ್

ಮುಳುಗುತ್ತಿರುವ ಟೈಟಾನಿಕ್ ಕಂಗೆಟ್ಟಿರುವ ನೇಕಾರರು

ಭಾರತೀಯರ ಉಡುಗೆಯಲ್ಲಿ ರೇಷ್ಮೆಗೆ ವಿಶಿಷ್ಟ ಸ್ಥಾನ. ಪಾರಂಪರಿಕವಾಗಿ ಮಾತ್ರವಲ್ಲದೆ ಇತ್ತೀಚಿನ ಫ್ಯಾಷನ್ ಜಗತ್ತಿನಲ್ಲೂ ತನ್ನ ವಿಶೇಷತೆಯನ್ನು ಮೆರೆಯುತ್ತಿರುವ ರೇಷ್ಮೆ ಲಕ್ಷಾಂತರ ಜನರಿಗೆ ಉದ್ಯೋಗ ಮತ್ತು ಉಂಬಳವನ್ನು ನೀಡುತ್ತಿರುವ ವಿಶಿಷ್ಟ ಉದ್ಯಮ. ಆದರೆ ತಲೆ ಬಾಲವಿಲ್ಲದ ಉದಾರೀಕರಣ ದೇಶದೆಲ್ಲೆಡೆ, ಎಲ್ಲದರ ಮೇಲೆ ಪರಾಕ್ರಮಗೈಯುತ್ತಿರುವಂತೆ ತನ್ನ ಕಬಂಧ ಬಾಹುಗಳನ್ನು ರೇಷ್ಮೆ ಉದ್ದಿಮೆಯ ಮೇಲೂ ವಿಸ್ತರಿಸಿದೆ. ಹೀಗಾಗಿ ನವಿರಾಗಿ ನಲಿಯುತ್ತಿದ್ದ ರೇಷ್ಮೆ ಉದ್ಯಮ ವಿಲವಿಲನೆ ಒದ್ದಾಡುತ್ತಿದೆ. ನೂರಾರು ಜನರ ಉದ್ಯೋಗ, ಉಂಬಳಕ್ಕೆ ಇದೀಗ ಸಂಚಕಾರ ಬಂದೊದಗಿದೆ. ರೇಷ್ಮೆ ನೇಕಾರರಿಗೆ ಸಂಬಂಧಿಸಿ ಒಂದು ಕಿರು ವರದಿ.

ರೇಷ್ಮೆ ಉದ್ಯಮದಲ್ಲಿ ಮಿನಿಜಪಾನ್ ಎಂದೇ ಕರೆಸಿಕೊಳ್ಳುತ್ತಿರುವ ದೊಡ್ಡಬಳ್ಳಾಪುರ ಸೇರಿದಂತೆ ಬೆಂಗಳೂರು ಜಿಲ್ಲೆಯ ಆನೇಕಲ್, ಯಲಹಂಕ, ದೇವನಹಳ್ಳಿ, ಮಾಗಡಿ, ನೆಲಮಂಗಲ, ವಿಜಯಪುರ, ಮುಂತಾದ ಪ್ರದೇಶಗಳಲ್ಲಿ ರೇಷ್ಮೆ ಕೈಗಾರಿಕೆಯಿದೆ. ಸಾವಿರಾರು ಮಂದಿ ನೇಕಾರರು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಕೈಗಾರಿಕೆಗೆ ಪೂರಕವಾಗಿ ಸಾವಿರಾರು ಮಂದಿ ರೇಷ್ಮೆ ಉತ್ಪಾದನೆಯ ಕೆಲಸದಲ್ಲೂ ತೊಡಗಿದ್ದಾರೆ.

ದೊಡ್ಡಬಳ್ಳಾಪುರ ಪಟ್ಟಣವೊಂದರದ್ದೇ ಉದಾಹರಣೆ ತೆಗೆದುಕೊಳ್ಳುವುದಾದರೆ, ಒಂದು ಲಕ್ಷ ಜನಸಂಖ್ಯೆಯನ್ನು ಹೊಂದಿರುವ ಈ ಊರಿನಲ್ಲಿ ಶೇ 80 ರಷ್ಟು ಜನತೆ ಈ ಉದ್ದಿಮೆಯ ಮೇಲೆ ಅವಲಂಬಿತರಾಗಿದ್ದಾರೆ. ಸುಮಾರು 25

ಎನ್.ಪ್ರಭಾ / ಹೇಮಂತರಾಜು ಬಿ.ಜಿ

ಸಾವಿರ ವಿದ್ಯುತ್‌ಚ್ಚಾಲಿತ ಮಗ್ಗಗಳು ಇಲ್ಲಿ ಕೆಲಸ ನಿರ್ವಹಿಸುತ್ತಿವೆ.

ಅಪ್ಪಟ ರೇಷ್ಮೆ ಟೈಟಾನಿಕ್, ಅಪೂರ್ವ ಮೂರು ಬಗೆಯ ಸೀರೆಗಳ ತಯಾರಿಕೆ:

ಮೂರು ಬಗೆಯ ಸೀರೆ ನೇಯ್ಗೆಯು ರೇಷ್ಮೆ ಉದ್ದಿಮೆಯಲ್ಲಿ ಇಂದು ಚಾಲ್ತಿಯಲ್ಲಿದೆ. ಅಪ್ಪಟ ರೇಷ್ಮೆಯನ್ನು ನೇಯುವವರು ಶೇ 20 ಭಾಗವಾದರೆ ಅಪೂರ್ವ ಮಾದರಿಯ ಸೀರೆಯನ್ನು ನೇಯುವವರು ಶೇ.30 ಭಾಗ. ಇನ್ನುಳಿದ ಶೇ. 50 ಭಾಗದ ನೇಕಾರರು ಟೈಟಾನಿಕ್ ಮಾದರಿಯ ಸೀರೆಯ ನೆಯ್ಗೆಯಲ್ಲಿ ತೊಡಗಿಕೊಂಡಿದ್ದಾರೆ.

ಒಂದು ಎರಡು ಅಥವಾ ಮೂರು ಮಗ್ಗಗಳನ್ನು ಹೊಂದಿರುವ ಬಡ ನೇಕಾರರೆಲ್ಲಾ ಅವಲಂಬಿತನಾಗಿರುವುದು "ಟೈಟಾನಿಕ್" ಮಾದರಿಯ ನೇಯ್ಗೆಯ ಮೇಲೆ ಪ್ರಾರಂಭದಲ್ಲಿ ಅಂದರೆ 98 ರಲ್ಲಿ ಒಂದು ಟೈಟಾನಿಕ್ ಸೀರೆಯ ಮೇಲೆ 200-220 ರೂಪಾಯಿಗಳಷ್ಟು ಬೆಲೆಯಿತ್ತು. (ನೇಕಾರರು ಮಾರುವ ಬೆಲೆ) ಕಳೆದ ಎರಡೇ ವರ್ಷಗಳ ಅವಧಿಯಲ್ಲಿ ಒಂದು ಸೀರೆಯ ಬೆಲೆ 130 ರೂಪಾಯಿಗಳಿಗೆ ಕುಸಿದಿದೆ.

ಒಂದು ಸೀರೆಯ ಉತ್ಪಾದನಾ ವೆಚ್ಚ 154 ರೂಪಾಯಿ. (ವಾರ್ಪ್-36 ರೂಪಾಯಿಗಳು ವೆಫ್ಟ್ 58 ರೂಪಾಯಿಗಳು, ಕಲಾಬತ್ 20 ರೂಪಾಯಿಗಳು, ಮಜೂರಿ 40 ರೂಪಾಯಿಗಳು) ಮಾರಾಟದ ಬೆಲೆ 130ಕ್ಕೆ ಇಳಿದಿದೆ. ಈ ನಷ್ಟ ತುಂಬುವವರು ಯಾರು. ಇದು ನೇಕಾರರ ಅಳಲು, ದೊಡ್ಡಬಳ್ಳಾಪುರದಲ್ಲಿ ಒಂದು ದಿನದಲ್ಲಿ ಕನಿಷ್ಠ ಒಂದು ಮಗ್ಗಕ್ಕೆ ಎರಡು ಮೂರು ಸೀರೆ ನೇಯ್ದರೂ ದಿನಕ್ಕೆ 40.000 ಸೀರೆಗಳು ಸರಾಸರಿಯಾಗಿ ತಯಾರಾಗುತ್ತವೆ. ಇವಿಷ್ಟು ಸೀರೆಗಳನ್ನು ಮಾರಾಟ ಮಾಡುವುದು ಹೇಗೆ? ಎಲ್ಲಿ? ಈ ಪ್ರಶ್ನೆಗೆ ಉತ್ತರ ಸಿಗದಾಗಿದೆ.

ಇಡೀ ರಾಜ್ಯದಲ್ಲಿ ಟೈಟಾನಿಕ್ ಸೀರೆಗಳನ್ನು ನೇಯುವುದು ಪ್ರಧಾನವಾಗಿ ದೊಡ್ಡಬಳ್ಳಾಪುರದಲ್ಲಿಯೇ. ಇಲ್ಲಿ ತಯಾರಿಸಲಾಗುವ ಟೈಟಾನಿಕ್ ಸೀರೆಗಳನ್ನು ಉತ್ತರ ಭಾರತದ ರಾಜ್ಯಗಳಿಗೆ ಸರಬರಾಜು ಮಾಡಲಾಗುತ್ತದೆ.

ತೀರಾ ಹತ್ತಿರದಿಂದ ರೇಷ್ಮೆಯನ್ನು ಹೋಲುವ ಈ ಟೈಟಾನಿಕ್ ಸೀರೆ "ಬಡವರ ರೇಷ್ಮೆ" ಯೆಂದೇ ಪ್ರಸಿದ್ಧಿ. ಸುಲಭ ಬೆಲೆಯಲ್ಲಿ ಬಡವರ ಕೈಗೆಟುಕುವ ಈ ಟೈಟಾನಿಕ್ ಸೀರೆಗಳ ಉದ್ಯಮ ಈಗೀಗ ಅಸಂಖ್ಯಾತ ಬಡನೇಕಾರರ ಹೊಟ್ಟೆಯ ಮೇಲೆ ತಣ್ಣೀರಿನ ಬಟ್ಟೆಯಾಗಿ ಪರಿವರ್ತನೆಗೊಳ್ಳುತ್ತಿದೆ. ಈ ಪರಿವರ್ತನೆಯ ರೂವಾರಿ "ಉದಾರೀಕರಣವೆಂಬ" ಪಿಶಾಚಿ ಲಂಗು-ಲಗಾಮಿಲ್ಲದ ಮಾರುಕಟ್ಟೆಯ ನೀತಿಯಿಂದಾಗಿ ಅಷ್ಟು ಮಾತ್ರವಲ್ಲ ಕೊಡುವ -ಕೊಳ್ಳುವ-ಬೆಲೆ ನಿರ್ಧರಿಸುವ ಎಲ್ಲ ತೀರ್ಮಾನಗಳನ್ನು ಕೆಲವೇ ಖಾಸಗಿ ವ್ಯಕ್ತಿಗಳು ಅಥವಾ ಮಾರವಾಡಿಗಳು ನಿಯಂತ್ರಣ ಮಾಡುತ್ತಿರುವುದರಿಂದ ನಮಗೆ ಈ ಗತಿ ಬಂದೊದಗಿದೆ ಎಂಬುದು ನೇಕಾರರ ಗೋಳಿನ ಅಳಲು.

ಚುನಾವಣೆಯಲ್ಲಿ ಭೋರ್ಗರೆದು ಪಯಣಿಸಿದ ಟೈಟಾನಿಕ್ ಎಂಬ ಹಡಗು ಚುನಾವಣೆ ಮುಗಿಯುತ್ತಿದ್ದಂತೆಯೇ ಮುಳುಗುತ್ತಾ ಬಂತು.

ಕಳೆದ ಲೋಕಸಭಾ ಚುನಾವಣೆಯ ಸಂದರ್ಭ. "ಸ್ವದೇಶೀ ಬೇಟಿ ವಿದೇಶಿ ಬಹು" (ಪ್ರಚಾರದ ಒಂದು ವೈಖರಿ) ವಿನ ನಡುವೆ ತೀವ್ರ ಹಣಾಹಣಿ ನಡೆದಿತ್ತು. ಮತದಾರರ ಮನವೊಲಿಸಲು ಎರಡೂ ಸ್ಪರ್ಧಿಗಳ ಕಡೆಯಿಂದ ನಾನಾ ತರದ ಕಸರತ್ತುಗಳು ನಡೆದಿದ್ದವು. ಇವುಗಳಲ್ಲಿ ಬಹು ಮುಖ್ಯವಾದ, ಒಂದು ಕಸರತ್ತೆಂದರೆ ಮಹಿಳಾ ಮತದಾರರಿಗೆ ಟೈಟಾನಿಕ್ ರೇಷ್ಮೆ ಸೀರೆಗಳನ್ನು ಹಂಚಿದ್ದು. ಅತ್ಯಂತ ಕಡಿಮೆ ಅವಧಿಯಲ್ಲಿ ಲಕ್ಷಾಂತರ ಸೀರೆಗಳು ಬೇಕಾದವು. ಬೇಡಿಕೆ ಹೆಚ್ಚಿತು.

ದೊಡ್ಡ ಬಳ್ಳಾಪುರದಲ್ಲಿ ಮಾತ್ರ ತಯಾರಾಗುವ ಈ ಸೇರೆಗಳಿಗೆ ಇನ್ನಿಲ್ಲದ ಬೇಡಿಕೆ ಬಂತು, ನೇಕಾರರು ಹಿರಿಹಿರಿ ಹಿಗ್ಗಿದರು. ದಿಢೀರನೆ ಬೇಡಿಕೆ ಹೆಚ್ಚಿದ್ದಕ್ಕೆ ಕಾರಣ ತಿಳಿಯದ ಬಡನೇಕಾರರು, ಸಾಲ ಸೋಲ ಮಾಡಿ ಹೊಸ ಹೊಸ ಮಗ್ಗಗಳನ್ನು ಹಾಕಿದರು. ಕೂಲಿಕಾರರು ಸ್ವಂತ ಮಗ್ಗ ಮಾಡುವ ಧೈರ್ಯ ಮಾಡಿದರು. ಒಂದೇ ವಾರದಲ್ಲಿ ಊರಿನ ತುಂಬೆಲ್ಲಾ ಹಬ್ಬದ ವಾತಾವರಣ ಸಡಗರ ನಿರ್ಮಾಣಗೊಂಡಿತು. ಉತ್ತಮ ಬೆಲೆಯೂ ನೇಕಾರರಿಗೆ ಸಿಕ್ಕಿತು. ಚುನಾವಣೆಗಳು ಮುಗಿದವು. ಆ ಸಂದರ್ಭಕ್ಕೆಷ್ಟೇ ಸೃಷ್ಟಿಯಾಗಿದ್ದ ಬೇಡಿಕೆ ಕುಸಿಯಿತು. ಬರಾಟೆಯಿಂದ ಓಡಿದ ಟೈಟಾನಿಕ್ ಮುಳುಗಲಾರಂಭಿಸಿತು. ಹಗಲು ರಾತ್ರಿ ಮನೆಮಂದಿಯೆಲ್ಲಾ ನೇಯ್ದ ಸೀರೆಗಳು ರಾಶಿಬಿದ್ದವು. ಕೊಳ್ಳುವವರು ಇಲ್ಲವಾದರು. ಕಾರಣ ಬೆಲೆ ಕುಸಿಯಿತು. ಒಂದೇ ವಾರದಲ್ಲಿ ಮಾರುಕಟ್ಟೆ ತೀವ್ರ ಏರುಪೇರಿಗೆ ಸಿಲುಕಿತು.


ಒಮ್ಮೆಗೆ ಕುಸಿದ ಟೈಟಾನಿಕ್ ಸೀರೆಗಳ ಬೆಲೆ ಇಲ್ಲಿಯವರೆಗೆ ಏರಲೇ ಇಲ್ಲ. ನೇಕಾರರಿಗಿದ್ದ ಭರವಸೆಗಳೂ ಮುಳುಗಡೆಯಾಗಿ ಎರಡೂ ಮೂರು ಮಗ್ಗಗಳ ಮಾಲಿಕರಾಗಿದ್ದ ನೇಕಾರರು ಬೇರೆ ಕಡೆಗಳಲ್ಲಿ ಕೂಲಿಗೆ ಸೇರುವ ಪರಿಸ್ಥಿತಿ ನಿರ್ಮಾಣಗೊಂಡಿತು. ಇಂಥದೇ ಸಂದರ್ಭದ ನಿರ್ಮಾಣಕ್ಕಾಗಿ ಕಾಯುತ್ತಿದ್ದ ದಲ್ಲಾಳಿಗಳು ಒಟ್ಟಾಗಿ ಮಾತನಾಡಿಕೊಂಡು ಇದ್ದಬದ್ದ ಮಾಲನ್ನೆಲ್ಲಾ ಖರೀದಿಸಿ ಬೇರೆ ಕಡೆಗಳಲ್ಲಿ ಮಾರಾಟ ಮಾಡಿ ಲಾಭ ಹೊಡೆದರು. ಬೆಲೆ ನಿಯಂತ್ರಕರು, ಬೆಲೆ ಕಟ್ಟುವವರು ಎಲ್ಲವೂ ಇವರೇ ಆಗಿರುವುದರಿಂದ ಮತ್ತೆ ಕುಸಿದ ಬೆಲೆಯನ್ನು ಏರಿಸುವ ಗೋಜಿಗೆ ಹೋಗಲಿಲ್ಲ.

ಕಳೆದ ಲೋಕಸಭಾ ಚುನಾವಣೆಯ ಲಾಭ ರಾಜಕಾರಣಿಗಳಿಗಷ್ಟೇ ಸಿಗಲಿಲ್ಲ ನಮ್ಮೂರಿನ ಮಾರವಾಡಿಗಳು ಅಪಾರವಾಗಿ ಗಳಿಸಿದರು ಎನ್ನುತ್ತಾರೆ ಅಲ್ಲಿನ ಬಡನೇಕಾರರು. ಟೈಟಾನಿಕ್ ಸೀರೆಗಳ ಬೆಲೆ ಕುಸಿಯಲು ದಲ್ಲಾಳಿಗಳ ಲಾಭಕೋರತನ ಹಾಗೂ ಅವರಿಗೆ ಸಿಕ್ಕ ಪ್ರೋತ್ಸಾಹವೇ ಕಾರಣವೆಂದು ಹೇಳುವ ಅಲ್ಲಿನ ನೇಕಾರರು ಸರ್ಕಾರ ಮಧ್ಯ ಪ್ರವೇಶ ಮಾಡಿ ಬೆಲೆ ನೀತಿಯನ್ನು ಆಳವಡಿಸಬೇಕು ಲಂಗು - ಲಗಾಮಿಲ್ಲದ ಮಾರುಕಟ್ಟೆ ವ್ಯವಸ್ಥೆಯ ಮೇಲೆ ನಿಯಂತ್ರಣವನ್ನು ಇಡಬೇಕೆನ್ನುತ್ತಾರೆ.

ಲಾಭಕೋರತನಕ್ಕಷ್ಟೇ ಆದ್ಯತೆ ನೀಡುವ ಉದಾರೀಕರಣದ ಧೋರಣೆಗಳು ಬಡವರ ಹೊಟ್ಟೆ ತುಂಬಿಸಲಾರವು. ಬೆರಳೆಣಿಕೆಯಷ್ಟು ವ್ಯಾಪಾರಿಗಳು, ದಲ್ಲಾಳಿಗಳನ್ನಷ್ಟೇ ತೃಪ್ತಿಪಡಿಸಬಲ್ಲವು ಎನ್ನುವುದಕ್ಕೆ ಇದೊಂದು ನೇರ ಉದಾಹರಣೆ.

ಇದೇ ಜಾಡಿನಲ್ಲಿ ಸಾಗಿರುವ ಅಪೂರ್ವ ಸೀರೆಗಳ ಉದ್ಯಮ

ಅಪೂರ್ವ, ರೇಷ್ಮೆಯ ಅಪರಾವತಾರ.



ಆದರೆ ರೇಷ್ಮೆಯಲ್ಲ ಪಾಲಿಸ್ಟರ್ ಮತ್ತು ಸಿಲ್ಕ್ ಮಿಶ್ರಿತ ನೇಯ್ಗೆಯಿಂದ ಕೂಡಿದ ಈ ಸೀರೆಗಳು ನೋಡಲು ಹಬ್ಬ. ಆಂಧ್ರ ತಮಿಳುನಾಡು, ಕರ್ನಾಟಕ, ಕೇರಳ ಮುಂತಾದೆಡೆ ಬೇಡಿಕೆ ಹೊಂದಿರುವ ಈ ಸೀರೆಗಳು ಸಹ ಬಡವರ ಸೀರೆಗಳೆ ಟೈಟಾನಿಕ್ ಸೀರೆಗಳಷ್ಟು ಉತ್ಪಾದನೆ ಬರದೇ ಹೋದರು ನಿಭಾಯಿಸಬಹುದಾದ ಬೆಲೆ ಹೊಂದಿತ್ತು. ಅಂಚು, ಸೆರಗು, ಬಣ್ಣ ಎಲ್ಲವೂ ಮನ ಮೋಹಕವಾದ ಈ ಸೀರೆಗಳ ಬೆಲೆ ಪ್ರಾರಂಭದಲ್ಲಿ ನಾಲ್ಕುನೂರು ರೂಪಾಯಿಗಳಷ್ಟಿತ್ತು. ಇದೀಗ ಈ ಅಪೂರ್ವ ಸೀರೆಗಳ ಬೆಲೆ 200ಕ್ಕೆ ಇಳಿದಿದೆ.

ಒಂದು ಮಗ್ಗದಲ್ಲಿ ಒಂದು ದಿನಕ್ಕೆ ಒಂದೂವರೆ ಸೀರೆಯನ್ನು ನೇಯಬಹುದು. ಇದರ ಮಾರ್ಕೆಟಿಂಗ್ ಸಹ ತೀರಾ ಕಷ್ಟವಾಗಿದೆ. ಡೆಲ್ಲಿ, ಕಲ್ಕತ್ತಾ, ಬಾಂಬೆ, ಜೈಪುರ, ಜೋಧಪುರ ವಾರಣಾಸಿ, ಒರಿಸ್ಸಾದ ಕೆಲವು ಭಾಗಗಳಲ್ಲಿ ಮಾತ್ರ ಬೇಡಿಕೆಯಿರುವ ಈ ಸೀರೆಗಳು ಸಹ ಎಲ್ಲ ಕಡೆ ವಿತರಣೆಯಾಗುವುದು ಮಾರವಾಡಿಗಳ ಮುಖಾಂತರವೆ, ಅಥವಾ ದಲ್ಲಾಳಿಗಳ ಮುಖಾಂತರವೆ. ಈ ಸೀರೆಗಳನ್ನು ತಯಾರಿಸಲು ಬೀಳುವ ವೆಚ್ಚವನ್ನು ಸಹ ತುಂಬಿಕೊಳ್ಳಲಾಗದ ಪರಿಸ್ಥಿತಿ ನಿರ್ಮಾಣಗೊಂಡಿದೆಯೆಂಬುದು ತಯಾರಕರ ಗೋಳು. ಒಂದು ಸೀರೆಯನ್ನು ನೇಯಲು ಬೀಳುವ ವೆಚ್ಚ 267 ರೂಪಾಯಿಗಳು (ವಾರ್ಪ್-38 ವೆಫ್ಟ್-69, ಜರಿ-40 ಕೂಲಿ-120) ಕೊಳ್ಳುವ ಬೆಲೆ 200 ರೂಪಾಯಿಗಳು ಉದ್ಯಮ ಉಳಿಯುವುದು ಹೇಗೆ? ಅಪೂರ್ವ ಸಿಲ್ಕ್ ಸೀರೆಗಳು ಸಹ ಅವಸಾನದ ಅಂಚಿನಲ್ಲಿದ್ದು ಅವನ್ನೇ ನಂಬಿದ್ದ ಸಾವಿರಾರು ನೇಕಾರರು ಬೀದಿಗೆ ಬೀಳುತ್ತಿದ್ದಾರೆ.

ಶುದ್ಧ ರೇಷ್ಮೆ:

ಬೆಂಗಳೂರು ಜಿಲ್ಲೆಯಲ್ಲಿ ದೊಡ್ಡಬಳ್ಳಾಪುರ, ಮಾಗಡಿ, ಯಲಹಂಕ, ಆನೇಕಲ್, ಮುಂತಾದೆಡೆ ಶುದ್ಧರೇಷ್ಮೆ ನೇಯುವ ನೇಕಾರರಿದ್ದಾರೆ ಇದು ಪ್ರಮುಖವಾದ ಉದ್ಯಮ.

ದೇಶೀಯ ರೇಷ್ಮೆ ಗುಣಮಟ್ಟದಲ್ಲಿ ಅಷ್ಟೊಂದು ಉತ್ತಮವಾಗಿಲ್ಲ ಜೊತೆಗೆ ಉದ್ಯಮಕ್ಕೆ ಬೇಕಾಗುವಷ್ಟು ರೇಷ್ಮೆ ಸಿಗದ ಕಾರಣ ಚೈನಾ ರೇಷ್ಮೆಯನ್ನು ಅವಲಂಬಿಸಿ ಉದ್ಯಮ ನಡೆಯುತ್ತಿದೆ ಶ್ರೀಮಾನ್ ಹೆಗಡೆಯವರು ಕೇಂದ್ರ ವಾಣಿಜ್ಯ ಮಂತ್ರಿಗಳಾಗಿದ್ದಾಗ ಚೈನಾದಿಂದ ರೇಷ್ಮೆಯನ್ನು ಮುಕ್ತ ಆಮದು ಮಾಡಿಕೊಳ್ಳುವ ಒಪ್ಪಂದ ಮಾಡಿದ್ದರು. ಇನ್ನು ಮುಂದೆ ಚೈನಾ ರೇಷ್ಮೆ ಬೇಕಾದಷ್ಟು ರಾಷ್ಟ್ರಕ್ಕೆ ಆಮದಾಗುತ್ತದೆ ದೇಶೀ ರೇಷ್ಮೆಗಿಂತ ಕಡಿಮೆ ಬೆಲೆಯಲ್ಲಿ ಒಳ್ಳೆಯ ಗುಣಮಟ್ಟದ ರೇಷ್ಮೆ ಬಳಕೆಮಾಡಬಹುದೆಂದು ಡಂಗೂರ ಹೊಡೆದಿದ್ದರು. (ದೇಶೀ ರೈತರ ಪಾಡೇನು? ಮುಂತಾದ ಪ್ರಶ್ನೆಗಳು ಒಂದು ಕಡೆ)

ಹೌದು ವಿದೇಶೀ ರೇಷ್ಮೆಯೇನೋ ಬರುತ್ತಿದೆ. ಸಾಕಷ್ಟು ಸಿಗುತ್ತಿದೆ. ಆದರೆ ರಾಜಮಾರ್ಗದಲ್ಲಿ ಸಿಗುವ ರೇಷ್ಮೆಗಿಂತ ಕಳ್ಳಮಾರ್ಗದಲ್ಲಿ ಬರುವ ರೇಷ್ಮೆಯೆ ಹೆಚ್ಚು. ಆಮದು ಸುಂಕ ತಪ್ಪಿಸಿ ತೆರಿಗೆ ವಂಚಿಸಿ ರೇಷ್ಮೆಯನ್ನು ತರುವ ವ್ಯಾಪಾರಸ್ಥರು ನೇಕಾರರಿಗೆ ರಸೀದಿ ನೀಡದೆ ರೇಷ್ಮೆ ಕೊಡುವುದೇ ಹೆಚ್ಚು. ಅಧಿಕೃತವಾಗಿ 50 ಕೆ.ಜಿ. ರೇಷ್ಮೆ ತಂದಿದ್ದರೆ ಅನಧಿಕೃತವಾಗಿ 100 ಕೆ.ಜಿ. ರೇಷ್ಮೆ ತರಿಸಿರುತ್ತಾರೆ. ಕೊಂಡವರಿಗೆಲ್ಲಾ ರಸೀದಿ ಕೊಟ್ಟರೆ ಕಳ್ಳ ಲೆಕ್ಕ ಸಿಗಬಹುದಾದ್ದರಿಂದ ಅಧಿಕೃತ ಮಾರಾಟಕ್ಕೆ ಮಾತ್ರ, ಬೇಕಾದವರಿಗೆ ರಸೀದಿ ಕೊಡುತ್ತಾರೆ. ರಸೀದಿ ಪಡೆಯದೆ ರೇಷ್ಮೆ ತಂದ ನೇಕಾರರುಕಸ್ಟಮ್ಸ್ ಅಧಿಕಾರಿಗಳ ಕಿರುಕುಳಕ್ಕೆ ಅಪಾರವಾಗಿ ಬಲಿಯಾಗುತ್ತಿದ್ದಾರೆ.

ಕಸ್ಟಮ್ಸ್ ಅಧಿಕಾರಿಗಳು ದೊಡ್ಡ ವ್ಯಾಪಾರಸ್ಥರನ್ನು ಅಥವಾ ಕಳ್ಳಸಾಗಾಣಿಕೆದಾರರನ್ನು ಹಿಡಿದು ಶಿಕ್ಷಿಸುವುದಕ್ಕಿಂತ ಹೆಚ್ಚಾಗಿ ಬಡಪಾಯಿ ಬಡ ನೇಕಾರರನ್ನು ಹಿಂಸಿಸುವುದೇ ಹೆಚ್ಚು. ಕೊಂಡ ಮಾಲಿಗೆ ರಸೀದಿ ಕೇಳಿದರೆ ಮಾಲೇ ಸಿಗುವುದಿಲ್ಲವೆಂಬುದು ಒಂದು ಕಡೆಯಾದರೆ ರಸೀದಿ ಇಲ್ಲದೆ ಮಾಲು ತಂದು ಫಜೀತಿಗೆ ಅಥವಾ ಹಿಂಸೆಗೆ ಸಿಲುಕುವುದು ಮತ್ತೊಂದು ಕಡೆ, ಅನಧಿಕೃತ ವ್ಯಾಪಾರ ಮಾಡುವ ದೊಡ್ಡ ಬಂಡವಾಳಿಗರು ಕಸ್ಟಮ್ಸ್ ನವರು ಹಿಡಿದರೆ ಅದು ನಮ್ಮ ತಲೆನೋವಲ್ಲ ಅಂಗಡಿಯಿಂದ ಹೊರಗೆ

ಮುಂದಿನ ಪುಟಕ್ಕೆ

ಹೋಗುವವರೆಗೆ ಮಾತ್ರ ನಾವು ಜವಾಬ್ದಾರರು ಎಂದು ಸಲೀಸಾಗಿ ನುಣುಚಿಕೊಳ್ಳುತ್ತಾರೆ. ಹೀಗಾಗಿ ಸಣ್ಣ ವ್ಯಾಪಾರಸ್ಥರು ಸಾವಿರಾರು ರೂಪಾಯಿಗಳ ತೆರಿಗೆ ದಂಡ ತೆತ್ತು ಪರಿತಪಿಸಬೇಕಾಗಿದೆ.

"ರೇಷ್ಮೆ ಕಾನೂನು ಜಾರಿ ನಿರ್ದೇಶನಾಲಯದ" ಕಾನೂನುಗಳೆಲ್ಲ ಬಡಪಾಯಿ ವ್ಯಾಪಾರಸ್ಥರ ಮೇಲೆ ಪ್ರಯೋಗವಾಗುತ್ತಿವೆಯಲ್ಲದೆ, ನಿಜವಾದ ಆರೋಪಿಗಳ ಮೇಲಲ್ಲ.

ರಸೀದಿಯಿಲ್ಲದೆ ರೇಷ್ಮೆಕೊಂಡರೆ ಕೆ.ಜಿ.ಗೆ 200 ರೂಪಾಯಿಗಳನ್ನು ದಂಡ ತೆರಬೇಕಾಗುತ್ತದೆ. ಮಾರುವವರಿಗೆ ಯಾವ ಕಷ್ಟವೂ ಇಲ್ಲ. (ಉದಾರೀಕರಣದ ರಕ್ಷಣೆ ಅವರಿಗಿದೆ).

ಲಾಭವೂ ಇಲ್ಲ ನಷ್ಟವೂ ಇಲ್ಲ ಎಂಬಂತೆ ನಡೆಯುತ್ತಿರುವ ಈ ಉದ್ದಿಮೆ ಉಳಿಯಬೇಕಾದರೆ ಇಲ್ಲೂ ಸಹ ಸರ್ಕಾರದ ಮಧ್ಯ ಪ್ರವೇಶ ಬೇಕೆ ಬೇಕು. ಮಾರುಕಟ್ಟೆಯಲ್ಲಿ ಬೇಡಿಕೆ ಇದೆ. ಕಚ್ಚಾ ಮಾಲಿನ ಬೆಲೆ ಹೆಚ್ಚಾಗಿದೆ. ನೇಕಾರನಿಗೆ ಮಾತ್ರ ಲಾಭವಿಲ್ಲದಾಗಿದೆ ಮಧ್ಯವರ್ತಿಗಳು ಇದರಿಂದ ಅಪಾರ ಲಾಭ ಹೊಡೆಯುತ್ತಿದ್ದಾರೆ.

ಕೆಲವೇ ಮಂದಿ ಮಹಿವಾಟುದಾರರು ಕೋಟ್ಯಾಧಿಪತಿಗಳಾಗಿದ್ದಾರೆ. ನೇಕಾರರಿಗೆ ಅನುಕೂಲವಾಗುವ ನೀತಿಗಳು ಇಲ್ಲವಾಗಿವೆ.

ಉತ್ಪಾದಿಸಿದ ಬಟ್ಟೆಯನ್ನು ಉತ್ಪಾದಿಸಿದವರೇ ಮಾರಾಟ ಮಾಡುವ ಒಂದೇ ಒಂದು ಉದಾಹರಣೆಯೂ ನಮ್ಮ ಮುಂದಿಲ್ಲ ಎಲ್ಲವೂ ಮಾರವಾಡಿಗಳ ನಿಯಂತ್ರಣದಲ್ಲಿದೆ. ಕಚ್ಚಾ ಮಾಲನ್ನು ಒದಗಿಸುವುದು ಸಿದ್ಧಮಾಲನ್ನು ಪಡೆದು ಮಾರುಕಟ್ಟೆಗೆ ಪೂರೈಸುವುದು ಬೆಲೆ ನಿಗದಿಪಡಿಸುವುದು ಎಲ್ಲವೂ ಮಧ್ಯವರ್ತಿಗಳಿಂದಲೆ ಎನ್ನುವಂತಾಗಿದೆ.

ನೇಕಾರರನ್ನು ಸಣ್ಣ ಬಂಡವಾಳಿಗರನ್ನು ರಕ್ಷಣೆ ಮಾಡುವ ಸಲುವಾಗಿ ಹುಟ್ಟಿಕೊಂಡ ಸಹಕಾರಿ ಸಂಘಗಳು ಭ್ರಷ್ಟಾಚಾರದ ದೊಗರುಗಳಾಗಿ ಲೂಟಿ ಹೊಡೆದ ನಂತರ ಮುಚ್ಚಲ್ಪಟ್ಟಿವೆ. ಈ ರೀತಿಯಲ್ಲಿ ಈಗಾಗಲೆ ನಾಲ್ಕೈದು ಸಹಕಾರಿ ಸಂಘಗಳು ಬಾಗಿಲು ಮುಚ್ಚಿವೆ. ಹೀಗಾಗಿ ಬಡನೇಕಾರರ ಕಷ್ಟವನ್ನು ಕೇಳುವವರು ಇಲ್ಲವಾಗಿದ್ದಾರೆ.

ಒಟ್ಟಾರೆ ಈ ಉದ್ದಿಮೆಗಳಲ್ಲಿ ಶೇ 10 ರಷ್ಟು ನೇಕಾರರು ಶ್ರೀಮಂತರಿರಬಹುದು. ಉಳಿದವರೆಲ್ಲಾ ಬಡನೇಕಾರರೆ ಆಗಿರುತ್ತಾರೆ. ಇವತ್ತಿನ ಉದಾರೀಕರಣದ ದಾಳಿ ಅಪ್ಪಳಿಸುತ್ತಿರುವುದು ಈ ಶೇಕಡಾ 90 ರಷ್ಟು ಜನರನ್ನು. ಶ್ರೀಮಂತ ನೇಕಾರರು ಹೇಗೂ ಬದುಕುತ್ತಾರೆ. ಲಾಭ ಬಂದಾಗ ಶೇಖರಿಸಿದ ಬಂಡವಾಳವೆ ಅವರ ಬಳಿ ಸಾಕಷ್ಟಿದೆ. ಆದರೆ ಮಧ್ಯಮ ವರ್ಗದ ಕೆಳಮಧ್ಯಮವರ್ಗದ ನೇಕಾರರು ಕೂಲಿಗಾರರು ಕಂಗೆಟ್ಟಿರುವುದಂತೂ ಸತ್ಯ. ಈ ಉದ್ದಿಮೆಯನ್ನು ಉಳಿಸಬೇಕಾದರೆ ನೇಕಾರರನ್ನು ಉಳಿಸಲೇ ಬೇಕಾಗುತ್ತದೆ. ಹೀಗಾಗಿ ಸರ್ಕಾರದ ಪ್ರಭಾವಯುತ ಮಧ್ಯ ಪ್ರವೇಶ ಬೇಕು.

ಮಾರವಾಡಿಗಳ ಸಂಪೂರ್ಣ ನಿಯಂತ್ರಣದಲ್ಲಿರುವ ಉದ್ದಿಮೆಯನ್ನು ಅವರ ಕಪಿಮುಷ್ಟಿಯಿಂದ ಮೊದಲು ಬಿಡಿಸಬೇಕು.

ಕಚ್ಚಾ ಮಾಲನ್ನು ಪೂರೈಸುವುದು ಸಿದ್ಧಮಾಲಿಗೆ ದರ ನಿಗದಿಪಡಿಸುವುದು ಸಿದ್ಧಪಡಿಸಿದ ಮಾಲನ್ನು ಸರ್ಕಾರವೆ ಕೊಂಡು ಮಾರುಕಟ್ಟೆ ಒದಗಿಸುವುದು.

ಬೆಲೆ ಕುಸಿದಾಗ ಪರಿಹಾರ ನೀಡುವುದು ಸಹಕಾರಿ ಸಂಘಗಳನ್ನು ರಚಿಸಿ ಪ್ರಭಾವಿ ರಾಜಕಾರಣಗಳು, ಪಟ್ಟಭದ್ರರನ್ನು ನೇಮಿಸದೆ ನೇಕಾರರನ್ನೇ ಭರ್ತಿ ಮಾಡುವ ಮೂಲಕ ಸಮರ್ಥವಾಗಿ ನೇಕಾರರಿಗೆ ಅನುಕೂಲವಾಗುವ ರೀತಿಯಲ್ಲಿ ಕಾರ್ಯನಿರ್ವಹಿಸುವುದು ಮುಂತಾದವು ಸರ್ಕಾರದ ಕಡೆಯಿಂದ ಆಗಬೇಕಾದ ಕೆಲಸಗಳು.

ದಿಕ್ಕು ದೆಸೆಯಿಲ್ಲದ ನೀತಿಗಳಿಗೆ ಬದಲಾಗಿ ಸಮರ್ಥವಾದ ಪರ್ಯಾಯ ನೀತಿಯೊಂದನ್ನು ಜಾರಿಗೊಳಿಸದೆ ನೇಕಾರರು ಉಳಿಯಲಾರರು ನೇಕಾರರು ಸರ್ಕಾರಕ್ಕೆ ಸೆಡ್ಡುಹೊಡೆದು ನಿಂತು ಹೋರಾಡದ ಹೊರತು ನೀತಿ ಬದಲಾಗದು. ಸರ್ಕಾರ ಇದಕ್ಕೆ ಸಂಬಂಧಿಸಿ ಚರ್ಚೆಮಾಡಬೇಕು. ಕಷ್ಟದಲ್ಲಿರುವ ನೇಕಾರರನ್ನು ಚರ್ಚೆಗೆ ಆಹ್ವಾನಿಸಿ ಪರಿಹಾರ ಹುಡುಕಬೇಕು.

○

ಫ್ರಾನ್ಸ್‌ನಲ್ಲಿ ರೈತ ಸಂಘದಿಂದ ಅಮೆರಿಕನ್ 'ಕೋಳಿಅಂಗಡಿ'ಗಳ ಮೇಲೆ ದಾಳಿ

ಹಿಂದೆ ರೈತ ಸಂಘದ ಕಾರ್ಯಕರ್ತರು ಅಮೆರಿಕದ ಕೋಳಿ ಅಂಗಡಿ 'ಕೆಂಟುಕಿ ಚಿಕನ್' ಗಳ ಮೇಲೆ ಧಾಳಿ ಮಾಡಿದ್ದು ನೆನಪಿರಬಹುದು. ಭಾರತದಲ್ಲಿ ಹರಡತೊಡಗಿದ್ದ ಜಾಗತೀಕರಣದ ವಿರುದ್ಧ ಇದು ಪ್ರತಿಭಟನೆಯಾಗಿತ್ತು. ಈಗ ಇಂತಹುದೇ ಘಟನೆ ಫ್ರಾನ್ಸಿನಿಂದ ವರದಿಯಾಗಿದೆ.

ಕಳೆದ ವರ್ಷವೇ ಜೋಸ್ ಬೊವ್ ಎಂಬ ಫ್ರೆಂಚ್ ರೈತ ಮಹಾಸಂಘದ ನಾಯಕ ಹಾಗೂ ಆತನ ಜತೆ ನೂರಾರು ಸಂಗಡಿಗರು ಮಿಲಾವು ಎಂಬ ಜಿಲ್ಲೆಯ ಮುಖ್ಯ ಪಟ್ಟಣದಲ್ಲಿ ಅಮೆರಿಕದ 'ದರ್ಶಿನಿ'ಯಾದ 'ಮ್ಯಾಕ್ ಡೋನಾಲ್ಡ್' ನ್ನು ನೆಡೆಯದಂತೆ ತಡೆದಿದ್ದರು. ಈ 'ಅಪರಾಧ' ಕ್ಕಾಗಿ ಜೋಸ್ ಬೊವ್ ಮತ್ತು ಆತನ ಒಂಬತ್ತು ಸಂಗಡಿಗರ ಮೇಲೆ ಕೇಸ್ ಹಾಕಲಾಗಿದೆ. ಈ ಕೇಸ್ ಜೋಸ್ ಬೊವ್‌ನ ವಿಚಾರಣೆಯಾಗಿರದೆ, ಜಾಗತೀಕರಣ, WTO ನ ಅನ್ಯಾಯಯುತ ವ್ಯಾಪಾರಿ ಪ್ರವೃತ್ತಿಗಳು, ಅಮೆರಿಕದ ಯಜಮಾನ ಧೋರಣೆಯ ಸಾರ್ವಜನಿಕ ವಿಚಾರಣೆಯಾಗಿ ಮಾರ್ಪಟ್ಟಿದೆ. ಜೋಸ್ ಬೊವ್‌ನ ಬೆಂಬಲಕ್ಕೆ, ಅವನ ವಿಚಾರಣೆಯ ವಿರುದ್ಧ ಪ್ರತಿಭಟಿಸಲು ಆ ಪಟ್ಟಣಕ್ಕೆ ಫ್ರಾನ್ಸ್‌ನಿಂದ, ಯುರೋಪಿನಿಂದ, ಇಡೀ ಜಗತ್ತಿನಿಂದ ಜನ ಹರಿದುಬರುತ್ತಿದ್ದಾರೆ. ದಕ್ಷಿಣ-ಪಶ್ಚಿಮ ಫ್ರಾನ್ಸ್ ಮಿಲಾವು ಜಾಗತೀಕರಣದ ವಿರುದ್ಧದ ಪ್ರತಿಭಟನೆಯ 'ಮೆಕ್ಕಾ' ಆಗಿಬಿಟ್ಟಿದೆ.

ಪ್ರತಿದಿನ ಪ್ರತಿಭಟನಾ ಸಭೆಗಳು ಜರುಗುತ್ತಿವೆ. ವ್ಯಾಪಕ ಪಾಲ್ಗೊಳ್ಳುವಿಕೆ ಕಂಡು ಬಂದಿದೆ. ಜೂನ್ 30 ರಂದು ಅಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಒಂದು ಲಕ್ಷ ಜನ ನೆರೆದಿದ್ದರು. 'ಮ್ಯಾಕ್ ಡೊನಾಲ್ಡ್' ವಿರುದ್ಧ ಇದು ಭಾರಿ ಸಾಮೂಹಿಕ ಚಳುವಳಿಯಾಗಿ ಬೆಳೆದಿದೆ. ಈ ಸಭೆಯಲ್ಲಿ ದಕ್ಷಿಣ ಅಮೆರಿಕದ 70 ರೈತ, ಕೃಷಿಕೂಲಿ, ಎಸ್ಟೇಟ್ ಕಾರ್ಮಿಕರ ಸಂಘಟನೆಗಳ ಫೆಡರೇಷನ್ ನಾಯಕರು, ಸೆನ್ಯಗಲ್ ಮತ್ತು ಯುರೋಪಿನ ಕಮ್ಯುನಿಸ್ಟ್ ಪಾರ್ಟಿ ನಾಯಕರು ಫ್ರೆಂಚ್‌ನ ಕೇಂದ್ರೀಯ ಟ್ರೇಡ್ ಯೂನಿಯನ್ CGT ಕಾರ್ಯಕರ್ತರು/ನಾಯಕರು, ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ದಿನೇ ದಿನೇ ಹೆಚ್ಚುತ್ತಿದೆ. 'ಮ್ಯಾಕ್‌ಡೋನಾಲ್ಡ್' ಜಾಗತೀಕರಣದ, WTO ದಬ್ಬಾಳಿಕೆ, ಅಮೆರಿಕನ್ ಯಜಮಾನಿಕೆಯ ಸಂಕೇತವಾಗಿ ಬಿಟ್ಟಿದೆ. ಹಲವು ಕಡೆ 'ಕೋಕಾಕೋಲಾ' ಬಹಿಷ್ಕಾರ ಸಹ ಆರಂಭವಾಗಿದೆ. 'ಇಡೀ ಜಗತ್ತು ಒಂದು ಸರಕಲ್ಲ' ಎಂಬ ಘೋಷಣೆ ಇರುವ ಟೀಶರ್ಟ್ ಈಚಳುವಳಿಯಲ್ಲಿ ಅತ್ಯಂತ ಜನಪ್ರಿಯವಾಗಿದೆ. ನಾನು ಏನು ತಿನ್ನಬೇಕು, ಏನು ಫಿಲಂ ನೋಡಬೇಕು, ಏನು ಕುಡಿಯಬೇಕು -ಇವೆಲ್ಲವನ್ನು ಅಮೆರಿಕದ ಕೆಲವು ಕಂಪನಿಗಳು ನಿರ್ಧರಿಸುವುದಕ್ಕೆ ಬಿಡುವುದಿಲ್ಲ ಎಂದು ಜನ ದೃಢ ನಿಶ್ಚಯ ಮಾಡಿದ್ದಾರೆ.

ಫ್ರಾನ್ಸ್ ನಂತಹ ಅಭಿವೃದ್ಧ ಬಂಡವಾಳಶಾಹಿ ದೇಶದ ರೈತರೇ ಜಾಗತೀಕರಣದ ವಿರುದ್ಧ ಇಷ್ಟು ರೊಚ್ಚಿಗೇಳಲು ಕಾರಣ - ಅಮೆರಿಕದ ದೈತ್ಯ ಕಂಪನಿಗಳು ಯುರೋಪಿನ ರೈತರ ಜೀವನಕ್ಕೆ ಒಡ್ಡುತ್ತಿರುವ ಬೆದರಿಕೆ. ಜಾಗತೀಕರಣದ ವಿರುದ್ಧ ಪ್ರತಿಭಟನೆ, ಪ್ರತಿರೋಧ ಜಾಗತೀಕರಣಗೊಳ್ಳುತ್ತಿರುವುದು ಶುಭ ಸೂಚನೆ.

ನೆರೆ ರಾಜ್ಯವಾದ ತಮಿಳುನಾಡಿನಲ್ಲಿ ವಿದ್ಯುತ್ ದರಗಳ ಪರಿಸ್ಥಿತಿ

ವಿದ್ಯುತ್ ದರಗಳನ್ನು ವಿಪರೀತವಾಗಿ ಏರಿಸಿ ಗ್ರಾಹಕರ ಆಕ್ರೋಶಕ್ಕೆ ಗುರಿಯಾಗಿರುವ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹಾಗೂ ನಾಯುಡುರವರ ಹಾದಿ ನಮಗೆ ಆದರ್ಶವೆಂದು ವಿದ್ಯುತ್ ದರಗಳನ್ನು ಏರಿಸಲು ರಾಜ್ಯದ ಮುಖ್ಯಮಂತ್ರಿಗಳು ಹೊರಟಿರುವ ನೆರೆಯ ತಮಿಳುನಾಡನ್ನು ನೋಡಿ ಕಣ್ಣು ತೆರೆಯಬೇಕು, ವಿದ್ಯುತ್ ಉತ್ಪಾದನೆ, ವಿನಿಯೋಗ ಇತ್ಯಾದಿ ಅಂಶಗಳಲ್ಲಿ ನಮ್ಮ ರಾಜ್ಯಗಳಿಗೆ ತೀರ ಹತ್ತಿರವಾಗಿದೆ ಬೇರೆ ರಾಜ್ಯಗಳಿಗಿಂತ ನಮ್ಮ ರಾಜ್ಯಗಳಲ್ಲಿ ವಿದ್ಯುತ್ ದರಗಳು ಕಡಿಮೆಯಿವೆ ಎಂದು ಕುರುಡಾಗಿ ವಾದ ಮಾಡುವ ಈ ಸರ್ಕಾರಗಳು ಈ ಜನವರಿ ತಿಂಗಳಿನಿಂದ ತಮಿಳುನಾಡಿನಲ್ಲಿ ಜಾರಿಗೆ ಬಂದಿರುವ ವಿದ್ಯುತ್ ದರಗಳನ್ನು ನೋಡಿಯಾದರೂ ಇವರುಗಳು ಏರಿಸಿರುವ ಮತ್ತು ಏರಿಸಲು ಉದ್ದೇಶಿಸಿರುವ ವಿದ್ಯುತ್ ದರಗಳನ್ನು ವಾಪಸ್ಸು ಪಡೆದರೆ ಜನ ಸಂತೋಷಪಡುತ್ತಾರೆ. ತಮಿಳುನಾಡಿನಲ್ಲಿ + 50 ಯೂನಿಟ್ ಒಳಗೆ ವಿದ್ಯುತ್ ಉಪಯೋಗಿಸುವವರ ದರಗಳನ್ನು 1994 ರ ನಂತರ ಏರಿಸಿಲ್ಲ. ಇದರಂತೆ 25 ಯೂನಿಟ್‌ಗೆ 0.75 ಪೈಸೆ, 26-50 ಯೂನಿಟ್‌ವರಿಗೆ 085 ಪೈಸೆ.

ತಿಂಗಳಿಗೆ 25 ಯೂನಿಟ್‌ವರಿಗೂ 0.85 ಪೈಸೆ

ಯೂನಿಟ್ 26-50 = 0.85
ಯೂನಿಟ್ 51-100 = 1.50
ಯೂನಿಟ್ 101-300= 2.20
301 - ಅದರ ಮೇಲೆ 3.05

1994 ನಂತರ ಈ ವರ್ಷದ ಜನವರಿಯಲ್ಲಿ 10 ಪೈಸೆಯಿಂದ 30 ಪೈಸೆವರೆಗೂ ದರಗಳನ್ನು ಏರಿಸಿದ್ದಾರೆ.

ಗುಡಿಸಲು ವಾಸಿಗಳಿಗೆ ಹಾಗು ಕೃಷಿಗೆ ಉಚಿತ ವಿದ್ಯುತ್

ವಿಶೇಷವೆಂದರೆ ಮನೆಗೊಂದು ದೀಪ ಉಪಯೋಗಿಸುವ 14,80,000 ಗುಡಿಸಲು ವಾಸಿಗಳಿಗೆ ವಿದ್ಯುತ್ ಸಂಪೂರ್ಣ ಉಚಿತ. ಸರ್ಕಾರ ಉಚಿತವಾಗಿ ವಿದ್ಯುತ್ತನ್ನು ನೀಡುತ್ತಿದೆ.

ತಮಿಳುನಾಡಿನಲ್ಲಿ 1999 ಮಾರ್ಚ್‌ಗೆ 16,43,000 ಪಂಪ್‌ಸೆಟ್‌ಗಳಿವೆ. ಇವುಗಳಿಗೆ ವಿದ್ಯುತ್ ದರವಿಲ್ಲ. 1991 ರಿಂದ ಉಚಿತವಾಗಿಯೇ ವಿದ್ಯುತ್ತನ್ನು ನೀಡಲಾಗುತ್ತಿದೆ. ಒಟ್ಟು ವಿದ್ಯುತ್‌ನಲ್ಲಿ ಶೇ 27 ಅಂದರೆ 7556 ದಶಲಕ್ಷ ಯೂನಿಟ್‌ಗಳನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ ಎಂದು ತಮಿಳುನಾಡು ರಾಜ್ಯ ವಿದ್ಯುತ್ ಮಂಡಳಿ ತನ್ನ ವಾರ್ಷಿಕ ವರದಿಯಲ್ಲಿ ಪ್ರಕಟಿಸಿದೆ. ವಿವಿಧ ಸಾಮರ್ಥ್ಯವುಳ್ಳ ಪಂಪ್ ಸೆಟ್‌ಗಳ ಆಶ್ರಯಗಳ 62 ಲಕ್ಷ ಎಕರೆ ಭೂಮಿ ಸಾಗುವಳಿ ನಡೆಯುತ್ತಿದೆಯೆಂದು ಸರ್ಕಾರ ಹೇಳುತ್ತಿದೆ.

ಕೆಟಗರಿ	ಪಂಪ್‌ಸೆಟ್‌ಗಳ ಸಂಖ್ಯೆ
3 ಹೆಚ್.ಪಿ.	5,70,000
5 ಹೆಚ್.ಪಿ.	8,40,000
7.5 ಹೆಚ್.ಪಿ.	1,69,000
10 ಹೆಚ್.ಪಿ.	50,000
10 ಹೆಚ್.ಪಿ. ಮೇಲ್ಪಟ್ಟು	15,000

ಆ ರಾಜ್ಯದಲ್ಲಿ ಪ್ರತಿ ವರ್ಷ 40,000 ಹೊಸ ಸಂಪರ್ಕಗಳನ್ನು ನೀಡುತ್ತಿದ್ದಾರೆ. ಆದರೂ ಇನ್ನು ಐದು ಲಕ್ಷ ಅರ್ಜಿಗಳು ವಿಲೇವಾರಿ ಮಾಡಲಾಗಿಲ್ಲ. ಆಂಧ್ರ ಪ್ರದೇಶದ ಸರ್ಕಾರ ಕಳೆದ ವರ್ಷ 6,500 ಸಂಪರ್ಕಗಳನ್ನು ಮಾತ್ರ ನೀಡಿದೆ.

ತಮಿಳುನಾಡಿನಲ್ಲಿ ಕೃಷಿ ಕ್ಷೇತ್ರಕ್ಕೆ ಪ್ರತ್ಯೇಕವಾಗಿ ವಿದ್ಯುತ್ ಕಡಿತವಿಲ್ಲ. ಭತ್ತ, ಕಬ್ಬು ಸೇರಿ ಎಲ್ಲಾ ರೀತಿಯ ಬೆಳೆಗಳನ್ನು ಬೆಳೆಯುತ್ತಾರೆ.

ಪಂಚಾಯತಿ, ನಗರಸಭೆಯ ಬೀದಿ ದೀಪಗಳು, ನೀರು ಸರಬರಾಜುವಿನ ವಿದ್ಯುತ್ ದರಗಳನ್ನು ಏರಿಸಿಲ್ಲ. ಹಿಂದಿನಂತೆ ಯೂನಿಟ್‌ಗೆ 1.60 ಪೈಸೆ, 1.75 ಪೈಸೆಗಳಷ್ಟು ಇದೆ.

ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆ, ಗ್ರಂಥಾಲಯ, ಹೋಟೆಲ್, ಸಿನಿಮಾ ಮಂದಿರಗಳು, ದೇವಾಲಯಗಳಿಗೆ ಚೆನ್ನೈ ನಗರದಲ್ಲಿ 3.10 ಪೈಸೆಗಳು, ಇತರೆ ಕಡೆ ರೂ. 3 ಮಾತ್ರ. ಹಳೇ ದರಗಳ ಮೇಲೆ 25 ಪೈಸೆಗಳಷ್ಟು ಏರಿಸಲಾಗಿದೆ. ಗೃಹ ಕೈಗಾರಿಕೆಗಳಿಗೆ 500 ಯೂನಿಟ್‌ಗಳವರೆಗೂ 140 ಪೈಸೆ ಇದ್ದರೆ, ಇದರ ಮೇಲಿನ ವಿದ್ಯುತ್‌ಗೆ 225 ರಿಂದ 250 ಪೈಸೆ ವರೆವಿಗೂ ವಿವಿಧ ಹಂತಗಳಿವೆ. ಫ್ಲೋರ್ ಮಿಲ್ಸ್‌ಗೆ 320 ರಿಂದ 390 ಪೈಸೆ ವರೆವಿಗೂ ದರಗಳನ್ನು ನಿಗದಿ ಮಾಡಿದ್ದಾರೆ. ಚೆನ್ನೈ ನಗರದಲ್ಲಿ 10 ಪೈಸೆ ಹೆಚ್ಚು.

ಹೈ-ಟೆನ್ಷನ್ ವಿದ್ಯುತ್ ಬಳಕೆ ಮಾಡುವ ಕೈಗಾರಿಕೆ, ವಾಣಿಜ್ಯ, ವಿದ್ಯೆ, ವೈದ್ಯಕೀಯ ಇತ್ಯಾದಿ ಸಂಸ್ಥೆಗಳಿಗೆ 350 ರಿಂದ 390 ಪೈಸೆಗಳವರೆಗೂ ದರಗಳನ್ನು ನಿಗದಿ ಮಾಡಿದ್ದಾರೆ. ಹೆಚ್ಚಳ 20 ರಿಂದ 40 ಪೈಸೆವರೆಗೂ ಇದೆ.

ಹೀಗೆ ಉತ್ತಮ ರೀತಿಯಲ್ಲಿ ವಿದ್ಯುತ್ ಸರಬರಾಜು ಮಾಡುತ್ತಿರುವ ಆ ರಾಜ್ಯ ವಿದ್ಯುತ್ ಮಂಡಳಿಗೆ 5530 ಕೋಟಿಗಳ ಆದಾಯ ಬರುತ್ತಿದೆ. ನಮ್ಮ ರಾಜ್ಯಗಳಲ್ಲಿ ಬಂದಂತೆ ಭಾರೀ ಪ್ರಮಾಣದ ನಷ್ಟಬರುತ್ತಿಲ್ಲ. ಜೊತೆಗೆ ಸರ್ಕಾರ ನೀಡುತ್ತಿರುವ ಸಹಾಯ ಧನವು ನಾಮಮಾತ್ರ 96-97 ರಲ್ಲಿ 586 ಕೋಟಿಗಳಿದ್ದ ಸಹಾಯಧನವನ್ನು 98-99 ಕ್ಕೆ 250 ಕೋಟಿಗಳಿಗೆ ಕಡಿತ ಮಾಡಿದ್ದಾರೆ. ಈ ಕಾರಣದಿಂದಲೇ ಮಂಡಳಿಗೆ ಪ್ರಥಮ ಬಾರಿಗೆ 514 ಕೋಟಿ ನಷ್ಟ ಬಂದಿದೆ.

ಸರಬರಾಜು, ಹಂಚಿಕೆಯ ನಷ್ಟವನ್ನು ಕಡಿಮೆ ಮಾಡುವುದು, ಬಿಲ್‌ಗಳನ್ನು ಸಕ್ರಮವಾಗಿ ಸಂಗ್ರಹ ಮಾಡುವುದು, ಅಕ್ರಮವಾಗಿ ವಿದ್ಯುತ್ ಬಳಕೆಯನ್ನು ತಡೆಯುವುದರಲ್ಲಿ ತಮಿಳುನಾಡು ವಿದ್ಯುತ್ ಮಂಡಳಿ ಅನುಸರಿಸುತ್ತಿರುವ ಪದ್ಧತಿಗಳಿಂದ. ಸರಬರಾಜು ಮತ್ತು ಹಂಚಿಕೆಯ ನಷ್ಟ ಶೇ 17 ರಷ್ಟು ಮಾತ್ರವಿದೆ. ಬಾಕಿಗಳು ಆಂಧ್ರದಲ್ಲಿ 1200 ಕೋಟಿಗಳಿದ್ದರೆ ತಮಿಳುನಾಡಿನಲ್ಲಿ 460 ಕೋಟಿಗಳು ಮಾತ್ರ. ಟ್ರಾನ್ಸ್‌ಫಾರ್ಮರ್ಸ್‌ಗಳ ವೈಫಲ್ಯ ಆಂಧ್ರದಲ್ಲಿ ಶೇ 25 ರಷ್ಟು ಇದ್ದರೆ ತಮಿಳುನಾಡಿನಲ್ಲಿ ಅದು ಶೇ 10 ರಷ್ಟು ಮಾತ್ರ. ಇದರಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ ತಮಿಳುನಾಡು ವಿದ್ಯುತ್ ಮಂಡಳಿ, ಆಂಧ್ರ, ಕರ್ನಾಟಕಗಳಿಗಿಂತ ಉತ್ತಮವಾಗಿ ಕೆಲಸ ಮಾಡುತ್ತಿದೆ ಎಂಬುದು. ಈಕಾರಣದಿಂದಲೇ ವಿದ್ಯುತ್ ದರಗಳು ಸಹ ಕಡಿಮೆ ಇವೆ.

ಆಂಧ್ರ ಪ್ರದೇಶದಲ್ಲಿ ವಿಶ್ವಬ್ಯಾಂಕ್ ಪ್ರೇರಿತ ವಿದ್ಯುತ್ ಸುಧಾರಣೆಗಳಿಂದ ವಿದ್ಯುತ್ ಸಂಸ್ಥೆಗಳ ಅಸಮರ್ಥತೆ ಇನ್ನಷ್ಟು ಹೆಚ್ಚಾಗಿದೆ. ಇದನ್ನು ಮುಚ್ಚಿಡಲು ದರಗಳನ್ನು ಏರಿಸಲಾಗಿದೆ. ಈಗ ವಿದ್ಯುತ್ ಸೋರಿಕೆಯ ಬಗ್ಗೆ ಮಾತನಾಡುತ್ತಿದ್ದಾರೆ. ಸೋರಿಕೆಯನ್ನು ನಿಲ್ಲಿಸಲು ಸಾಧ್ಯವಾದರೆ ದರಗಳನ್ನು ಏರಿಸುವ ಅಗತ್ಯ ಇರುವುದಿಲ್ಲ. ಆದರೆ ಖಾಸಗಿ ವಿದ್ಯುತ್ ವಿತರಣೆದಾರರಿಗೆ ಎರಡು ರೀತಿಯಲ್ಲಿ ಲಾಭ ಮಾಡಿಕೊಡಲು ವಿದ್ಯುತ್ ದರಗಳನ್ನು ಏರಿಸಿ, ಮತ್ತೊಂದು ಕಡೆ ಸೋರಿಕೆಯನ್ನು ತಡೆಯಲು ಕ್ರಮಗಳನ್ನು ಕೈಗೊಳ್ಳುತ್ತಿದೆ. ಇದರಿಂದ ಗ್ರಾಹಕನು ಭಾರಿ ನಷ್ಟಕ್ಕೆ ಗುರಿಯಾಗುತ್ತಾನೆ.

- ವಿ. ಶ್ರೀನಿವಾಸರಾವ್

ಎಲಿಯನ್ ಕ್ಯೂಬಾಕ್ಕೆ ವಾಪಸು



ತಂದೆ ಜೊತೆ ಎಲಿನ್

ಏಳು ತಿಂಗಳ ಕಾನೂನು, ರಾಜಕೀಯ ಹೋರಾಟದ ನಂತರ ಕ್ಯೂಬಾದ ಬಾಲಕ ಎಲಿಯನ್ ಕ್ಯೂಬಾಕ್ಕೆ ವಾಪಸಾಗಿದ್ದಾರೆ. ತಂದೆಯ ಜತೆ ಅಮೆರಿಕಾದಿಂದ ವಾಪಸಾದ ಎಲಿಯನ್‌ಗೆ ಕ್ಯೂಬನ್ನರು ಭಾರೀ ಸ್ವಾಗತ ನೀಡಿದ್ದಾದರೆ. ಎಲಿಯನ್ ಮರು ಸ್ವಾಗತಕ್ಕೆ ನಡೆದ ಮೆರವಣಿಗೆಯಲ್ಲಿ ಮೂರು ಲಕ್ಷ ಜನ ಭಾಗವಹಿಸಿದ್ದರು. 40 ವರ್ಷಗಳ ಕ್ರಾಂತಿಯಾದಾಗಿನ ರ್‍ಯಾಲಿ ಬಿಟ್ಟರೆ ಇದು ಅತಿದೊಡ್ಡ ಮೆರವಣಿಗೆಯಾಗಿತ್ತು. ಕಳೆದ 7 ತಿಂಗಳಲ್ಲಿ ನೂರಕ್ಕೆ ಹೆಚ್ಚು ಸಣ್ಣ ಮೆರವಣಿಗೆಗಳು ನಡೆದಿತ್ತು.

ಅಮೆರಿಕ ಆಮಿಷ, ಒತ್ತಡ, ಬೆದರಿಕೆಗಳಿಗೆ ಹೆದರದೆ ಏಕಾಂಗಿಯಾಗಿ ತನ್ನ ಮಗನನ್ನು ವಾಪಸು ತಾಯ್ನಾಡಿಗೆ ಕರೆ ತರಲು ಹೋರಾಡಿದ ಎಲಿಯನ್ ತಂದೆಗೆ ಕ್ಯೂಬಾದ ಅತ್ಯಂತ ಉನ್ನತ ನಾಗರಿಕ ಪದವಿಯನ್ನು ಕೊಟ್ಟು ಗೌರವಿಸಲಾಗಿದೆ. ಆತ ದೇಶದ ಘನತೆ, ಗೌರವ, ಸ್ವಾತಂತ್ರ್ಯವನ್ನು ಅತ್ಯಂತ ಕಠಿಣ ಸಮಯದಲ್ಲಿ ಎತ್ತಿ ಹಿಡಿದಿದ್ದಾರೆ ಎಂದು ಈ ಪದವಿಯನ್ನು ಸ್ವತಃ ನೀಡಿದ ಕ್ಯೂಬಾದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋ ಹೇಳಿದರು. ಆ ಸಂದರ್ಭದಲ್ಲಿ ಮಾತನಾಡುತ್ತಾ "ನಮ್ಮನ್ನು ಮಣಿಸುವ, ಉಸಿರುಗಟ್ಟಿಸುವಂತೆ ಮಾಡುವ ಎಲ್ಲಾ ಆಕ್ರಮಣಕಾರಿ ಪ್ರಯತ್ನಗಳನ್ನು ನಾವು ಸೋಲಿಸುತ್ತೇವೆ. ಎಲಿಯನ್ ವಾಪಸಾತಿಯ ಈ ವಿಜಯವನ್ನು ಅಮೆರಿಕದ ವಿರುದ್ಧ ಹೋರಾಟವನ್ನು ಅಮೆರಿಕ ಕ್ಯೂಬನ್ನರನ್ನು ತನ್ನ ದೇಶಕ್ಕೆ ಆಮಿಷ ಕೊಟ್ಟು ಸೆಳೆಯು ನೀತಿ ಮತ್ತು ವ್ಯಾಪಾರಿ ನಿರ್ಬಂಧದ ವಿರುದ್ಧ ಹೊಸ ಹಂತಕ್ಕೆ ಒಯ್ಯುತ್ತೇವೆ" ಎಂದು ಹೇಳಿದ್ದಾರೆ.



ಎಲಿನ್‌ಗೆ ಸ್ವಾಗತಕ್ಕೆ ಕಾದ ಜನತೆ



ಕ್ಯಾಸ್ಟ್ರೋರವರಿಂದ ಗೌರವ ಪಡೆದ ಎಲಿನ್ ತಂದೆ



ಎಲಿನ್‌ಗೆ ಸ್ವಾಗತ ಕೋರುವ ಬ್ಯಾನರ್

ಕೊರಿಯಾ ಶೃಂಗಸಭೆ-ಶಾಂತಿಯುತ ಪುನರೈಕ್ಯದತ್ತ ದೊಡ್ಡ ಹೆಜ್ಜೆ

ಜೂನ್‌ನಲ್ಲಿ ಚಾರಿತ್ರಿಕ ಘಟನೆಯೊಂದು ಸಂಭವಿಸಿತು. 50 ವರ್ಷಗಳ ಕಾಲ ಸಾಮ್ರಾಜ್ಯಶಾಹಿ ಸಂಚಿನಿಂದ ವಿಭಜಿಸಲ್ಪಟ್ಟಿದ್ದ ಕೊರಿಯಾ ಶಾಂತಿಯುತ ಪುನರೈಕ್ಯದತ್ತ ದೊಡ್ಡ ಹೆಜ್ಜೆ ಇಟ್ಟಿತು. ದಕ್ಷಿಣ ಕೊರಿಯಾದ ಅಧ್ಯಕ್ಷರು, ಉತ್ತರಕೊರಿಯಾಗೆ ಭೇಟಿ ನೀಡಿದರು. ಹತ್ತು ಅಂಶದ ಚಾರಿತ್ರಿಕ ಒಪ್ಪಂದಕ್ಕೆ ಸಹಿ ಹಾಕಿದರು.

ಉತ್ತರ ಕೊರಿಯಾದ ಅದ್ಯಕ್ಷ ಕಿಮ್-ಉಲ್-ಸುಂಗರ 'ಒಂದು ದೇಶ-ಎರಡು ವ್ಯವಸ್ಥೆ' ನೀತಿ ಮೇಲೆ ಆಧಾರಿತ, ಎರಡೂ ಕೊರಿಯಾಗಳ ಜನರ ಆಶೋತ್ತರ ಈಡೇರಿಸುವ ಐಕ್ಯ ಕೊರಿಯದತ್ತ ಪಯಣ ಆರಂಭವಾಗಿದೆ. ಅಮೆರಿಕ ಎಷ್ಟೆಲ್ಲ ಪ್ರಯತ್ನಿಸಿದರೂ ಇದನ್ನು ತಡೆಯಲಾಗಲಿಲ್ಲ. ಉತ್ತರ ಕೊರಿಯಾ 'ಕೇಡಿ ದೇಶ' ಎಂಬ ಅಪಪ್ರಚಾರದೊಂದಿಗೆ, ಅದರ ಮೇಲೆ ಅಮೆರಿಕನ್ ಆಕ್ರಾಮಕ ಧೋರಣೆ ಇದ್ದಾಗ್ಯೂ ಈ ಸಕಾರಾತ್ಮಕ ಬೆಳವಣಿಗೆಯನ್ನು ತಡೆಯಲಾಗಲಿಲ್ಲ ಎಂಬುದು ಮಹತ್ವದ ಬೆಳವಣಿಗೆ.

ಬರ್ಲಿನ್ ಗೋಡೆ ಇದ್ದಿದ್ದು, ಬಿದ್ದಿದ್ದರ ಬಗ್ಗೆ ನೀವು ಭಾರೀ ಕೇಳಿರಬಹುದು. ಜರ್ಮನಿ ಇಬ್ಭಾಗವಾದದ್ದು, ಪುನರೈಕ್ಯವಾದದ್ದರ ಬಗ್ಗೆ ಖಂಡಿತ ಕೇಳಿದ್ದಿರಾ. ಆದರೆ 50 ವರ್ಷಗಳ ಕಾಲ ಯಾವುದೇ ಭೌತಿಕ ಗೋಡೆ ಇಲ್ಲದೆ ಒಂದು ದೇಶವನ್ನು ವಿಭಜಿಸಿದ, ಇನ್ನೂ ಮುಂದುವರೆಯುತ್ತಿರುವ ಬಗ್ಗೆ ಖಂಡಿತ ಕೇಳಿಲ್ಲ. ಯಾಕೆಂದರೆ ಬರ್ಲಿನ್ ಗೋಡೆ, ಹಾಕುವುದರಲ್ಲಿ ಅಮೆರಿಕದ ಪಾತ್ರ ಕಾಲುಭಾಗ. (ಅದನ್ನು ಮರೆಮಾಚಲಾಗುತ್ತದೆ). ಆದರೆ ಕೊರಿಯಾದ 38ನೇ ಸಮಾನಾಂತರರೇಖೆಯ ಗೋಡೆ ಕಟ್ಟುವುದರಲ್ಲಿ ಅಮೆರಿಕದ ಪಾತ್ರ ಶೇಕಡಾ ನೂರು. ಬೇರೆ ಯಾರ ಮೇಲೆ ದೋಷಾರೋಪಣೆ ಮಾಡುವಂತಿಲ್ಲ. ಆದ್ದರಿಂದ ದಕ್ಷಿಣ ಕೊರಿಯಾದ ಹತ್ತು ಲಕ್ಷ ಜನ ತಮ್ಮ ಉತ್ತರ ಕೊರಿಯಾದಲ್ಲಿ ಇರುವ ಸಂಬಂಧಿಗಳನ್ನು ನೋಡಲು, ಮಾತನಾಡಲೂ ಆಗುವುದಿಲ್ಲ. ಅಂತಹ ಸ್ಥಿತಿ ನಿರ್ಮಿಸಿದ್ದು ಅಮೆರಿಕ ಕೊರಿಯಾದ ಮೇಲೆ ಹೊರಿಸಿದ ನಾಲ್ಕು ವರ್ಷ ನಡೆದ (1950 ರಿಂದ 1953 ರವರೆಗೆ) ಭೀಷಣ ಯುದ್ಧ ಮತ್ತು ಆಮೇಲಿನ ಕೊರಿಯಾ ವಿಭಜನೆ. ಆದ್ದರಿಂದಲೇ ಸುದ್ದಿ ಮಾಧ್ಯಮಗಳಲ್ಲಿ ಕೊರಿಯಾದ 38ನೇ ಸಮಾನಾಂತರ ರೇಖೆ ಎಂಬ ಲಕ್ಷ್ಮಣ ರೇಖೆ ಸುದ್ದಿಯಾಗುವುದಿಲ್ಲ.

ಜಗತ್ತಿನಲ್ಲೇ ಅತ್ಯಂತ ಭಯಾನಕವಾಗಿ ಶಸ್ತ್ರಸಜ್ಜಿತವಾದ ಈ ಕೃತಕ ಗಡಿ ಮಾಸುವ ಕಾಲ ಬಂದಿದೆ. ಉತ್ತರಕೊರಿಯಾದ ರಾಜಧಾನಿ ಪ್ಯೊಂಗ್‌ಯಾಂಗ್‌ನಲ್ಲಿ ಜೂನ್ ಎರಡನೇ ವಾರದಲ್ಲಿ ನಡೆದ ಮೂರು ದಿನಗಳ ಶೃಂಗಸಭೆಯಲ್ಲಿ ಸಹಿ ಹಾಕಲಾದ ಚಾರಿತ್ರಿಕ ಒಪ್ಪಂದ ಎರಡೂ ಕೊರಿಯಾಗಳ ಜನಸಾಮಾನ್ಯರಲ್ಲಿ ಈ ಆಶಾ ಭಾವನೆ ಹುಟ್ಟಿಸಿವೆ. ಎರಡು ಕೊರಿಯಾಗಳ ನಡುವೆ 'ಬರ್ಲಿನ್‌ಗೋಡೆ'ಯಾಗಿ ನಿಂತಿದ್ದ 37 ಸಾವಿರ ಅಮೆರಿಕದ ಸೈನ್ಯ ಸಹ ಈ ಆಶಾಭಾವನೆಯನ್ನು ಹೊಸಕುವಲ್ಲಿ (ಈವರೆಗಿನಂತೆ) ಶಕ್ತವಾಗಿಲ್ಲ.

ಇಬ್ಬರೂ ಕಿಮ್‌ಗಳ ಭೇಟಿ

ಉತ್ತರ ಕೊರಿಯಾದ ಅಧ್ಯಕ್ಷ ಕಿಮ್ ಜೊಂಗ್ II ಮತ್ತು ದಕ್ಷಿಣ ಕೊರಿಯಾದ ಅಧ್ಯಕ್ಷ ಕಿಮ್ ದಾಯ್ ಜುಂಗ್ (ಇಬ್ಬರೂ ಕಿಮ್) ಭೇಟಿಯ ಪರಿಣಾಮವಾದ ಚಾರಿತ್ರಿಕ ಒಪ್ಪಂದ-ಭದ್ರ, ಪ್ರಜಾಸತ್ತಾತ್ಮಕ ಶಾಂತಿಯುತ ಕೊರಿಯಾ ಪರ್ಯಾಯ ದ್ವೀಪ ನಿರ್ಮಿಸುವ ಸಾಧ್ಯತೆಯನ್ನು ತೆರೆದಿದೆ. ಇದು ಎರಡೂ ಕೊರಿಯಾಗಳ ಜನತೆಗೆ ಅತ್ಯಂತ ಭಾವನಾತ್ಮಕ ಕ್ಷಣವಾಗಿತ್ತು. ದಕ್ಷಿಣ ಕೊರಿಯಾದ ಅಧ್ಯಕ್ಷ ಕಿಮ್ ರಾಯಹ್ ಜುಂಗ್ ಉತ್ತರ ಕೊರಿಯಾದ ರಾಜಧಾನಿ ಪ್ಯೊಂಗ್‌ಯಾಂಗ್‌ನಲ್ಲಿ ಬಂದಿಳಿದಾಗ ಅವರನ್ನು ಸ್ವಾಗತಿಸಲು ಅಧ್ಯಕ್ಷೀಯ ಅರಮನೆಗೆ ಹೋಗುವ ಹಾದಿಯ ಎರಡೂ ಬದಿಗಳಲ್ಲಿ



ಉಭಯ ಕೊರಿಯಾ ದೇಶದ ಅಧ್ಯಕ್ಷರು

ಉತ್ಸಾಹದಿಂದ ಘೋಷಣೆ ಕೂಗುತ್ತಾ, ಧ್ವಜ ಹಾರಿಸುತ್ತಾ, ಕೊರಿಯಾದ ರಾಷ್ಟ್ರೀಯ ಉಡುಪಿನಲ್ಲಿ ಆರು ಲಕ್ಷ ಜನ ನೆರೆದಿದ್ದರು. ಎರಡೂ ಕೊರಿಯಾಗಳ ನಡುವೆ ಅಮೆರಿಕ ಕಟ್ಟಿದ ಗೋಡೆ ಮೀರಿ ಜನ ಸ್ನೇಹಹಸ್ತ ಚಾಚಿದ್ದಾರೆ. ಈ ಗೋಡೆ ಯಾವುದೇ ಸುದ್ದಿ ಮಾಧ್ಯಮಗಳ(ಸಾಮ್ರಾಜ್ಯಶಾಹಿ-ಪ) ಕಣ್ಣಿಗೆ ಈವರೆಗೆ ಬಿದ್ದಿಲ್ಲ-ಎರಡೂ ಕೊರಿಯಾಗಳ ನಡುವೆ ನೂರಾರು ವೈಲಿ ಹಬ್ಬಿದ್ದರೂ. ಯಾಕೆಂದರೆ ಇದನ್ನು ಅಮೆರಿಕ ಕಟ್ಟಿದ್ದು.

ಇಡೀ ಜಾಗತಿಕ ಮಾಧ್ಯಮಗಳ ಗಮನ ಸೆಳೆದ ಈ ಶೃಂಗಸಭೆ ಉತ್ತರ ಕೊರಿಯಾದ ಬಗ್ಗೆ ಸಾಮ್ರಾಜ್ಯಶಾಹಿಗಳ ಅಪ-ಪ್ರಚಾರವನ್ನು ಬುಡಮೇಲುಗೊಳಿಸಿತು. ರೌಡಿ ದೇಶ, ದಮನಕ್ಕೊಳಗಾದ ಜನ ಇರುವ ದೇಶ ಎಂದೆಲ್ಲಾ ಸಾಮ್ರಾಜ್ಯಶಾಹಿ ವಿಶೇಷಣಗಳು ಕರಗಿ ಹೋದವು. ಕೊರಿಯಾ ಗೋಡೆಯನ್ನು ಈ ಶೃಂಗಸಭೆ ಬೀಳಿಸಬಹುದು ಎಂಬ ಸತ್ಯವನ್ನು ಈ ಸಾಮ್ರಾಜ್ಯಶಾಹಿಗಳು ಮರೆಮಾಚಲಾಗದಿದ್ದರೂ, ಇದನ್ನು ಕಟ್ಟಿದ್ದು ಅಮೆರಿಕನ್ನರು ಎಂದು ಮರೆಮಾಚಿದರು.

ಶೃಂಗಸಭೆಯ ನಂತರ ಹೊರಡಿಸಲಾದ ಒಪ್ಪಂದ ಎರಡು ದೇಶಗಳ ಪುನರೈಕ್ಯತೆ ಸಾಧಿಸುವ, ಸದ್ಯದಲ್ಲೇ ಎರಡು ದೇಶಗಳ ಫೆಡರೇಷನ್ ರಚಿಸುವ ಸಂಬಧಿಗಳನ್ನು ಭೇಟಿ ಮಾಡಲು ಅನುವು ಮಾಡುವ, ಆರ್ಥಿಕ ಸಹಕಾರ, ಘನಸಂಬಂಧ ಮುಂದುವರೆಸುವ ಬಗ್ಗೆ ನಿರ್ದಿಷ್ಟ ನಿರ್ಣಯಗಳನ್ನು ಕೈಗೊಂಡಿದೆ. ಕಿಮ್ ಜೊಂಗ್ II (ಉತ್ತರ ಕೊರಿಯಾ)ರನ್ನು ಕಿಮ್ ರಾಯ ಜುಂಗ್(ದಕ್ಷಿಣಕೊರಿಯಾ) ಸಿಯೋಲ್ ಭೇಟಿ ಮಾಡಲು ಆಹ್ವಾನಿಸಿದ್ದು, ಅವರು ಅದಕ್ಕೆ ಒಪ್ಪಿಕೊಂಡಿದ್ದಾರೆ. ಈ ಒಪ್ಪಂದವನ್ನು ನೆರೆಯ ದೇಶಗಳಾದ ಜಪಾನ್ ಮತ್ತು ಚೀನಾ ಕಮ್ಯುನಿಸ್ಟ್ ಪಕ್ಷಗಳು ಸ್ವಾಗತಿಸಿವೆ.

ಒಪ್ಪಂದದ ಮುಖ್ಯಾಂಶಗಳು

1. ಕೊರಿಯಾಗಳ ಪುನರೈಕ್ಯತೆ ಪ್ರಶ್ನೆ ಪರಿಹರಿಸಲು ಪ್ರಯತ್ನ
2. ಪುನರೈಕ್ಯತೆ ಸಾಧಿಸುವತ್ತ ಫೆಡರೇಷನ್ ಅಥವಾ ಕಾನ್ಫಡರೇಷನ್ ಸಾಧಿಸುವ ಪ್ರಯತ್ನ
3. ಸಂಬಂಧಿಗಳ ಪರಸ್ಪರ ಭೇಟಿ, ಸಂಪರ್ಕಕ್ಕೆ ಪ್ರೋತ್ಸಾಹ, ವಿದೇಶಿ ಕೈದಿಗಳ ಬಿಡುಗಡೆ ಮುಂತಾದ ಮಾನವೀಯ ಸಮಸ್ಯೆಗಳಿಗೆ ಪರಿಹಾರ
5. ಈ ಅಂಶ ಜಾರಿಗೆ ಮುಂದುವರೆದ ಅಧಿಕಾರಿಗಳ ಮಾತುಕತೆ

ಚಾರಿತ್ರಿಕ ಒಪ್ಪಂದ ಹೇಗೆ ಸಾಧ್ಯವಾಯಿತು?


ಇಂತಹ ಚಾರಿತ್ರಿಕ ಒಪ್ಪಂದ (50 ವರ್ಷಗಳ ನಂತರ) ಒಮ್ಮೆಂದೊಮ್ಮೆಗೆ ಹೇಗೆ ಸಾಧ್ಯವಾಯಿತು? ಇದು ಮ್ಯಾಜಿಕ್ಕೇ? ಅಲ್ಲ. ಕಳೆದ 50 ವರ್ಷಗಳಿಂದ 20 ಬಾರಿ ಪ್ರಮುಖ ಪ್ರಯತ್ನಗಳು ಕಾರಣವಾಗಿವೆ. ಈ ಕೆಳಗಿನ ಅಂಶಗಳು ಈ ಚಾರಿತ್ರಿಕ ಒಪ್ಪಂದಕ್ಕೆ ಕಾರಣವಾಗಿವೆ.

- ಕೃತಕವಾಗಿ ದೇಶವನ್ನು ಒಡೆದ ಅಮೆರಿಕದ ಸೈನ್ಯದ ಹಾಜರಾತಿ, ಅದು ಒಡ್ಡಿರುವ ಆತಂಕಗಳು, ಅದರ ಮೂಗು ತೂರಿಸುವಿಕೆ ಇದ್ದಾಗ್ಯೂ ಪುನಃ ಒಂದಾಗಬೇಕೆಂಬ ಎರಡೂ ದೇಶಗಳ ಸಾಮಾನ್ಯ ಜನರ ಹಂಬಲ
- 'ಒಂದು ದೇಶ ಎರಡು ವ್ಯವಸ್ಥೆ' ಆಧಾರದ ಮೇಲೆ ಶಾಂತಿಯುತ ಪುನರೈಕ್ಯ ಆಗಬೇಕು-ಸಾಧ್ಯ ಎಂದು '90 ರ ದಶಕದ ಆರಂಭದಲ್ಲೇ ಪ್ರಸ್ತಾಪ ಮಾಡಿದ ಉತ್ತರ ಕೊರಿಯಾದ ಹಿರಿಯ ನಾಯಕ ಕಿಮ್-ಉಲ್-ಜೊಂಗ್‌ರ ದೂರದರ್ಶಿ ನಾಯಕತ್ವ.
- 1994 ರಲ್ಲಿ 'ಶಾಂತಿಯುತ ಪುನರೈಕ್ಯ'ಕ್ಕಾಗಿ ಶೃಂಗಸಭೆ ಪ್ರಸ್ತಾಪಿಸಿದ ಕಿಮ್-ಉಲ್-ಜಂಗ್ ಮರಣ ನಂತರ ಆ ನೀತಿ ಮುಂದುವರೆಸಿ, ಬೆಳೆಸಿದ ಕಿಮ್-ಜೊಂಗ್ II ಮುತ್ಸದಿತನ.
- ಉತ್ತರ ಕೊರಿಯಾದ ಜತೆ ಯಾವುದೇ ರೀತಿ ಸಂಪರ್ಕ ನಿಷೇಧಿಸುವ ಕರಾಳ ಕಾನೂನುಗಳನ್ನು ಮುರಿಯುತ್ತಾ ಬಂದ, ಅವರ ವಿರುದ್ಧ ಚಳುವಳಿ ಹೂಡುತ್ತಾ ಪ್ರಬಲ ಪ್ರತಿರೋಧ ನಿರ್ಮಿಸಿದ ದಕ್ಷಿಣ ಕೊರಿಯಾದ ವಿದ್ಯಾರ್ಥಿ ಮತ್ತು ಕಾರ್ಮಿಕ ಚಳುವಳಿ
- ಅಮೆರಿಕದ ಬಾಲಬಡುಕರಾದ ದಕ್ಷಿಣ ಕೊರಿಯಾದ ಮಿಲಿಟರಿ ಸರ್ವಾಧಿಕಾರಿಗಳ ವಿರುದ್ಧ ಸತತವಾಗಿ ಹೋರಾಡಿದ(14ವರ್ಷಗಳ ಕಾಲ ಸೆರೆಮನೆ ವಾಸ ಮತ್ತು ಗೃಹಬಂಧನ, ಮರಣದಂಡನೆ, ಕೊಲೆ ಪ್ರಯತ್ನ ಎದುರಿಸಿದ) ಕಿಮ್-ರಾಯ್-ಜುಂಗ್ ದ.ಕೊರಿಯಾದ ಅಧ್ಯಕ್ಷರಾದದ್ದು.
- ಎರಡು ಕೊರಿಯಾದ ನಡುವೆ ವಿಕಾಸವಾದ ಆರ್ಥಿಕ ಸಹಕಾರ(ಇದರಿಂದ ದಕ್ಷಿಣದ ಕೈಗಾರಿಕೋದ್ಯಮಿಗಳು ಈಗ ಪುನರೈಕ್ಯಕ್ಕೆ ಪರವಾಗಿದ್ದಾರೆ)

ಇತಿಹಾಸದ ಪುಟಗಳಿಂದ

ಅಧ್ಯಯನದ ಕೋಣೆ

ನಾನು ಮೈಟ್‌ಲ್ಯಾಂಡ್ ಪಾರ್ಕ್ ರಸ್ತೆಯ ಅವರ ಅಧ್ಯಯನದ ಕೋಣೆಯಲ್ಲಿ ಮೊದಲಿಗೆ ಕಂಡದ್ದು ಈ ವಿಜ್ಞಾನಿಯನ್ನೇ ಹೊರತು ಬಳಲಿಕೆಯನ್ನರಿಯದ ಹಾಗೂ ಹೋಲಿಕೆಗೆ ಎಣೆಯಿಲ್ಲದ ಸಮಾಜವಾದಿ ಹೋರಾಟಗಾರನನ್ನಲ್ಲ. ಸಮಾಜವಾದಿ ಚಿಂತನೆಯ ಈ ಅಧ್ಯರ್ಯವಿನ ಅಭಿಪ್ರಾಯವನ್ನು ತಿಳಿದುಕೊಳ್ಳುವ ಸಲುವಾಗಿ ನಾಗರಿಕ ಜಗತ್ತಿನ ಎಲ್ಲ ಭಾಗಗಳಿಂದ 'ಪಕ್ಷದ ಗೆಳೆಯ'ರು ಬಂದು



ಸೇರುತ್ತಿದ್ದ ಕೇಂದ್ರವೇ ಆಗಿತ್ತು ಆ ಅಧ್ಯಯನ ಕೋಣೆ, ಮಾರ್ಕ್ಸ್ ಅವರ ಬೌದ್ಧಿಕ ಜೀವನದ ಅಂತರ್ಯವನ್ನು ಒಳಹೊಕ್ಕು ನೋಡುವ ಮುನ್ನ ಈ ಐತಿಹಾಸಿಕ ಕೋಣೆಯ ಪರಿಚಯವನ್ನು ಪಡೆದುಕೊಳ್ಳುವುದು ಅಗತ್ಯ.

ಆ ಕೋಣೆ ಮೊದಲ ಮಹಡಿಯಲ್ಲಿತ್ತು. ಉದ್ಯಾನವನದ ಕಡೆಗೆ ತೆರೆದುಕೊಂಡಿದ್ದ ವಿಶಾಲವಾದ ಕಿಟಕಿಯಿಂದ ನುಗ್ಗಿ ಬಂದ ಬೆಳಕು ಆ ಕೋಣೆಯಲ್ಲಿ ತುಂಬಿತುಳುಕುತ್ತಿತ್ತು. ಕಿಟಕಿಯ ಎದುರಿಗೆ ಹಾಗೂ ಬೆಂಕಿಯ ಗೂಡಿನ ಎರಡೂ ಕಡೆಗಳಲ್ಲಿ ಗೋಡೆಗೆ ಒರಗಿದಂತೆ ಪುಸ್ತಕದ ಕಪಾಟುಗಳ ಸಾಲೇ ಇದ್ದಿತು. ಅವುಗಳ ಒಳಗೆ ಪುಸ್ತಕಗಳನ್ನೂ, ಹಸ್ತಪತ್ರಿಕೆಗಳನ್ನೂ ಓರಣವಾಗಿ ಅಡುಕಲಾಗಿತ್ತು. ಬೆಂಕಿಯಗೂಡಿನ ಎದುರಿಗೆ ಕಿಟಕಿಯ ಒಂದು ಬದಿಯಲ್ಲಿ ಎರಡು ಮೇಜುಗಳಿದ್ದು, ಅವುಗಳ ಮೇಲೆ ಲೇಖನಗಳು, ಪುಸ್ತಕಗಳು ಮತ್ತು ವರ್ತಮಾನ ಪತ್ರಿಕೆಗಳು ರಾಶಿರಾಶಿಯಾಗಿ ಬಿದ್ದಿದ್ದುವು; ಕೋಣೆಯ ಮಧ್ಯಭಾಗದಲ್ಲಿ, ಚೆನ್ನಾಗಿ ಬೆಳಕು ಬೀಳುವ ಎಡೆಯಲ್ಲಿ, ಒಂದು ಸಣ್ಣ, ಸರಳ ಇಳಿ-ಮೇಜು(ಮೂರಡಿ ಎತ್ತರ ಹಾಗೂ ಎರಡಡಿ ಅಗಲ) ಹಾಗೂ ಮರದ ಒಂದು ತೋಳು ಕುರ್ಚಿ ಇದ್ದುವು; ಕಿಟಕಿಗೆ ಎದುರಾಗಿ ತೋಳು ಕುರ್ಚಿ ಮತ್ತು ಪುಸ್ತಕದ ಕಪಾಟುಗಳ ನಡುವೆ ಚರ್ಮದಿಂದ ಮಾಡಿದ ಒಂದು ಸೋಫಾ ಇತ್ತು. ವಿಶ್ರಾಂತಿ ಪಡೆಯುವ ಸಲುವಾಗಿ ಆಗಾಗ್ಗೆ ಮಾರ್ಕ್ಸ್ ಇದರ ಮೇಲೆ ಮಲಗಿರುತ್ತಿದ್ದರು. ಬೆಂಕಿಗೂಡಿನ ಆವರಣದ ಮೇಲೆ ಮತ್ತಷ್ಟು ಪುಸ್ತಕಗಳು,

ಕಾರ್ಲ್ ಮಾರ್ಕ್ಸ್‌ರವರ ಓದು

ಕುವೆಂಪು, ಇಎಂಎಸ್ ನಂಬೂದರಿಪಾಡ್‌ರವರ ಓದಿನ ಪರಿಯನ್ನು ನೋಡಿದ ನೀವು ಅಧ್ಯಯನದ ಅಪಾರ ವ್ಯಾಪ್ತಿಗಾಗಿ ಪ್ರಸಿದ್ಧರಾದ ಮಾರ್ಕ್ಸ್‌ರವರ ಓದಿನ ಪರಿ ನೋಡಿ

ತಮ್ಮ ಕಾಗದಪತ್ರಗಳು ಮತ್ತು ಪುಸ್ತಕಗಳನ್ನು ವ್ಯವಸ್ಥಿತವಾಗಿ ಅಥವಾ ಅವ್ಯವಸ್ಥಿತವಾಗಿ ಇಡಲು ಅವರು ಯಾರಿಗೂ ಅವಕಾಶ ಕೊಡುತ್ತಿರಲಿಲ್ಲ. ಅವುಗಳ ಅವ್ಯವಸ್ಥಿತ ಕೇವಲ ತೋರ್ಕೆಯದಾಗಿರುತ್ತಿತ್ತು; ವಾಸ್ತವವಾಗಿ, ಪ್ರತಿಯೊಂದೂ ಅದರದರ ಸ್ಥಾನದಲ್ಲಿಯೇ ಇದ್ದು, ತಮಗೆ ಅಗತ್ಯವಾದ ಪುಸ್ತಕವನ್ನೊ ಟಿಪ್ಪಣಿ ಪುಸ್ತಕವನ್ನೊ ಅವರು ಸುಲಭವಾಗಿ ಎತ್ತಿಕೊಳ್ಳಲು ಸಾಧ್ಯವಾಗುವಂತೆ ಇರುತ್ತಿತ್ತು. ಸಂಭಾಷಣೆಗಳ ಸಂದರ್ಭದಲ್ಲಿಯೇ ಅವರು ಅನೇಕ ವೇಳೆ ತುಸು ಹೊತ್ತು ಮಾತು ನಿಲ್ಲಿಸಿ ತಾವು ಆಗತಾನೆ ಹೇಳಿದ ಉದ್ಧರಣ, ಚಿತ್ರ ಅಥವಾ ಅಂಕಿ ಸಂಖ್ಯೆಗಳನ್ನೊಳಗೊಂಡಿದ್ದ ಪುಸ್ತಕವನ್ನು ತೆರೆದು ತೋರುತ್ತಿದ್ದರು. ಅವರು ಮತ್ತು ಅವರ ಅಧ್ಯಯನದ ಕೋಣೆಯ ನಡುವೆ ಅಭೇದವೇರ್ಪಟ್ಟಿತ್ತು. ಅವರ ಕೈಕಾಲುಗಳಂತೆಯೇ ಅದರಲ್ಲಿದ್ದ ಪುಸ್ತಕಗಳೂ ಕಾಗದಪತ್ರಗಳೂ ಅವರ ನಿಯಂತ್ರಣದಲ್ಲಿರುತ್ತಿದ್ದುವು.

ಕಾದಂಬರಿ

ಆಗಿಂದಾಗ್ಗೆ ಅವರು ಸೋಫಾದ ಮೇಲೆ ಉರುಳಿಕೊಂಡು ಯಾವುದಾದರೂ ಒಂದು ಕಾದಂಬರಿಯನ್ನು ಓದುತ್ತಿದ್ದರು; ಕೆಲವೊಮ್ಮೆ ಏಕಕಾಲದಲ್ಲಿ, ಒಂದಾದ ಮೇಲೆ ಒಂದರಂತೆ, ಒಂದನ್ನು ಬಿಟ್ಟು ಇನ್ನೊಂದನ್ನು ಎತ್ತಿಕೊಂಡು, ಎರಡು ಮೂರು ಕಾದಂಬರಿಗಳನ್ನು ಓದಿಬಿಡುತ್ತಿದ್ದುದೂ ಉಂಟು. ಡಾರ್ವಿನ್ನನಂತೆ (ಜೀವ ವಿಕಾಸವಾದವನ್ನು ನಿರೂಪಿಸಿದ ಅಪ್ರತಿಮ ಜೀವ ವಿಜ್ಞಾನಿ) ಅವರೂ ಕಾದಂಬರಿಗಳನ್ನು ಹೆಚ್ಚಾಗಿ ಓದುತ್ತಿದ್ದರು. ಅವರ ಒಲವು ಹೆಚ್ಚಾಗಿದ್ದುದು ಹದಿನೆಂಟನೆಯ ಶತಮಾನದ ಕೃತಿಗಳತ್ತ- ಅದರಲ್ಲಿಯೂ ಫೀಲ್ಡಿಂಗ್‌ನ "ಟಾಮ್ ಜೋನ್ಸ್" ಕೃತಿಯತ್ತ. ಅವರಿಗೆ ಸ್ವಾರಸ್ಯಕರವಾಗಿ ತೋರಿದ ಮತ್ತಷ್ಟು ಆಧುನಿಕ ಕಾದಂಬರಿಕಾರರೆಂದರೆ ಪಾಲ್ ಡಿ ಕಾಕ್, ಚಾರ್ಲ್ಸ್ ಲಿವರ್, ಅಲೆಕ್ಸಾಂಡರ್ ಡ್ಯೂಮಾ ಸೀನಿಯರ್ ಮತ್ತು ವಾಲ್ಟರ್ ಸ್ಕಾಟ್. ಸ್ಕಾಟ್‌ನ "ಓಲ್ಡ್ ಮಾರ್ಟಾಲಿಟಿ"ಯನ್ನು ಅವರು ಆತನ ಅತ್ಯುತ್ತಮ ಕೃತಿಯೆಂದು ಭಾವಿಸಿದ್ದರು. ಸಾಹಸದ ಮತ್ತು ಹಾಸ್ಯದ ಕಥೆಗಳು ಅವರ ನಿರ್ದಿಷ್ಟ ಒಲವಿನ ವಿಷಯಗಳೇ ಆಗಿದ್ದವು.

ಸರ್ವಾಂಟಿಸ್ ಮತ್ತು ಬಾಲ್ಜಾಕ್ ಅವರನ್ನು ಅವರು ಇತರ ಎಲ್ಲ ಕಾದಂಬರಿಕಾರರಿಗಿಂತಲೂ ಮೇಲಿರಿಸಿದ್ದರು. "ಡಾನ್ ಕ್ವಿಕ್ಸೋಟ್" ನಲ್ಲಿ ಅವರು ಅವಸಾನ ಮುಖಿಯಾಗಿದ್ದ ವೀರಯುಗದ ಮಹಾಕಾವ್ಯವನ್ನೇ ಕಂಡರು. ಈ ವೀರಯುಗದ ಒಳ್ಳೆಯ ಗುಣಗಳು ಅಂದು ಮೂಡುತ್ತಿದ್ದ ಬೂರ್ಷ್ವಾ ಪ್ರಪಂಚದಲ್ಲಿ ಅಪಹಾಸ್ಯದ ಮತ್ತು ಗೇಲಿಯ ವಸ್ತುಗಳಾಗಿದ್ದುವು. ಹಾಗೆಯೇ ಅವರಿಗೆ ಬಾಲ್ಜಾಕ್ ಎಷ್ಟು ಮೆಚ್ಚುಗೆಯಾಗಿದ್ದನೆಂದರೆ, ಅರ್ಥಶಾಸ್ತ್ರವನ್ನು ಕುರಿತು ತಮ್ಮ ಗ್ರಂಥವನ್ನು ಬರೆದು ಮುಗಿಸಿದ ಕೂಡಲೇ, ಅವನ ಮಹಾ ಕೃತಿಯಾದ "ಲಾ ಕಾಮೆಡಿ ಹ್ಯುಮೇನ್" ಅನ್ನು ಕುರಿತು ವಿಮರ್ಶೆಯೊಂದನ್ನು ಬರೆಯಬೇಕೆಂದು ಅವರು ಇಚ್ಛಿಸಿದ್ದರು. ಬಾಲ್ಜಾಕನನ್ನು ಅವರು ತನ್ನ ಕಾಲದ ಇತಿಹಾಸಕಾರನೆಂದು ಮಾತ್ರವಲ್ಲದೆ, ಲೂಯಿ ಫಿಲಿಪ್ಪನ ಫ್ರೆಂಚ್ ರಾಜ ಕಾಲದಲ್ಲಿ ಇನ್ನೂ ಭ್ರೂಣಾವಸ್ಥೆಯಲ್ಲಿಯೇ ಇದ್ದ ಹಾಗೂ ತನ್ನ ಸಾವಿನ ಅನಂತರ ಮೂರನೆಯ ನೆಪೋಲಿಯನ್ನನ ಆಳ್ವಿಕೆಯಲ್ಲಿ ಪೂರ್ಣವಾಗಿ ವಿಕಾಸಗೊಂಡಂಥ ಪಾತ್ರಗಳ ಭವಿಷ್ಯದರ್ಶಿ ಸೃಷ್ಟಿಕರ್ತನೆಂದೂ ಪರಿಗಣಿಸಿದ್ದರು.

ಅಗಾಧವಾದ ಪುಸ್ತಕ -ನಿಧಿಯನ್ನು ಹೊಂದಿದ್ದ ಬ್ರಿಟಿಷ್ ವಸ್ತು ಸಂಗ್ರಹಾಲಯದ ಅದ್ಭುತವಾದ ಆ ವಾಚನಾಲಯದ ನಿರ್ಮಾಣ ಆ ಹೊತ್ತಿಗೆ ತಾನೇ ಮುಗಿದಿತ್ತು; ಪ್ರತಿ ದಿನವೂ ಮಾರ್ಕ್ಸ್ ಅವರು ಅಲ್ಲಿಗೆ ಹೋಗುತ್ತಿದ್ದರು ಹಾಗೂ ನಾವೂ ಹೋಗಬೇಕೆಂದು ಒತ್ತಾಯ ಪಡಿಸುತ್ತಿದ್ದರು.

ಬ್ರಿಟಿಷ್ ವಸ್ತು ಸಂಗ್ರಾಹಲಯದಲ್ಲಿ ಕಾಲ ಕಳೆಯುತ್ತಾ ಮುಂದೆ ನಡೆಯಲಿದ್ದ ಹೋರಾಟಕ್ಕಾಗಿ ಶಸ್ತ್ರಾಸ್ತ್ರ, ಮದ್ದು ಗುಂಡುಗಳನ್ನು ತಯಾರಿಸಲು ಪ್ರಯತ್ನಿಸುತ್ತಿದ್ದೆವು

ಓದು! ಓದು! ಅವರಿಂದ ಆಗಿಂದಾಗ್ಗೆ ಹಾಗೂ ಸಾಕೆನಿಸುವಷ್ಟು ಮಟ್ಟಿಗೆ ನಾವು ಕೇಳುತ್ತಿದ್ದ ಅಸಂದಿಗ್ಧವಾದ ಆದೇಶ ಇದಾಗಿತ್ತು. ಅಲ್ಲದೆ ತಮ್ಮದೇ ಆದ ಉದಾಹರಣೆಯಿಂದ ಮತ್ತು ತಮ್ಮ ಆ ಪ್ರಬಲ ಮೆದುಳಿನ ಸತತ ಕಾರ್ಯಶೀಲತೆಯಿಂದ ಅವರು ಇದನ್ನು ನಮ್ಮ ಮೇಲೆ ಅಚ್ಚೊತ್ತುತ್ತಿದ್ದರು.

ಇತರ ದೇಶಾಂತರ ವಾಸಿಗಳು ಪ್ರತಿ ದಿನವೂ ಜಾಗತಿಕ ಕ್ರಾಂತಿ ನಡೆಸಲು ಯೋಜನೆಗಳನ್ನು ತಯಾರಿಸುತ್ತ ಕುಳಿತಿರುತ್ತಿದ್ದರೆ ಹಾಗೂ

ಪುಟ 12 ಕ್ಕೆ

..........ಸಿಐಟಿಯು ಸಮ್ಮೇಳನ

ಪುಟ 6 ರಿಂದ

ನಡೆಸಿದೆ, ಪ್ರತಿರೋಧ ಒಡ್ಡಿದೆ. ಕಾರ್ಮಿಕರ ಸಮಸ್ಯೆ-ಅವರ ಅವಶ್ಯಕತೆಗಳನ್ನು ಕಂಡುಕೊಳ್ಳುವ ಸಂಘಟನೆ ಸಿಐಟಿಯು. ಈಗ ಇದಕ್ಕೆ ನಾವು ಹೊಸದಾಗಿ ಯೂನಿಯನ್ ಮಾಡುವಲ್ಲಿ ನಮ್ಮ ಶಕ್ತಿಯನ್ನು ತೋರಿಸಿರುವುದು. ಮುಖ್ಯವಾಗಿ ಅಂಗನವಾಡಿ ಸಂಘಟನೆಯಲ್ಲಿ, ಗ್ರಾಮಪಂಚಾಯತ್ ಸಂಘಟನೆಗಳಲ್ಲಿ ಹೋರಾಟಗಳು ಬೆಳೆದು, ಸಂಘಟನೆಯೂ ಪರಿಣಾಮಕಾರಿಯಾಗಿ ವಿಸ್ತರಣೆಯಾಗಿರುವುದನ್ನು ಕಾಣಬಹುದು. ಹಾಗೆ ಹೊಸ ವಿಭಾಗವಾದ (ಕಟ್ಟಡ) ಗುತ್ತಿಗೆ ಕಾರ್ಮಿಕರು, ಸಣ್ಣ ಕೈಗಾರಿಕೆ ಕಾರ್ಮಿಕ ಸಂಘಗಳು ಬೆಳವಣಿಗೆ ಹಂತದಲ್ಲಿವೆ. ಹೀಗಾಗಿ ಎಷ್ಟು ಜನರನ್ನು ಕಳೆದುಕೊಂಡೆವೋ ಅಷ್ಟನ್ನು ಬೇರೆ ವಿಭಾಗದಿಂದ ಪಡೆಯಲು ಸಾಧ್ಯವಾಗಿದೆ.

ಅಖಿಲ ಭಾರತ ಮಟ್ಟದ ಚಳುವಳಿಗಳು...?

1998 ರ ಡಿ. 11, 2000 ಮೇ 11 ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವು ಕರ್ನಾಟಕದಲ್ಲಿ ಸಿಐಟಿಯು ನ ಪಾಲ್ಗೊಳ್ಳುವಿಕೆ ಜೊತೆಗೆ ಇತರ ಕಾರ್ಮಿಕ-ಕಾರ್ಮಿಕೇತರ ಸಂಘಟನೆಗಳ ಭಾಗವಹಿಸುವಿಕೆಯಿಂದ ಯಶಸ್ವಿಯಾಗಿತ್ತು. ಮೊದಲ ಮುಷ್ಕರ ಹೆಚ್ಚು ತಯಾರಿಯಿಂದಾಗಿ ಜನರ ಭಾಗವಹಿಸುವಿಕೆ ಹೆಚ್ಚಿತ್ತು. ಎರಡನೇ ಮುಷ್ಕರದಲ್ಲಿ ಹೆಚ್ಚು ಜನರನ್ನು ಪಾಲ್ಗೊಳಿಸುವಿಕೆಯಲ್ಲಿ ಗಮನ ಸಾಲಲಿಲ್ಲ ಎನ್ನಿಸುತ್ತದೆ. ಆದರೂ ರಾಜ್ಯದ ದುಡಿಯುವ ವರ್ಗ ಹಾಗೂ ಜನತೆ ತೀವ್ರವಾಗಿಯೇ ಪ್ರತಿಕ್ರಯಿಸಿ ಮುಷ್ಕರವನ್ನು ಯಶಸ್ವಿಗೊಳಿಸಿದರು. ಕೇಂದ್ರದ ವಾಜಪೇಯಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಇವು ಮಹತ್ವದ ಮುಷ್ಕರಗಳು.

ಸಮ್ಮೇಳನದಲ್ಲಿ ರಚಿಸಲಾಗಿದ್ದ ವಿವಿಧ ಆಯೋಗಗಳು ಬಹಳ ಆಳವಾಗಿ ಚರ್ಚಿಸಿವೆ. ಅನುಭವ ಹಂಚಿಕೊಂಡಿವೆ. ಅದರಲ್ಲಿ ಸರ್ಕಾರದ LPG ವಿರುದ್ಧ ಪ್ರಬಲ ಹೋರಾಟ ರೂಪಿಸಲು ನಿರ್ಣಯಿಸಿವೆ. ಸಾರ್ವಜನಿಕ ವಲಯದ ಎಲ್ಲಾ ಕೈಗಾರಿಕೆಗಳು ತೀವ್ರಚಳುವಳಿ ರೂಪಿಸುವುದು, ಒಂದು ರಾಜ್ಯಮಟ್ಟದ ಕಾರ್ಯಾಗಾರ ನಡೆಸುವುದು, ವಿವಿಧ ವಿಭಾಗಗಳ ಸಮಾವೇಶಗಳು, ನಿರ್ದಿಷ್ಟವಾಗಿ ಯುವಜನ, ಮಹಿಳಾ ಕಾರ್ಮಿಕರ ಪ್ರಶ್ನೆಗಳಿಗೆ ಗಮನ ನೀಡುವುದು ಜೊತೆಗೆ ಸಾರ್ವಜನಿಕೆ ಪ್ರಶ್ನೆಗಳನ್ನು ದುಡಿಯುವ ಜನರ ಪ್ರಶ್ನೆಗಳೊಂದಿಗೆ ಬೆರೆಸು ಹೋರಾಟ ರೂಪಿಸಲು ಆದ್ಯತೆ ಕೊಡಲಾಗುವುದು.

ದುಡಿಯುವ ವರ್ಗದ ನೇತೃತ್ವ ವಹಿಸಿದ ಸಿಐಟಿಯು ಕೋಮುವಾದವನ್ನು ಯಾವ ರೀತಿ ಎದುರಿಸುತ್ತದೆ?

ಕೋಮುವಾದದ ವಿರುದ್ಧ ಹೋರಾಡಲು ಸಿಐಟಿಯು ಪ್ರಾರಂಭದಿಂದಲೂ ಪ್ರಯತ್ನಿಸಿದೆ. ಬಾಬ್ರಿ ಮಸೀದಿ ಬಿದ್ದಕೂಡಲೇ ಸಿಐಟಿಯು ಸಭೆ ಸೇರಿ ಚರ್ಚಿಸಿತು. ಕೋಮುಸೌಹಾರ್ದತೆ, ರಾಷ್ಟ್ರದ ಐಕ್ಯತೆ-ಜನರ ರಕ್ಷಣೆಗೆ ಧುಮುಕಿತು. ಐಕ್ಯತೆಯಿಂದ ಮಾತ್ರವೇ ಟ್ರೇಡ್ ಯೂನಿಯನ್ ಉಳಿಯಲು ಸಾಧ್ಯ. ದುಡಿಯುವ ಜನರ ಒಗ್ಗಟ್ಟು ಮುರಿಯುವ, ಐಕ್ಯತೆಗೆ ಧಕ್ಕೆ ತರುವ ಕೋಮುವಾದಿ, ಜಾತಿವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಸಿಐಟಿಯು ಕಾರ್ಯಕ್ರಮ ಹಾಕಿಕೊಂಡಿದೆ. ಭಟ್ಕಳ ಹಾಗೂ ಬಾಬಾ ಬುಡನ್‌ಗಿರಿಯಲ್ಲಿ ಕೋಮುದಳ್ಳುರಿ ಉಂಟಾದಾಗ ಸೂಕ್ತ ಸಮಯದಲ್ಲಿ ಸಿ.ಐ.ಟಿ.ಯು. ಮಧ್ಯ ಪ್ರವೇಶಿಸಿದೆ.

ಐಕ್ಯತೆಯನ್ನು ಬಲಗೊಳಿಸುವ ಸಮಯದಲ್ಲಿ ಜನರ ಜ್ವಲಂತ ಸಮಸ್ಯೆಗಳ ಜೊತೆಗೆ ಶೋಷಿತವರ್ಗದ ಸಮಸ್ಯೆ ತೆಗೆದುಕೊಂಡು ಹೋರಾಡಿದಲ್ಲಿ ಮಾತ್ರ ಕೋಮುವಾದವನ್ನು ಸೋಲಿಸಲು ಸಾಧ್ಯ ವಿನಃ ಕೇವಲ ಪ್ರಚಾರದಿಂದಷ್ಟೇ ಅಲ್ಲ. ಕೋಮುವಾದಿಗಳ ಪ್ರಭಾವದಿಂದ ಕಾರ್ಮಿಕ ವರ್ಗವನ್ನು ಹೊರಗೆ ತರಲು ಹೆಚ್ಚು ಪ್ರಯತ್ನ ಬೇಕಿದೆ.

ಸಾಮಾಜಿಕ ಪಿಡುಗುಗಳ ನಿವಾರಣೆಗೆ ನಮ್ಮ ಸಂಘದ ಪ್ರಯತ್ನವೇನು?

ಇದರ ಬಗ್ಗೆ ಸಿಐಟಿಯುಗೆ ಸ್ಪಷ್ಟ ಕಣ್ಣೋಟ ಇದೆ. ಹಿಂದಿನ ಅಖಿಲ ಭಾರತ ಮುಖಂಡರಾದ ಬಿ.ಟಿ.ಆರ್. ಹೇಳುವಂತೆ ಆರ್ಥಿಕ ಬೇಡಿಕೆಗಳಿಗಾಗಿ ಹೋರಾಟ ಮಾಡುವಾಗಲೇ ಸಾಮಾಜಿಕ ಸಮಸ್ಯೆಯನ್ನು ಎತ್ತಿ ಹೋರಾಟ ಮಾಡಬೇಕು. ಯುವಜನರನ್ನು ಕಾಡುವ ನಿರುದ್ಯೋಗ ಸಮಸ್ಯೆ, ಭಯೋತ್ಪಾದನೆ, ಕೋಮುವಾದ, ಜಾತಿ ಸಮಸ್ಯೆ ಹಾಗೂ ದಬ್ಬಾಳಿಕೆ, ಕಂದಾಚಾರ, ಮಹಿಳಾ ಶೋಷಣೆ, ವರದಕ್ಷಿಣೆಯಂಥ ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡಿದೆ. ಆದರೆ ನಮ್ಮ ಪ್ರಯತ್ನಗಳು ತೃಪ್ತಿಕರವಾಗಿಲ್ಲ. ಈ ದಿಕ್ಕಿನಲ್ಲಿ ಚಿಂತನೆ, ಚಟುವಟಿಕೆಗಳು ಹೆಚ್ಚಾಗಬೇಕಿದೆ.

ಸಿಐಟಿಯು ಸಮ್ಮೇಳನದಲ್ಲಿ ಗುರುತಿಸಿದ ಮುಂದಿನ ಗೊತ್ತುಗುರಿ ಏನು?

ಸಿಐಟಿಯು ಅಖಿಲಭಾರತ ಜನರಲ್ ಕೌನ್ಸಿಲ್ ಕೋಝಿಕೋಡ್‌ನ ತೀರ್ಮಾನ ಜಾರಿ ಮಾಡುವುದು. ಖಾಸಗೀಕರಣವನ್ನು ವಿರೋಧಿಸಲು ಸಾರ್ವಜನಿಕ ಉದ್ದಿಮೆಗಳ ಹಾಗೂ ಹಣಕಾಸು ವಲಯಗಳಾದ ಬ್ಯಾಂಕ್, ಎಲ್.ಐ.ಸಿ.ಗಳನ್ನೊಳಗೊಂಡು ಮತ್ತು ರೈಲ್ವೆ, ಅಂಚೆ-ತಂತಿ ನೌಕರರನ್ನೊಳಗೊಂಡ ವಿಶಾಲ ತಳಹದಿಯ ಹೋರಾಟ ರೂಪಿಸುವುದು.

- ಎಲ್ಲಾ ಹಂತಗಳಲ್ಲಿ ಅಧ್ಯಯನ ಕಾರ್ಯಾಗಾರ ನಡೆಸಿ, ಸಮಾವೇಶ ನಡೆಸುವುದು, ಮಹಿಳೆಯರು, ಕಟ್ಟಡ ಕಾರ್ಮಿಕರುಗಳನ್ನು ನಿರ್ದಿಷ್ಟವಾಗಿ ತರಬೇತುಗೊಳಿಸಿ, ಎಲ್ಲರನ್ನು ಕೂಡಿಸಿ ಖಾಸಗೀಕರಣದ ವಿರುದ್ಧ ಹೋರಾಟಕ್ಕೆ ಅಣಿನೆರೆಸುವುದು.
- ಸಾರ್ವಜನಿಕರ ಸಮಸ್ಯೆ ಹಾಗೂ ಕಾರ್ಮಿಕರ ಸಮಸ್ಯೆಗಳನ್ನು ಒಂದುಗೂಡಿಸಿ ಜೊತೆಗೆ ಸಾಗಿಸಿ ಯಶಸ್ವಿ ಹೋರಾಟ ರೂಪಿಸುವುದು.
- ಸಣ್ಣ ಪ್ರಮಾಣದ ಘಟಕಗಳ ಸಮಸ್ಯೆ ತೆಗೆದುಕೊಳ್ಳುವುದು ಉದಾ: ಬೀಡಿಯಂಥ ಉದ್ದಿಮೆಗಳಲ್ಲಿ ಕನಿಷ್ಠ ಕೂಲಿಗಾಗಿ ಹೋರಾಟ.
- ದುಡಿಯುವ ಮಹಿಳಾ ಕಾರ್ಯಕರ್ತರನ್ನು ತರಬೇತುಗೊಳಿಸುವುದು.
- ನಿರುದ್ಯೋಗಿ ಯುವಜನರನ್ನು ಸಂಘಟಿಸಲು ಕ್ರಮವಹಿಸುವುದು.
- ರಾಜ್ಯ ಕೇಂದ್ರವನ್ನು ಬಲಿಷ್ಟಪಡಿಸುವುದು. ಆ ಮೂಲಕ ಜಿಲ್ಲೆ, ಪ್ರದೇಶ ಸಮಿತಿಗಳನ್ನು, ಸಂಘಟನಾ ಸಮಿತಿಗಳನ್ನು ಕ್ರಿಯಾಶೀಲಗೊಳಿಸಲು ಪ್ರಯತ್ನಿಸುವುದು.

ಅಬ್ಬರದ ಅಭಿನಯ, ನಿಷ್ಕ್ರಿಯಗೊಂಡ ಪ್ರೇಕ್ಷಕ

ವೈಶಾಲಿ ಕಾಸರವಳ್ಳಿ

ನಮ್ಮ ಚಿತ್ರಗಳಲ್ಲಿ ಕಂಡು ಬರುವ ಅಭಿನಯ ಶೈಲಿಯ ಬಗ್ಗೆ ಮತ್ತೊಂದು ಆಕ್ಷೇಪ ಇದು. ನಟರು ಎಷ್ಟು ಅಬ್ಬರದ ಸ್ತರದಲ್ಲಿ ಅಭಿನಯಿಸುತ್ತಾರೆಂದರೆ, ಅದು ನಮ್ಮ ಪ್ರೇಕ್ಷಕನನ್ನು ನಿಷ್ಕ್ರಿಯರನ್ನಾಗಿಸಿಬಿಡುತ್ತದೆ ಎನ್ನುವುದು. ಒಂದು ಅಭಿನಯ ಶೈಲಿ ಸೂಕ್ಷ್ಮವಾಗಿದ್ದಾಗ, ಪ್ರೇಕ್ಷಕನೂ ಕ್ರಿಯಾಶೀಲ ಆಗಬೇಕಾಗುತ್ತದೆ. ಆಗ ಸಂವಾದ ಎರಡು ದಿಕ್ಕಿನಿಂದಲೂ ನಡೆಯುತ್ತದೆ. ಸಿನಿಮಾ ನೋಡುವ ಮೂಲಕ ಪ್ರೇಕ್ಷಕನೂ ಬೆಳೆಯುತ್ತಿರುತ್ತಾನೆ ಎನ್ನುವುದು ಆ ಮಾತಿನ ತಾತ್ಪರ್ಯ. ಅದಕ್ಕೆ ಭಿನ್ನವಾಗ ಶೈಲಿಯಲ್ಲಿ ವಾಚಿಕ, ಆಂಗಿಕ, ಆಹಾರ್ಯ, ಸಾತ್ವಿಕ ಅಂಶಗಳನ್ನು ಸೂಚ್ಯವಾಗಿಸಿ, ಪ್ರೇಕ್ಷಕನನ್ನು ಬೇರೆಯೊಂದು ನೆಲೆಯಲ್ಲಿ ಮುಟ್ಟುವ ಪರಿಪಾಠವಿದೆ. ಇದು ಆ ನಟನಿಗೊಂದು ವಿಶಿಷ್ಟತೆ ತಂದುಕೊಡುತ್ತದೆ. ನೀವು ನಮ್ಮ ಸಂದರ್ಭದ ಒಬ್ಬ ಸಂವೇದನಾಶೀಲ ನಟರಾಗಿ ಈ ವಾದವನ್ನು ಒಪ್ಪುತ್ತೀರಾ? ಒಪ್ಪಿದಲ್ಲಿ ಹೇಗೆ ಆ ತಂತ್ರಗಳನ್ನು ಬಳಸಿಕೊಂಡಿದ್ದೀರಿ?

ಉತ್ತರ: ಪ್ರೇಕ್ಷಕನೂ ಕ್ರಿಯಾಶೀಲನಾಗಿ ಭಾಗವಹಿಸಬೇಕು ಎನ್ನುವ ಕಾಳಜಿ ನಮ್ಮ ಚಿತ್ರರಂಗಕ್ಕೆ ಇದೆ ಎನ್ನುತ್ತೀರಾ? ಹಾಗೆ **ಪ್ರೇಕ್ಷಕನೂ ಬೆಳೆಯುತ್ತಾ ಬಂದರೆ ನಮ್ಮಚಿತ್ರಗಳಲ್ಲಿ ಕಂಡುಬರುವ ಹಾಡು, ಕುಣಿತಗಳು ಅಭಾಸ ಎನ್ನಿಸಿ ಅದನ್ನು ತಿರಸ್ಕರಿಸುವುದಿಲ್ಲವೇ? ಹಾಗಾದಾಗ ಕೋಟ್ಯಾಂತರ ರೂಪಾಯಿ ಬಂಡವಾಳ ಹಾಕುವ ನಿರ್ಮಾಪಕರು, ಸವಕಲನ್ನೇ ಹೇಳುತ್ತಿರುವ ಚಿತ್ರಕರ್ತ, ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ಹಳೆಯ ಬಾಣಗಳನ್ನೇ ಎಗ್ಗಿಲ್ಲದೇ ಬಿಡುತ್ತಿರುವ ಪಾತ್ರಧಾರಿಗಳ ಕತೆಏನು?** ಆದ್ದರಿಂದ ಯಥಾಸ್ಥಿತಿ ವಾದಿಯಾಗಿರುವುದೇ ನಮ್ಮ ಆರೋಗ್ಯಕ್ಕೆ ಒಳ್ಳೆಯದು ಎಂದು ನಂಬಿದಂತಿರುವ ಈ ಸ್ಥಿತಿಯಲ್ಲಿ ನಿಮ್ಮ ಪ್ರಶ್ನೆ ಅಪ್ರಸ್ತುತವಲ್ಲವೇ?

ಇರಲಿ, ಆದರೂ ಪ್ರಶ್ನೆಯಾಗಿ ಚೆನ್ನಾಗಿದೆ. ಉತ್ತರಿಸುವ ಪ್ರಯತ್ನ ಮಾಡುತ್ತೇನೆ. ಪ್ರೇಕ್ಷಕ ಎಲ್ಲಿ ನಿಷ್ಕ್ರಿಯನಾಗುತ್ತಾನೆ. ಎಲ್ಲಿ ಕ್ರಿಯಾಶೀಲನಾಗುತ್ತಾನೆ ಎಂದು ಅಳೆಯುವುದು ಕಷ್ಟದ ಕೆಲಸ. ಸಾಯಿ ಪರಾಂಜಪೆಯವರ 'ಸ್ಪರ್ಶ' ಚಿತ್ರ ನೋಡಿದ ನೆನಪಿದೆಯೇ? ನಸೀರುದ್ದೀನ್ ಷಾ ಅದರಲ್ಲಿ ಕುರುಡನೊಬ್ಬನ ಪಾತ್ರ ಮಾಡಿದ್ದಾರೆ. ಕುರುಡರ ಪಾತ್ರ ಕನ್ನಡದಲ್ಲಿ ಅನೇಕರು ಮಾಡಿದ್ದಾರೆ. ಈ ರೀತಿಯ ಅಂಗವೈಕ್ಯಲ್ಯ, ಮನೋವೈಕಲ್ಯ ಇರುವ ಪಾತ್ರಗಳನ್ನು ಮಾಡುವಾಗ ನಮ್ಮ ಪ್ರತಿಭಾವಂತ



ಅಬ್ಬರದ ಅಭಿನಯಕ್ಕೆ ಜ್ವಲಂತ ಉದಾಹರಣೆ

ನಟ ಕಮಲಹಾಸನ್‌ರೂ ಸೇರಿದಂತೆ ಹೆಚ್ಚಿನ ನಟರ ಗಮನ ಇರುವುದು ಅವರ Mannerism ಅನ್ನು ಕಾಪಿ ಮಾಡುವುದರಲ್ಲಿ. ನಮ್ಮ ನಟ-ನಟಿಯರು ವಯಸ್ಸಾದ ಪಾತ್ರಗಳನ್ನು ಮಾಡುವಾಗಲೂ ಅದೇ ಅಪಾಯ ಕಾಣುತ್ತೇವೆ. ನಸೀರುದ್ದೀನ್ ಷಾ, ಸ್ಮಿತಾಪಾಟೀಲರಂಥವರು ಭಿನ್ನವಾಗುವುದು ಇಲ್ಲಿಯೇ ಎಂದು ನಾನು ಭಾವಿಸಿದ್ದೇನೆ. 'ಸ್ಪರ್ಶ' ಚಿತ್ರ ನೋಡುತ್ತಿರುವಾಗ ನಸೀರ್ ಎಲ್ಲಿಯೂ ತಾನು ಎಷ್ಟು ಚೆನ್ನಾಗಿ ಕುರುಡನಂತೆ ಅಭಿನಯಿಸುತ್ತಿದ್ದೇನೆ ಎನ್ನುವತ್ತ ಪ್ರೇಕ್ಷಕನ ಗಮನ ಸೆಳೆಯುವುದಿಲ್ಲ. ಬದಲಾಗಿ ಆ ಕುರುಡುತನ ಆತನಲ್ಲಿ ಹುಟ್ಟಿಸುತ್ತಿರುವ ಹಠ, ಛಲದತ್ತ ಗಮನ ಸೆಳೆಯುತ್ತಾನೆ. ಒಂದು ದೃಶ್ಯದಲ್ಲಿ ಆತನ ಕುರುಡುತನದ ಬಗ್ಗೆ ಯಾರೋ ಪ್ರಸ್ತಾಪ ಮಾಡಿದಾಗ ಅವರ ಆತ್ಮವಿಶ್ವಾಸಕ್ಕೆ ಧಕ್ಕೆ ಬಂದಂತಾಗುತ್ತದೆ. ನಸೀರ್ ಆ ದೃಶ್ಯ ಅಭಿನಯಿಸುವಾಗ ಕುರುಡರಿಗೂ ಆತ್ಮಾಭಿಮಾನ ಇದೆ ಎಂದು ಗ್ರಹಿಸದ, ಆ ಕಣ್ಣಿದ್ದ ಜನರ ಕುರುಡುತನದ ಬಗ್ಗೆ ಒಂದು 'ರ್‍ಯಾಲಿಕ್' ತೋರಿಸುತ್ತಾನೆ. ಇಲ್ಲಿ ಆತ ಏಕಕಾಲಕ್ಕೆ 2ನೇ ಪ್ರಶ್ನೆಯಲ್ಲಿ ಹೇಳಿದಂತೆ ಪ್ರೇಕ್ಷಕನನ್ನು ಭಾವನೆಗಳಿಂದಾಚೆಗಿನ ಸತ್ಯಕ್ಕೆ ಎದುರಾಗಿಸುತ್ತಾನೆ ಹಾಗೂ ತನ್ನನ್ನೇ ಒಮ್ಮೆ ಮುಟ್ಟಿನೋಡಿಕೊಳ್ಳುವಂತೆ ಮಾಡುತ್ತಾನೆ. ಇದು ಪ್ರೇಕ್ಷಕನನ್ನು ಕ್ರಿಯಾಶೀಲರನ್ನಾಗಿ ಮಾಡುವ ಒಂದು ಕ್ರಮ ಎಂದು ನನಗನಿಸುತ್ತೆ.

ಸ್ಮಿತಾ ಪಾಟೀಲರ ಅಭಿನಯ ನೋಡುವಾಗಲೂ ನನಗೆ ಈ ರೀತಿಯ ಅನೇಕ ಅನುಭವಗಳಾಗಿವೆ. ಶ್ಯಾಮ ಬೆನಗಲ್ ನಿರ್ದೇಶನದ 'ಭೂಮಿಕಾ' ಚಿತ್ರದಲ್ಲಿ ಸ್ಮಿತಾಳದು ಅನೇಕ ಗಂಡಸರಿಂದ ಶೋಷಣೆಗೊಳಪಟ್ಟ ಹೆಣ್ಣಿನ ಪಾತ್ರ. ಆದರೆ ಈ ಪಾತ್ರ ನಿರ್ವಹಣೆಯಲ್ಲಿ ಆತ್ಮಾನುಕಂಪವಿಲ್ಲ. ನಿಷ್ಠುರತೆ ಇದೆ. ಯಾವುದೇ ಮಮಕಾರಕ್ಕೊಳಗಾಗದೇ ಪಾತ್ರವನ್ನು ನಮ್ಮೆದುರು ತೆರದಿಟ್ಟಿದ್ದಾರೆ. ಹಾಗಾಗಿ ಆಕೆಯ ಜೀವನದಲ್ಲಿ ಬಂದ ಗಂಡಸರೆಲ್ಲರೂ ಆಕೆಯನ್ನು ಶೋಷಿಸುತ್ತಾ ಹೋಗುವ ದೃಶ್ಯಗಳಲ್ಲಿ ಅದು ಕಾಮೋತ್ತೇಜಕವೂ ಆಗುವುದಿಲ್ಲ - ಅಸಹಾಯಕ ಹೆಣ್ಣೊಬ್ಬಳ ಆಕ್ರಂದನವಾಗಿ ಯೂ ಬರುವುದಿಲ್ಲ. ಬದಲು ಇಡೀ ಸಮಾಜದ ಬಗ್ಗೆ ಒಂದು ಗಾಢ ವಿಷಾದವಾಗಿ ನಮ್ಮನ್ನು ಬಹಳ ತಟ್ಟುತ್ತದೆ. ಚಿತ್ರಮಂದಿರದಲ್ಲಿ ಅತ್ತು ಮನಸ್ಸು ಹಗುರ ಮಾಡಿಕೊಂಡು ಬರಲಾಗುವುದಿಲ್ಲ. ಬದಲು ನಮ್ಮನ್ನು ನಾಲ್ಕಾರು ದಿನ ಕಾಡುತ್ತದೆ. ನಾನು ಕೊಂಚ ಬೆಳೆದೆ ಎನ್ನುವ ಭಾವನೆ ಮೂಡಿಸುತ್ತದೆ.

ಕಿಸುಮಾತಿನಲ್ಲಿ ನನ್ನದೊಂದು ಅನಿಸಿಕೆಯನ್ನು ಹಂಚಿಕೊಂಡುಬಿಡುತ್ತೇನೆ. ಇಲ್ಲಿ ಚೆನ್ನಾಗಿ ಪಾತ್ರ ನಿರ್ವಹಿಸಿದ ಯಶಸ್ಸು ಕೇವಲ ನಟ-ನಟಿಯರಿಗಷ್ಟೇ ಕೊಡುವುದು ಸಾಧ್ಯವಿಲ್ಲ. ಶ್ಯಾಮ ಬೆನಗಲ್ ಹಾಗೂ ಸಾಯಿ

ಪ್ರೇಕ್ಷಕನೂ ಬೆಳೆಯುತ್ತಾ ಬಂದರೆ ನಮ್ಮಚಿತ್ರಗಳಲ್ಲಿ ಕಂಡುಬರುವ ಹಾಡು, ಕುಣಿತಗಳು ಅಭಾಸ ಎನ್ನಿಸಿ ಅದನ್ನು ತಿರಸ್ಕರಿಸುವುದಿಲ್ಲವೇ? ಹಾಗಾದಾಗ ಕೋಟ್ಯಾಂತರ ರೂಪಾಯಿ ಬಂಡವಾಳ ಹಾಕುವ ನಿರ್ಮಾಪಕರು, ಸವಕಲನ್ನೇ ಹೇಳುತ್ತಿರುವ ಚಿತ್ರಕರ್ತ, ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ಹಳೆಯ ಬಾಣಗಳನ್ನೇ ಎಗ್ಗಿಲ್ಲದೇ ಬಿಡುತ್ತಿರುವ ಪಾತ್ರಧಾರಿಗಳ ಕತೆಏನು?

ಪರಾಂಜಪೆಯಂತಹ ಪ್ರತಿಭಾವಂತ ನಿರ್ದೇಶಕರು ಇದ್ದಾರೆ ಎನ್ನುವುದ ಗಮನಿಸಲೇಬೇಕು.

ಕಾರ್ಲ್‌ಮಾರ್ಕ್ಸ್ ಓದು

ಪುಟ 11 ರಿಂದ

ಒಂದೊಂದು ದಿನವೂ ಒಂದೊಂದು ರಾತ್ರಿಯೂ "ನಾಳೆ ಅದು ಆರಂಭವಾಗುತ್ತದೆ" ಎಂಬ ಅಫೀಮಿನಂಥ ಧ್ಯೇಯ ವಾಕ್ಯದಿಂದ ತಮ್ಮನ್ನು ತಾವು ಪ್ರಮತರನ್ನಾಗಿಸಿಕೊಳ್ಳುತ್ತ ಇದ್ದರೆ, ನಾವು ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿ ನಮ್ಮ ಕಾಲವನ್ನು ಕಳೆಯುತ್ತಿದ್ದೆವು, ನಮ್ಮನ್ನು ನಾವು ಸುಶಿಕ್ಷಿತರನ್ನಾಗಿಸಿಕೊಳ್ಳುತ್ತಿದ್ದೆವು ಹಾಗೂ ಮುಂದೆ ನಡೆಯಲಿದ್ದ ಹೋರಾಟಕ್ಕಾಗಿ ಶಸ್ತ್ರಾಸ್ತ್ರಗಳನ್ನೂ, ಮದ್ದು ಗುಂಡುಗಳನ್ನೂ ತಯಾರಿಸಲು ಪ್ರಯತ್ನಿಸುತ್ತಿದ್ದೆವು.

ಅಭಿವ್ಯಕ್ತಿಯ ನಿರ್ದಿಷ್ಟತೆ ಹಾಗೂ ಪರಿಶುದ್ಧತೆಗೆ ಮಾರ್ಕ್ಸ್ ಅವರು ಅತ್ಯಂತ ಹೆಚ್ಚಿನ ಮಹತ್ವ ಕೊಡುತ್ತಿದ್ದರು. ಸ್ವತಃ ತಾವೇ ಗಯಟೆ, ಲೆಸ್ಸಿಂಗ್, ಷೇಕ್ಸ್‌ಪಿಯರ್, ಡಾಂಟೆ ಮತ್ತು ಸರ್ವಾಂಟಿಸ್ ಅವರಲ್ಲಿ ಅತ್ಯುತ್ಕೃಷ್ಟ ಗುರುವರ್ಯರನ್ನು ಅವರು ಕಂಡುಕೊಂಡಿದ್ದರು. ನಿತ್ಯವೂ ಅವರ ಕೃತಿಗಳಲ್ಲಿ ಯಾವುದಾದರೂ ಒಂದು ಭಾಗವನ್ನು ಅವರು ಓದಿಯೇ ತೀರುತ್ತಿದ್ದರು.

ಕಾವ್ಯಮತ್ತು ನಾಟಕ

ಹೆಯ್ನ್ ಮತ್ತು ಗಯಟೆಯವರ ಕೃತಿಗಳು ಅವರಿಗೆ ಕಂಠೋಕ್ತವಾಗಿ ಬಿಟ್ಟಿದ್ದುವು. ತಮ್ಮ ಸಂಭಾಷಣೆಗಳಲ್ಲಿ ಅನೇಕ ವೇಳೆ ಅವರನ್ನು ಉದ್ಧರಿಸುತ್ತಿದ್ದರು; ಎಲ್ಲ ಯೂರೋಪಿನ ಎಲ್ಲಾ ಭಾಷೆಗಳಲ್ಲಿನ ಕವಿಗಳ ಕೃತಿಗಳನ್ನು ತತ್ಪರತೆಯಿಂದ ಓದುವಂಥ ಸಹೃದಯರು ಅವರಾಗಿದ್ದರು. ಪ್ರತಿ ವರ್ಷವೂ ಅವರು ಗ್ರೀಕ್ ಮೂಲದಲ್ಲಿಯೇ ಈಸ್ಕಿಲಸ್‌ನ ಈಸ್ಕಿಲಸ್ (ಕ್ರಿ.ಪೂ. 525-456) ಪ್ರತಿಭಾವಂತ ಗ್ರೀಕ್ ನಾಟಕಕಾರ; ಉತ್ಕೃಷ್ಟ ದುರಂತ ನಾಟಕಗಳ ಕರ್ತೃ- ಸಂಪಾದಕರು ಕೃತಿಗಳನ್ನು ಓದುತ್ತಿದ್ದರು. ಮಾನವ ಜನಾಂಗ ಹಿಂದೆಂದೂ ಸೃಷ್ಟಿಸಿರದಿದ್ದಂಥ ಮಹಾ ನಾಟಕ-ಪ್ರತಿಭೆಗಳೆಂದು ಅವರು ಈಸ್ಕಿಲಸ್ ಮತ್ತು ಶೇಕ್ಸ್‌ಪಿಯರ್ ಅವರನ್ನು ಪರಿಗಣಿಸಿದ್ದರು. ಶೇಕ್ಸ್‌ಪಿಯರನ ಬಗೆಗಿನ ಅವರ ಗೌರವಕ್ಕೆ ಮೇರೆಯೇ ಇಲ್ಲವಾಗಿತ್ತು: ಅವನ ಕೃತಿಗಳ ಸವಿವರ ಅಧ್ಯಯನವನ್ನು ಅವರು ಮಾಡಿಮುಗಿಸಿದ್ದರು. ಅತ್ಯಂತ ಕಡಿಮೆ ಮಹತ್ವದ ಅವನ ಪಾತ್ರಗಳ ಹೆಸರೂ ಅವರಿಗೆ ತಿಳಿದಿದ್ದಿತ್ತು. ಈ ಮಹಾ ಆಂಗ್ಲ ನಾಟಕಕಾರನ ವಿಷಯದಲ್ಲಿ ಅವರ ಇಡೀ ಕುಟುಂಬವೇ ನಿಜವಾಗಿಯೂ ಒಂದು ಆರಾಧಕ ಪಂಥವಾಗಿಬಿಟ್ಟಿತ್ತು. ಅವರ ಮೂವರು ಹೆಣ್ಣು ಮಕ್ಕಳು ಅವನ ಅನೇಕ ಕೃತಿಗಳನ್ನು ಬಾಯಿಪಾಠ ಮಾಡಿಬಿಟ್ಟಿದ್ದರು. 1848ರ ತರುವಾಯ ಇಂಗ್ಲಿಷ್ ಬಗೆಗಿನ ತಮ್ಮ ಪರಿಜ್ಞಾನವನ್ನು ಪರಿಷ್ಕಾರಗೊಳಿಸಿ ಕೊಳ್ಳಬೇಕೆಂದು ಅವರು ಬಯಸಿದಾಗ, ಶೇಕ್ಸ್‌ಪಿಯರನ ಎಲ್ಲ ಮೂಲ ವಾಕ್ಸರಣಿಗಳನ್ನೂ ಹೆಕ್ಕಿ ತೆಗೆದು ವರ್ಗೀಕರಿಸಿಕೊಂಡರು. ವಿಲಿಯಂ ಕಾಬೆಟ್‌ನ (ಕಾಬೆಟ್, ವಿಲಿಯಮ್ (1762-1835) -ಆಂಗ್ಲ ರಾಜಕಾರಣಿ ಮತ್ತು ವೃತ್ತ ಪತ್ರಿಕಾ ಲೇಖಕ; ಬ್ರಿಟಿಷ್ ರಾಜಕೀಯ ವ್ಯವಸ್ಥೆಯ ಜನತಂತ್ರೀಕರಣಕ್ಕಾಗಿ ಹೋರಾಡಿದವರು- ಸಂಪಾದಕ) ವಿವಾದಾತ್ಮಕ ಕೃತಿಗಳ ಒಂದು ಭಾಗದ ವಿಷಯದಲ್ಲಿಯೂ ಅವರು ಹೀಗೆ ಮಾಡಿದರು. ಕಾಬೆಟ್‌ನ ಬಗ್ಗೆ ಅವರು ತುಂಬ ಒಳ್ಳೆಯ ಅಭಿಪ್ರಾಯವನ್ನಿರಿಸಿ ಕೊಂಡಿದ್ದರು. ಡಾಂಟೆ ಮತ್ತು ರಾಬರ್ಟ್ ಬರ್ನ್ಸ್ ಅವರು ಅಚ್ಚುಮೆಚ್ಚಿನ ಕವಿಗಳ ಪಂಕ್ತಿಯಲ್ಲಿ ಸೇರಿದ್ದರು. ಸ್ಕಾಟ್ಲೆಂಡಿನವನಾಗಿದ್ದ ಬರ್ನ್ಸ್ ಕವಿಯ ವಿಡಂಬನೆಗಳನ್ನೋ ಲಾವಣಿಗಳನ್ನೋ ಅವರ ಹೆಣ್ಣು ಮಕ್ಕಳು ವಾಚನ ಮಾಡಿದಾಗ ಅಥವಾ ಹಾಡಿದಾಗ ಅವರು ತುಂಬಾ ಸಂತೋಷದಿಂದ ಅವುಗಳನ್ನು ಕೇಳುತ್ತಿದ್ದರು.

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N. NAGARAJ